ಮಾನವಿಕ ಕರ್ಣಾಟಕ

ಸಂಪುಟ ೧೪ ಸಂಚಿಕೆ ೨

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೮೪

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ' ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು ; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಅವಶ್ಯಕವಾದ ಚಿತ್ರಗಳಿದ್ದರೆ ಅದನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು ; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರ ಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೫೭೦ ೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೧೪ ಸಂಚಿಕೆ ೨

೩೪

ಫೆಬ್ರವರಿ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೮೪

MANAVIKA KARNATAKA, Kannada quarterly of the University of Mysore, Volume 14, Number 2, February 1984, Edited by Dr. B. R. Gopal and Dr. C. M. Muniramappa.

ಪ್ರಧಾನ ಸಂಪಾದಕರು

ಡಾ. ಹಾ. ಮಾ. ನಾಯಕ

ಸಂಪಾದಕರು

ಡಾ. ಬಾ. ರಾ. ಗೋಪಾಲ್

ಡಾ. ಸಿ. ಎಂ. ಮುನಿರಾಮಪ್ಪ

ಪ್ರಕಾಶಕರು

ಕೆ. ಟಿ. ವೀರಪ್ಪ

ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಮುದ್ರಕರು

ಶ್ರೀಲಕ್ಷ್ಮೀ ಮುದ್ರಣಾಲಯ, ರವೆ ಬೀದಿ, 2 ನೇ ಕ್ರಾಸ್, ಮೈಸೂರು - 1

ವಿಷಯ ಸೂಚಿ

ಈ ಸಂಚಿಕೆಯ ಲೇಖಕರು

೧ ಕೆ.ಎಸ್. ರಾಮಕೃಷ್ಣರಾವ್	ತತ್ವಶಾಸ್ತ್ರ ಪ್ರಾಧ್ಯಾಪಕರು (ನಿವೃತ್ತ), ೩೬, ಮೊದಲನೆಯ ಮುಖ್ಯ ರಸ್ತೆ, ಜಯಲಕ್ಷ್ಮೀಪುರಂ, ಮೈಸೂರು–೫೭೦೦೧೨
೨ ಆರ್. ರಾಮಕೃಷ್ಣ	ಉಪಸಂಪಾದಕ, ಕನ್ನಡ ವಿಶ್ವಕೋಶ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು–೫೭೦೦೦೬
೩ ಕೆ. ಯಶೋಧರ	ಅಧ್ಯಾಪಕಿ, ಶಿಕ್ಷಣ ವಿಭಾಗ, ಮಾನಸ ಗಂಗೋತ್ರಿ, ಮೈಸೂರು – ೫೭೦೦೦೬
೪ ಬಿ.ಪಿ. ಬರುವಾ	ಕಾರ್ಯದರ್ಶಿ, ರಾಜಾರಾಮ್‌ಮೋಹನ್ ರಾಯ್ ಗ್ರಂಥಾಲಯ ಪ್ರತಿಷ್ಠಾನ, ಕಲ್ಕತ್ತ
೫ ಬಿ. ನಾಗಪ್ಪ	ಅಧ್ಯಾಪಕ, ಗ್ರಂಥಾಲಯ ವಿಜ್ಞಾನ ವಿಭಾಗ, ಮಾನಸ ಗಂಗೋತ್ರಿ, ಮೈಸೂರು–೫೭೦೦೦೬
೬ ಬಿ.ಎಸ್. ಮಹೇಶ್ವರಪ್ಪ	ಅಧ್ಯಾಪಕ, ಗ್ರಂಥಾಲಯ ವಿಜ್ಞಾನ ವಿಭಾಗ, ಮಾನಸ ಗಂಗೋತ್ರಿ, ಮೈಸೂರು–೫೭೦೦೦೬
೭ ಡಿ. ಎಲ್. ಪಾಟೀಲ	ಪ್ರಾಧ್ಯಾಪಕ, ತತ್ವಶಾಸ್ತ್ರ ವಿಭಾಗ, ಮಹಾರಾಜಾ ಕಾಲೇಜು, ಮೈಸೂರು–೫೭೦೦೦೫
೮ ಕೆ. ಕೇಶವಮೂರ್ತಿ	ಭೌತಶಾಸ್ತ್ರದ ಉಪನ್ಯಾಸ ಶಿಕ್ಷಣ ಸಂಶೋಧಕರು, ಸರ್ಕಾರಿ ಕಿರಿಯ ಕಾಲೇಜು, ಶ್ರೀರಂಗಪಟ್ಟಣ–೫೭೧೪೩೮
೯ ಟಿ. ವಿ. ವೆಂಕಟಾಚಲಶಾಸ್ತ್ರೀ	ಪ್ರವಾಚಕರು, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು–೫೭೦೦೦೬

ಕೆ.ಎಸ್. ರಾಮಕೃಷ್ಣರಾವ್

ಪಾಶ್ಚಾತ್ಯ ತತ್ವಶಾಸ್ತ್ರ-ಸ್ಪಿನೋಜ, ಲೈಬ್ನಿಜ್ ಮತ್ತು ಜಾನ್ ಲಾಕ್

(ಸ್ಪಿನೋಜ—1632-1677)

ಸ್ಪಿನೋಜನು ವಿಚಾರವಾದಿಗಳಲ್ಲಿ ಅತ್ಯುನ್ನತ ಸ್ಥಾನವನ್ನು ಪಡೆದಿದ್ದಾನೆ. ಡೇಕಾರ್ಟ್ ವಿಚಾರವಾದದ ಸ್ಥಾಪಕನಾದರೆ ಸ್ಪಿನೋಜ ವಿಚಾರವಾದವನ್ನು ಅದರ ಅತಿರೇಕಕ್ಕೆ ಕೊಂಡೊಯ್ದು ತನ್ನ ತತ್ವ ನಿರೂಪಣೆಯಲ್ಲಿ ಪರಿಪೂರ್ಣವಾಗಿ ಬಳಸಿಕೊಂಡಿದ್ದಾನೆ. ಇವನು ಮನಸ್ಸು ಮತ್ತು ಶರೀರದ ಸಮಸ್ಯೆಯನ್ನು ಸುಲಭವಾಗಿ ರೂಪಿಸಿ ಅದಕ್ಕೆ ಪರಿಹಾರವನ್ನು ನೀಡಿದುದೂ, ಅಲ್ಲದೇ ಶ್ರೇಷ್ಠವಾದ ನೀತಿಶಾಸ್ತ್ರ ನಿರೂಪಣೆಯನ್ನು ಕೊಟ್ಟಿದ್ದಾನೆ. ಪ್ರಪಂಚದ ಸಮಗ್ರ ಹಾಗೂ ಸಾಮಾನ್ಯ ಜ್ಞಾನವು ವಿಚಾರದಿಂದ ಮಾತ್ರ ಸಾಧ್ಯ ಎಂಬ ಡೇಕಾರ್ಟಿನ ವಾದವನ್ನು ಇವನು ಸಂಪೂರ್ಣವಾಗಿ ಒಪ್ಪುತ್ತಾನೆ. ಸಮಸ್ತ ವಸ್ತುಗಳ ಸಮಗ್ರ ಜ್ಞಾನವನ್ನು ಪಡೆಯುವುದೇ ತತ್ವಶಾಸ್ತ್ರದ ಗುರಿ ಎನ್ನುವ ಸ್ಪಿನೋಜನಿಗೆ ಅಂತಹ ಜ್ಞಾನಗಳಿಕೆಯಲ್ಲಿ ವಿಚಾರ ಒಂದೇ ದಾರಿ ತೋರಿಸಬಲ್ಲುದು ಎಂಬ ನಂಬಿಕೆ ಇದೆ. ರೇಖಾಗಣಿತದಲ್ಲಿ ಸತ್ಯವು ಹೇಗೆ ಪರಸ್ಪರ ಸಾಂಗತ್ಯವನ್ನು ಹೊಂದಿರುವುದೋ ಅದೇ ರೀತಿ ಎಲ್ಲಾ ವಿಚಾರಗಳೂ ಸಾಂಗತ್ಯ ಪಡೆದಿರಲೇಬೇಕೆಂಬುದು ಆತನ ಧೋರಣೆ.

ತತ್ವಶಾಸ್ತ್ರ :

ಸ್ಪಿನೋಜನ ತತ್ವಶಾಸ್ತ್ರದ ಮುಖ್ಯಾಂಶಗಳು ಆತನು ನಿರೂಪಿಸಿದ "ದ್ರವ್ಯ" "ಗುಣ" ಮತ್ತು "ರೂಪ"ಗಳಿಂದ ಕೂಡಿದೆ. ಯಾವುದು ಸ್ವತಂತ್ರವಾದ ಅಸ್ತಿತ್ವವನ್ನು ಹೊಂದಿದೆಯೋ ಅದು ದ್ರವ್ಯ ಎಂಬ ಡೇಕಾರ್ಟಿಯ ಮಾತನ್ನು ಸ್ಪಿನೋಜ ಒಪ್ಪುತ್ತಾನೆ. ದ್ರವ್ಯವೆಂಬುದು ಸ್ವಯಂಪೂರ್ಣವಾದ ಮತ್ತು ತನ್ನ ಅಸ್ತಿತ್ವಕ್ಕೆ ಇತರ ಯಾವುದೇ ವಸ್ತುವನ್ನು ಅವಲಂಬಿಸದ ವಸ್ತುವಾಗಿದೆ. ಈ ಹೇಳಿಕೆಯನ್ನು ಸಂಪೂರ್ಣವಾಗಿ ಪರಿಗಣಿಸಿದ ಸ್ಪಿನೋಜ ಮನಸ್ಸು ಮತ್ತು ಶರೀರಗಳು ಸ್ವತಂತ್ರ ದ್ರವ್ಯಗಳೆಂದು ಹೇಳಿದ ಡೇಕಾರ್ಟಿಯ ಅಭಿಪ್ರಾಯವನ್ನು ಅವನು ಒಪ್ಪುವುದಿಲ್ಲ. ದ್ರವ್ಯದ ನಿರೂಪಣೆಯನ್ನು ಮನಸ್ಸು ಮತ್ತು

ಶರೀರಗಳಿಗೆ ಅನ್ವಯಿಸಲು ಸಾಧ್ಯವಿಲ್ಲದ್ದರಿಂದ ಅವುಗಳನ್ನು ದ್ರವ್ಯಗಳೆಂದು ಪರಿಗಣಿಸಲು ಸಾಧ್ಯವಿಲ್ಲ. ಮನಸ್ಸು ಮತ್ತು ಶರೀರಗಳು ಅತ್ಯುನ್ನತ ದ್ರವ್ಯವಾದ ದೇವರ ಆಧಾರವನ್ನು ಪಡೆದಿದ್ದು ತನ್ನ ಅಸ್ತಿತ್ವಕ್ಕೆ ದೇವರನ್ನು ಅವಲಂಬಿಸುತ್ತವೆ. ದ್ರವ್ಯವೆನ್ನುವುದು ಮತ್ಯಾವುದನ್ನೂ ಅವಲಂಬಿಸಲು ಸಾಧ್ಯವಿಲ್ಲದ್ದರಿಂದ ಮನಸ್ಸು ಮತ್ತು ಶರೀರಗಳು ದ್ರವ್ಯಗಳಲ್ಲ. ಅತ್ಯುನ್ನತವಾದ ದೇವರೊಬ್ಬನೇ ದ್ರವ್ಯ, ಇದೊಂದೇ ಪೂರ್ಣಸತ್ಯ. ವಿಚಾರ ಮತ್ತು ವಿಸ್ತೃತೆಗಳು ದ್ರವ್ಯವಾಗಿರದೇ, ಏಕೈಕ ದ್ರವ್ಯವಾದ ದೇವರನ್ನು ಅವಲಂಬಿಸುವ ಅಂಶಗಳಾಗಿವೆ.

ದ್ರವ್ಯವು ಸ್ವಾವಲಂಬಿಯಾದರೂ ಅದು ಗುಣಗಳನ್ನು ಹೊಂದಿರಲೇಬೇಕು. ಗುಣಗಳಿಲ್ಲದೆ ದ್ರವ್ಯವಿಲ್ಲ, ದ್ರವ್ಯವಿಲ್ಲದೆ ಗುಣಗಳಿಲ್ಲ. ಸ್ಪಿನೋಜನ ಏಕೈಕ ದ್ರವ್ಯವಾದ ದೇವರು ಅನೇಕ ಗುಣಗಳನ್ನು ಹೊಂದಿದ್ದರೂ, ನಮಗೆ ವಿಚಾರ ಮತ್ತು ವಿಸ್ತೃತೆಗಳು ಎಂಬ ಎರಡು ಗುಣಗಳು ಮಾತ್ರ ತಿಳಿದಿವೆ. ಅಂದರೆ ಶರೀರ ಮತ್ತು ಮನಸ್ಸುಗಳು ಮಾತ್ರ ನಮಗೆ ತಿಳಿದಿರುವ ಎರಡು ಗುಣಗಳಾಗಿವೆ. ಅದ್ವೈತವಾದಕ್ಕೊಳಪಟ್ಟ ಸ್ಪಿನೋಜನ ತತ್ವಮೀಮಾಂಸೆಯು ದೇವರೊಬ್ಬನೇ ಸರ್ವಸತ್ಯ ಎಂದು ಸಾಧಿಸುತ್ತದೆ. ಪ್ರಪಂಚದ ಸಮಸ್ತ ವಸ್ತುಗಳು ಈ ಒಂದು ಸತ್ಯವನ್ನೇ ಅವಲಂಬಿಸಿರಬೇಕಾಗುತ್ತದೆ. ಆದ್ದರಿಂದ ನಮ್ಮ ಗಮನಕ್ಕೆ ಬರುವ ಅಸಂಖ್ಯಾತ ವಸ್ತುಗಳಾವುವೂ ಸ್ವತಂತ್ರವಾದುವುಗಳಾಗಿರದೆ ಒಬ್ಬನೇ ದೇವರ ವಿವಿಧರೂಪಗಳಾಗಿವೆ. ಈ ರೂಪಾಂತರಗಳು ಭೌತವಸ್ತುಗಳಾಗಿರಬಹುದು ಅಥವಾ ಮಾನಸಿಕ ಕಲ್ಪನೆ ಅಥವಾ ಭಾವನೆಗಳಾಗಿರಬಹುದು.

ಸ್ಪಿನೋಜನ ಪ್ರಕಾರ ಒಂದೇ ಆದ ದ್ರವ್ಯಕ್ಕೂ ಅದರ ಅಸಂಖ್ಯಾತ ರೂಪಗಳಿಗೂ ನಡುವಿರುವ ಸಂಬಂಧವು ಒಂದು ರೀತಿಯ ತಾರ್ಕಿಕ ಅಥವಾ ಗಣಿತದ ಅವಶ್ಯಕತೆಯಂತಿದೆ. ಒಂದು ತ್ರಿಕೋನವು ಹೇಗೆ ಅವಶ್ಯಕವಾಗಿ ಮೂರು ಕೋನಗಳಿಂದ ಕೂಡಿರುವುದೇ ಅಲ್ಲದೆ ಆ ಕೋನಗಳ ಮೊತ್ತವು ಎರಡು ಸಮಕೋನಗಳಾಗಬೇಕೋ, ಅದೇ ರೀತಿ ದ್ರವ್ಯವೆಂದರೆ ಅದರ ಗುಣ ಮತ್ತು ರೂಪಗಳು ಅದರಲ್ಲಿ ಅಡಗಿರಲೇ ಬೇಕು. ಇವುಗಳಲ್ಲಿ ಒಂದಕ್ಕೆ ಮತ್ತೊಂದರ ಸಂಬಂಧ ಮತ್ತು ಅವಶ್ಯಕತೆ ಇರುವುದಲ್ಲದೆ ಅವು ಪರಸ್ಪರ ಆಧಾರ ಭೂತವೂ ಆಗಿವೆ. ದೇವರೆಂಬ ತತ್ವವಿದ್ದರೆ ಸರಿ, ಅದರ ಆಧಾರವನ್ನು ಪಡೆದಿರುವ ಪ್ರಪಂಚ ಮತ್ತು ಅದರ ವಿಭಿನ್ನತೆಗಳು ಇರಲೇಬೇಕು. ಯಾವ ರೀತಿಯಲ್ಲಿ ಆಧಾರ ವಾಕ್ಯಗಳಿಂದ ನಿಗಮನದ ತೀರ್ಮಾನ ಬರಲೇಬೇಕೋ ಅದೇ ರೀತಿ ದೇವರೆಂಬ ಸತ್ಯದಿಂದ ಪ್ರಪಂಚ ಮತ್ತು ಅದರ ವಸ್ತುಗಳು ಬರಲೇಬೇಕು. ಯಾವ ರೀತಿ ನಮ್ಮ ಆತ್ಮವು ಸಂಬಂಧಿಸಿದೆಯೋ ಅಥವಾ ಆಧಾರವಾಗಿದೆಯೋ ಅದೇ ರೀತಿಯ ಸಂಬಂಧ ದೇವರು ಮತ್ತು ಪ್ರಪಂಚದ ನಡುವೆ ಇದೆ. ಅಂದರೆ ಪ್ರಪಂಚದ ಸರ್ವ ವಸ್ತುಗಳು ಮತ್ತು ಚೈತನ್ಯಗಳು ದೇವರಲ್ಲೇ ಅಡಗಿದೆ ಎಂದರ್ಥ. ದೇವರೇ ಪ್ರಪಂಚವಾಗಿದ್ದಾನೆ ಎಂಬ ಸ್ಪಿನೋಜನ ಈ ಅದ್ವೈತ ಸಿದ್ಧಾಂತವನ್ನು "ಜಗದೀಶ್ವರವಾದ" (Pantheism) ಎಂದು ಕರೆಯುತ್ತಾರೆ.

ಸ್ಪಿನೋಜನ ತತ್ವ ಸಿದ್ಧಾಂತವನ್ನು ಒಪ್ಪಿದರೆ ಶರೀರ ಮತ್ತು ಮನಸ್ಸಿಗೆ ಸಮಸ್ಯೆ ಉದ್ಭವವಾಗುವುದೇ ಇಲ್ಲ. ಶರೀರ ಮತ್ತು ಮನಸ್ಸುಗಳು ಸ್ವತಂತ್ರ ದ್ರವ್ಯಗಳಾಗಿರದೆ ಒಂದೇ ದ್ರವ್ಯವಾದ ದೇವರ ಗುಣಗಳಾಗಿವೆ. ನಾವು ನೋಡುವ ಪ್ರತಿಯೊಂದು ರೂಪಾಂತರವೂ ಆಲೋಚನೆ ಮತ್ತು ವಿಸ್ತೃತೆಗಳ ವಿವಿಧ ರೂಪಗಳಾಗಿವೆ. ವಿಸ್ತೃತೆ ಪಡೆದಿರುವ ಶರೀರವು ಪರಮಾತ್ಮನ ಭೌತ ವಿಭಾಗವಾದರೆ, ಚೈತನ್ಯ ಮತ್ತು ಮನಸ್ಸು ಅದರ ವಿಚಾರ ವಿಭಾಗವಾಗಿವೆ. ಶಾರೀರಕ ಮತ್ತು ಮಾನಸಿಕ ಕ್ರಿಯೆಗಳು ಪರಸ್ಪರ ಯಾವುದೇ ರೀತಿಯ ಸಂಬಂಧವನ್ನು ಹೊಂದಿರದೆ ಬೇರೆ ಬೇರೆಯಾಗಿದೆ. ಆದರೆ ಅವೆರಡೂ ಒಂದೇ ದ್ರವ್ಯದ ವಿಭಾಗಗಳಾಗಿರುವುದರಿಂದ ಎಲ್ಲಿ ಮಾನಸಿಕ ಕ್ರಿಯೆ ಇರುತ್ತದೋ ಅಲ್ಲಿ ಅದಕ್ಕೆ ಸಮಾನಾಂತರವಾದ ಶಾರೀರಕ ಕ್ರಿಯೆಯು ಇರುತ್ತದೆ. ಆದುದರಿಂದಲೇ ಮನಸ್ಸು ಮತ್ತು ಶರೀರಗಳು ಪರಸ್ಪರ ಪ್ರಕ್ರಿಯೆಯನ್ನು ಹೊಂದಿರುವಂತೆ ಭಾಸವಾಗುವುದಲ್ಲದೆ, ವಾಸ್ತವವಾಗಿ ಅವುಗಳ ನಡುವೆ ನೇರ ಪ್ರಕ್ರಿಯೆ ನಡೆಯುವುದಿಲ್ಲ ಎನ್ನುವ ಸ್ಪಿನೋಜನ ಸಿದ್ಧಾಂತವನ್ನು "ಸಮಾನಾಂತರವಾದ" ಎಂದು ಕರೆಯುತ್ತಾರೆ. ಈ ಸಮಾನಾಂತರ ವಾದವು ಶರೀರ ಮತ್ತು ಮನಸ್ಸಿನ ಪ್ರಕ್ರಿಯೆಯ ಮೂಲಸಮಸ್ಯೆಯನ್ನೇ ಕಿತ್ತುಹಾಕುವುದರಿಂದ ಡೇಕಾರ್ಟೆಯ ತತ್ವಶಾಸ್ತ್ರದ ಮುಂದಿಟ್ಟ ಸಮಸ್ಯೆಯನ್ನೇ ನಿವಾರಿಸಿದಂತಾಗುತ್ತದೆ.

ರೂಪ ಸಿದ್ಧಾಂತ

ಸ್ಪಿನೋಜನ ಅಭಿಪ್ರಾಯದಲ್ಲಿ ಏಕೈಕ ದ್ರವ್ಯವಾದ ದೇವರ ಅಸಂಖ್ಯಾತ ಗುಣಗಳಲ್ಲಿ ವಿಸ್ತೃತೆ ಅಥವಾ ಭೌತ ವಸ್ತುಗಳು ಮತ್ತು ಆಲೋಚನೆ ಅಥವಾ ಮನಸ್ಸು ಈ ಎರಡು ಗುಣಗಳು ಮಾತ್ರ ನಮಗೆ ತಿಳಿದವುಗಳಾಗಿವೆ. ನಮಗೆ ತಿಳಿದಿರುವ ಗುಣಗಳು ಇವೆರಡೇ ಆದರೂ ಇವುಗಳಿಂದ ಉದ್ಭವಿಸುವ ಹಲವಾರು ರೂಪಗಳು ಈ ಪ್ರಪಂಚದಲ್ಲಿರುವುದು ನಮಗೆ ಗೋಚರವಾಗುತ್ತದೆ. ದ್ರವ್ಯದ (ದೇವರ) ಆಂತರಿಕ ಬದಲಾವಣೆಗಳಿಂದ ಈ ಅಸಂಖ್ಯಾತ ರೂಪಗಳುಂಟಾಗುತ್ತವೆ. ಆದರೆ ಈ ರೂಪಗಳಲ್ಲಿಯೂ ಆಲೋಚನೆ ಮತ್ತು ಭೌತವಸ್ತುವಿನ ಭಿನ್ನ ಭಿನ್ನವಾದ ಬೆಳವಣಿಗೆ ಕಂಡುಬರುತ್ತದೆ. ಇಲ್ಲಿಯೂ ಸಮಾನಾಂತರದ ವ್ಯವಸ್ಥೆ ಅನುಸರಿಸಲ್ಪಡುತ್ತದೆ. ಮಾನಸಿಕ ರೂಪಗಳು ಕಲ್ಪನೆ ಮತ್ತು ಭಾವನೆಗಳಿಂದ ಕೂಡಿರುತ್ತವೆ. ಇದಕ್ಕೆ ಸಮಾನಾಂತರವಾದ ಭೌತ ರೂಪಗಳು ಅಸಂಖ್ಯಾತ ವಸ್ತುಗಳಿಂದ ಕೂಡಿವೆ. ಮಾನಸಿಕ ರೂಪಗಳು ಅಗೋಚರವಾಗಿವೆ. ಆದರೆ ಭೌತವಸ್ತುಗಳ ಇರುವಿಕೆಯ ಅರಿವು ಅವುಗಳ ಕಲ್ಪನೆಗಳ ಮೂಲಕ ಉಂಟಾಗುತ್ತದೆ. ಒಬ್ಬ ವ್ಯಕ್ತಿಯಲ್ಲಿ ಕಂಡುಬರುವ ಶರೀರ ಮತ್ತು ಮನಸ್ಸುಗಳು ಶಾಶ್ವತವಾದ ಒಂದೇ ದ್ರವ್ಯದ ರೂಪಾಂತರಗಳಾದರೂ ಅವು ಶಾಶ್ವತವಲ್ಲ. ಅನಂತವಾದ ಮತ್ತು ಶಾಶ್ವತ ದ್ರವ್ಯವಾದ ದೇವರು ಅನೇಕ ರೀತಿಯಲ್ಲಿ ರೂಪಾಂತರಗಳನ್ನು ಕೊಡುತ್ತಾನೆ. ರೂಪಾಂತರಗಳು ತಾತ್ಕಾಲಿಕವಾದರೂ ದ್ರವ್ಯದ ಪ್ರಾಮುಖ್ಯ ಗುಣಗಳಾದ ಭೌತವಸ್ತು

ಮತ್ತು ಮನಸ್ಸು ಶಾಶ್ವತವಾದವುಗಳಾಗಿವೆ. ಈ ಗುಣಗಳು ದ್ರವ್ಯದಲ್ಲಿ ಒಂದು ಕಡೆ ವ್ಯವಸ್ಥಿತ ಶರೀರಗಳಾಗಿಯೂ ಮತ್ತೊಂದು ಕಡೆ ವ್ಯವಸ್ಥಿತ ಪ್ರಜ್ಞೆಯಾಗಿಯೂ ಇದ್ದು ಅವು ಅನಂತವಾಗಿವೆ. ವ್ಯವಸ್ಥಿತವಾಗಿ ವೃದ್ಧಿ ಹೊಂದಿದ ರೂಪಗಳಲ್ಲಿ ದ್ರವ್ಯ ಗುಣಗಳಿಗನುಗುಣವಾದ ಚಲನೆ ಮತ್ತು ಜಡತ್ವ ಎಂಬ ಎರಡು ಹಂತಗಳಿರುತ್ತವೆ. ದ್ರವ್ಯವಾದ ದೇವರ ಅನಂತ ಬುದ್ಧಿಶಕ್ತಿ ಹಾಗೂ ಆ ದ್ರವ್ಯದ ಗುಣಗಳಾದ ಚಲನಶಕ್ತಿ ಮತ್ತು ಜಡತ್ವಗಳು ಒಟ್ಟು ಸೇರಿ ಈ ಪ್ರಪಂಚವಾಗಿದೆ. ಈ ಪ್ರಪಂಚವು ಬಾಹ್ಯದಲ್ಲಿ ಯಾವ ಬದಲಾವಣೆಯನ್ನೂ ಹೊಂದದೆ ಏಕಸ್ಥಿತಿಯಲ್ಲಿರುತ್ತದೆ. ಆದರೆ ಅದರ ಆಂತರಿಕ ಘಟಕಗಳಾದ ಪ್ರಜ್ಞೆ ಮತ್ತು ಜಡತ್ವಗಳು ದ್ರವ್ಯದೊಳಗೆ ಬದಲಾವಣೆ ಹೊಂದುತ್ತಾ ಇರುತ್ತವೆ.

ನಮ್ಮ ಅನುಭವಕ್ಕೆ ಸಿಗುವ ವಿಶಿಷ್ಟಗಳಾದ ಹಾಗೂ ಮಿತಿಗೊಳಪಟ್ಟಿರುವ ಭೌತ ಹಾಗೂ ಮಾನಸಿಕ ರೂಪಗಳು ದ್ರವ್ಯವಾದ ದೇವರ ನೇರವಾದ ಪರಿಣಾಮವಲ್ಲ. ಅಂದರೆ ಅತ್ಯುನ್ನತವಾದ ದೇವರ ಮತ್ತು ನಮ್ಮ ಅನುಭವಕ್ಕೆ ಸಿಗುವ ವಿಶಿಷ್ಟ ರೂಪಗಳ ನಡುವೆ ಅಸಂಖ್ಯಾತ ಹಂತಗಳ ಅಂತರವಿದೆ. ನಮ್ಮ ಅನುಭವಕ್ಕೆ ಸಿಗುವ ಒಂದು ವಸ್ತುವು ತಾನು ಸ್ವತಃ ಒಂದು ಮಿತಿಗೊಳಪಟ್ಟಿರುವುದಲ್ಲದೇ ಅದು ಮತ್ತೊಂದು ಮಿತಿಗೊಳಪಟ್ಟ ವಿಶಿಷ್ಟ ವಸ್ತುವಿನ ಪರಿಣಾಮವಾಗಿದೆ. ಆದರೆ ಮುಂದೆ ಇದೇ ವಸ್ತು ಮತ್ತೊಂದು ವಿಶಿಷ್ಟ ವಸ್ತುವಿಗೂ ಕಾರಣವಾಗುತ್ತದೆ. ಅಂದರೆ ಅತ್ಯಂತ ಸೂಕ್ಷ್ಮವಾದ ರೂಪಾಂತರ ಮತ್ತು ದ್ರವ್ಯದ ನಡುವೆ ಕಾರ್ಯಕಾರಣ ನಿಯಮದ ಒಂದು ದೊಡ್ಡ ಸರಣಿಯೇ ಇದೆ. ಆದರೆ ಈ ಇಡೀ ಸರಣಿಯ ವಿಭಾಗಗಳೆಲ್ಲವೂ ದೇವರ ರೂಪಾಂತರಗಳಾಗಿವೆ. ಆದುದ ರಿಂದ ಸ್ಪಿನೋಜನ ದೃಷ್ಟಿಯಲ್ಲಿ ದೇವರೇ ಜಗತ್ತು, ಜಗತ್ತೇ ದೇವರು. ನಿಯಮಿತವಾದ ಮತ್ತು ಅಪರಿಪೂರ್ಣವಾದ ನಮ್ಮ ಮನಸ್ಸಿಗೆ ಮತ್ತು ಅದರ ಕಲ್ಪನೆಗೆ ಪ್ರಕೃತಿಯು ಬೇರೆ ಬೇರೆಯಾದ ವಸ್ತುಗಳನ್ನು ಹೊಂದಿರುವಂತೆ ಕಾಣುತ್ತದೆ. ಈ ತೋರಿಕೆಗೆ ನಮ್ಮ ತಿಳುವಳಿಕೆಯ ಅಪರಿಪೂರ್ಣತೆಯೇ ಕಾರಣ.

ಸ್ಪಿನೋಜನ ಪೂರ್ವನಿರ್ಧಾರಿತವಾದ ಮತ್ತು ಜಡತತ್ವವಾದ

ವಿಶ್ವದೇವತಾವಾದಿಯಾದ ಸ್ಪಿನೋಜನು ಪ್ರಪಂಚದ ಎಲ್ಲ ಆಗುಹೋಗುಗಳ ಲ್ಲಿಯೂ ಪರಮಾತ್ಮನನ್ನು ಕಂಡನು. ಸರ್ವವೂ ದೇವರು ಎಂದು ಹೇಳಿದ ಸ್ಪಿನೋಜ ನನ್ನು ದೇವೋನ್ಮತ್ತನಾದ ವ್ಯಕ್ತಿ ಎಂದು ಕರೆಯಲಾಗಿದೆ. ದೇವರ ಕಲ್ಪನೆಯಲ್ಲಿ ಆತನು ಎಷ್ಟೇ ಸುಧಾರಿತ ಸಿದ್ಧಾಂತವನ್ನು ನೀಡಿದ್ದರೂ ಆತನನ್ನು ನಿಶ್ಚಿತ ಸಿದ್ಧಾಂತವಾದಿ ಯೆಂದು, ಜಡತತ್ವವಾದಿ ಎಂದು ಪರಿಗಣಿಸಿ ಟೀಕಿಸಲಾಗಿದೆ. ಅವನ ತತ್ವ ವಿಚಾರಗಳು ಅನಿವಾರ್ಯವಾಗಿ ನಿಶ್ಚಿತವಾದವನ್ನು ಅಥವಾ ಯಾಂತ್ರಿಕತೆಯನ್ನು ಪ್ರತಿಪಾದಿಸುವುದೇ ಇದಕ್ಕೆ ಕಾರಣ.

ಸ್ಪಿನೋಜ ತನ್ನ ತತ್ವನಿರೂಪಣೆಯನ್ನು ರೇಖಾಗಣಿತದ ಆಧಾರದಿಂದ ರೂಪಿಸಿ ದೇವರೆಂಬ ದ್ರವ್ಯವು ಅನಿವಾರ್ಯವಾಗಿ ಅದಕ್ಕನುಗುಣವಾದ ಗುಣ ಮತ್ತು ರೂಪಗಳನ್ನು ಹೊಂದಿರುವುದಾಗಿ ವಿವರಿಸುತ್ತಾನೆ. ಪ್ರಪಂಚದ ಸರ್ವವಸ್ತುಗಳ ಸೃಷ್ಟಿಗೆ ಅವುಗಳ ಪೂರ್ವಭಾವಿ ಅಂಶಗಳೇ ಕಾರಣ ಎಂಬುದು ಸ್ಪಿನೋಜನ ವಿಚಾರ. ಅಂದರೆ ಒಂದು ವಸ್ತುವಿನ ಅಸ್ತಿತ್ವಕ್ಕೆ ಅದರ ಪೂರ್ವಿಕ ಕಾರಣವು ಅನಿವಾರ್ಯವಾಗಿ ಅಪೇಕ್ಷಿತವಾಗಿದೆ. ಸ್ಪಿನೋಜನ ಪ್ರಕಾರ ಈ ಅಂಶವು ಇಡೀ ಜಗತ್ತಿನ ಇರುವಿಕೆಗೂ ಅನ್ವಯಿಸಲ್ಪಟ್ಟಿದ್ದು ದೇವರೇ ಈ ಪ್ರಪಂಚಕ್ಕೆ ಕಾರಣನೆಂದು ಪರಿಗಣಿಸಲ್ಪಡುತ್ತಾನೆ. ಈ ದೃಷ್ಟಿಯಿಂದ ಜಗತ್ತು ಪರಮಾತ್ಮನ ಪರಿಣಾಮವಾಗಿದೆ. ಪ್ರಪಂಚದ ಪ್ರತಿಯೊಂದು ವಸ್ತುವು ಈ ಕಾರ್ಯ–ಕಾರಣ ಸಂಬಂಧಕ್ಕೆ ಒಳಗಾಗಿದೆ. ಜಗತ್ತನ್ನು ಪರಿಶೀಲಿಸಿದರೆ ಅದರಲ್ಲಿ ಕಾರ್ಯ–ಕಾರಣಗಳ ಅನಂತ ಸರಣಿಯನ್ನೇ ಕಾಣಬಹುದು. ವಿಶ್ವದ ವಿಶಿಷ್ಟಗಳು ಅಸಂಖ್ಯಾತ ವಾಗಿದ್ದು ಬೇರೆ ಬೇರೆಯಾಗಿ ಕಂಡುಬಂದರೂ ಅವುಗಳ ನಡುವೆ ಪರಸ್ಪರ ಸಂಬಂಧ ವಿದ್ದೇ ಇದೆ. ಈ ಅಸಂಖ್ಯಾತ ವಸ್ತುಗಳು ಏಕಸತ್ಯವಾದ ದೇವರಿಂದ ಉಂಟಾದುದೇ ಈ ಸಂಬಂಧಕ್ಕೆ ಕಾರಣ. ಈ ಜಗತ್ತು ಪರಮಾತ್ಮನ ಪರಿಣಾಮವಾಗಿರುವುದರಿಂದ ಆತನೊಬ್ಬನೇ ತತ್ವತಃ ಸತ್ಯ ಹಾಗೂ ಉಳಿದ ವಸ್ತುಗಳೆಲ್ಲವೂ ಈ ಸತ್ಯವನ್ನು ಅವಲಂಬಿಸಿರುತ್ತವೆ. ಯಾವುದೇ ವಸ್ತುವಿಗಾಗಲಿ, ಜೀವಿಗಾಗಲಿ ಸ್ವಂತ ಇಚ್ಛೆ ಇರಲು ಸಾಧ್ಯವಿಲ್ಲ. ಅವುಗಳೆಲ್ಲವೂ ಪೂರ್ವಭಾವಿಯಾಗಿ ನಿರ್ಧರಿಸಿದ ನಿಯಮದಿಂದ ಕ್ರಿಯಾತ್ಮಕವಾಗಿರುತ್ತವೆ. ಈ ಪೂರ್ವಭಾವಿ ನಿಯಮದ ನಿಯಂತ್ರಕನು ದೇವರು. ಆದುದರಿಂದ ಆತನೊಬ್ಬನೇ ಸರ್ವತಂತ್ರ ಸ್ವತಂತ್ರನು, ಇನ್ನಾವುದೂ ಸ್ವತಂತ್ರವಲ್ಲ.

ಪ್ರಪಂಚದ ಪ್ರತಿಯೊಂದು ವಸ್ತುವೂ ಪರಮಾತ್ಮನನ್ನು ಅವಲಂಬಿಸಿದ್ದು ಅವನಿಂದಲೇ ಉಂಟಾದುದಾದರೆ ಪಾಪ ಮತ್ತು ಕೆಡಕುಗಳು ಹೇಗೆ ಉತ್ಪನ್ನವಾದವು ಎಂಬ ಸಮಸ್ಯೆ ಮುಂದೆ ಬರುತ್ತದೆ. ಸಂಪೂರ್ಣನು, ಸರ್ವಜ್ಞನು, ದಯಾಮಯನು ಆದ ದೇವರು ಈ ಕೆಡಕುಗಳಿಗೆ ಕಾರಣನಾಗಲು ಸಾಧ್ಯವೇ ? ಎಂಬ ಪ್ರಶ್ನೆ ನೀತಿಶಾಸ್ತ್ರದಲ್ಲಿ ಅತ್ಯಂತ ಗಮನ ಸೆಳೆಯುವ ಪ್ರಶ್ನೆಯಾಗುತ್ತದೆ. ಈ ಸಮಸ್ಯೆಯನ್ನು ಸ್ಪಿನೋಜನು ಬಹಳ ಸರಳವಾಗಿ ನಿವಾರಿಸುತ್ತಾನೆ. ಅವನ ಪ್ರಕಾರ ಒಳಿತು ಕೆಡಕುಗಳು ಕೇವಲ ತೋರಿಕೆಯ ರೂಪಗಳಾಗಿದ್ದು ಇವುಗಳು ಉಂಟಾಗಲು ನಮ್ಮ ಅಜ್ಞಾನವೇ ಕಾರಣ. ಪರಮಾತ್ಮನ ದೃಷ್ಟಿಯಿಂದ ಅಂದರೆ ಸಮರ್ಪಕವುಳ್ಳ ಪರಿಪೂರ್ಣದ ಜ್ಞಾನದ ಮೂಲಕ ನಾವು ಜಗತ್ತನ್ನು ವೀಕ್ಷಿಸಿದರೆ ಅದು ಶ್ರೇಷ್ಠವಾಗಿಯೂ, ದೋಷರಹಿತವಾಗಿಯೂ ಕಾಣಬಹುದು. ನಮ್ಮ ದೃಷ್ಟಿಯೇ ದೋಷಪೂರಿತವಾಗಿರುವುದರಿಂದ ಒಳಿತು ಕೆಡಕುಗಳ ವಿರೋಧವನ್ನು ಕೃತಕವಾಗಿ ಕಾಣುತ್ತೇವೆ. ಸ್ಪಿನೋಜನ ಈ ವಿವರಣೆಯು ಶಂಕರಾಚಾರ್ಯರ ಅದ್ವೈತದ ಮಾಯಾವಾದವನ್ನು ಹೋಲುತ್ತದೆ. ಇದೇ ಜಗತ್ತೇ ದೇವರಾಗಿದ್ದು ಇಲ್ಲಿಯ ವಸ್ತುಗಳು ತೋರಿಕೆಯ ಸತ್ಯತೆಯನ್ನು ಮಾತ್ರ ಪಡೆದವುಗಳಾಗಿವೆ.

ನೀತಿ ಸಿದ್ಧಾಂತ :

ಧಾರ್ಮಿಕ, ತಾತ್ತ್ವಿಕ ಮತ್ತು ನೈತಿಕ ಪ್ರಕೃತಿಗಳ ಸಮಗ್ರ ಸಂಯೋಜನೆಯೇ ಸ್ಪಿನೋಜನ ನೀತಿಶಾಸ್ತ್ರದ ಮುಖ್ಯ ಉದ್ದೇಶ. ಈ ವಿವಿಧ ಅಂಶಗಳ ಪರಸ್ಪರ ಸಮನ್ವಯವೇ ಪರಮಾತ್ಮನ ಜ್ಞಾನ. ಇದೇ ಸರ್ವೋತ್ಕೃಷ್ಟ ಜ್ಞಾನವೆಂದು ಆತನ ಹೇಳಿಕೆ. ಸಾಮಾನ್ಯವಾಗಿ ನೀತಿಶಾಸ್ತ್ರದ ಮುಖ್ಯ ಸಮಸ್ಯೆಯು ಮಾನವನ ಜೀವಿತದ ಸರ್ವೋತ್ಕೃಷ್ಟ ಧ್ಯೇಯ ಯಾವುದು ? ಅದನ್ನು ಪಡೆಯುವ ರೀತಿ ಏನು ? ಸದ್ಗುಣವೆಂದರೇನು ? ಎಂಬ ಪ್ರಶ್ನೆಗಳನ್ನೊಳಗೊಂಡಿರುತ್ತದೆ. ಸ್ಪಿನೋಜನ ಪ್ರಕಾರ ಪರಮಾತ್ಮನ ಜ್ಞಾನವನ್ನು ಗಳಿಸಿ ಆ ಮೂಲಕ ವ್ಯಕ್ತಿಯು ತನ್ನ, ತನ್ನ ಸಮಾಜದ ಮತ್ತು ತಾನಿರುವ ಜಗತ್ತಿನ ರಹಸ್ಯವನ್ನು ಅನುಭವಿಸುವುದೇ ಜೀವನದ ಮುಖ್ಯ ಗುರಿಯಾಗಿದೆ. ಆದುದರಿಂದ ಪರಮಾತ್ಮನ ಜ್ಞಾನವನ್ನು ಗಳಿಸುವುದೇ ಮನಸ್ಸಿನ ಸರ್ವೋತ್ಕೃಷ್ಟ ಸದ್ಗುಣವಾಗುತ್ತದೆ. ಆದರೆ ನೀತಿಶಾಸ್ತ್ರವು ಮೂಢನಂಬಿಕೆಯ ಆಧಾರವನ್ನು ಪಡೆಯದೆ ತತ್ವಶಾಸ್ತ್ರವನ್ನು ಅವಲಂಬಿಸಿರಬೇಕು. ಸ್ಪಿನೋಜನ ಹೇಳಿಕೆಯಂತೆ ಪ್ರತಿಯೊಬ್ಬ ವ್ಯಕ್ತಿಯೂ ತಾತ್ವಿಕ ಅಸ್ತಿತ್ವಕ್ಕಾಗಿ ಪ್ರಯತ್ನಿಸಬೇಕು. ಇಂತಹ ಪ್ರಯತ್ನ ಆತನ ಉತ್ತಮ ನಡತೆಯನ್ನು ಪ್ರತಿನಿಧಿಸುತ್ತದೆ. ಅಂದರೆ ವ್ಯಕ್ತಿಯ ನಡತೆಯು ಶ್ರೇಷ್ಠ ನೈತಿಕ ನಿಯಮಗಳ ಅನುಷ್ಠಾನ ಕ್ರಿಯೆಯಾಗಿರಬೇಕು. ಇಂತಹ ನಡತೆಯ ಮೂಲಕ ವ್ಯಕ್ತಿಯು ತನ್ನ ಮಾನಸಿಕ ಮತ್ತು ಶಾರೀರಿಕ ಕೆಡಕುಗಳನ್ನು ನಿವಾರಿಸಿಕೊಳ್ಳಬೇಕು. ಪ್ರಕೃತಿಯು ಮನುಷ್ಯನ ಸ್ವಭಾವ ಮತ್ತು ಗುಣಕ್ಕೆ ವಿರೋಧವಾಗಿ ಯಾವುದನ್ನೂ ಒತ್ತಾಯಿಸುವುದಿಲ್ಲ. ಮನುಷ್ಯನು ತನ್ನನ್ನು (ದೇವರನ್ನು) ಪ್ರೀತಿಸುವಂತೆ ಸೂಚಿಸಿ ಅವನಿಗೆ ಉಪಯುಕ್ತವಾದುದನ್ನು ಮಾತ್ರ ಕೊಡುತ್ತದೆ. ಪ್ರಕೃತಿಯ ಶಕ್ತಿಯು ದೈವಿಕ ಶಕ್ತಿಯಾದುದೇ ಇದಕ್ಕೆ ಕಾರಣ. ಪ್ರಕೃತಿ ಅಥವಾ ದೇವರು ಯಾವ ಪಕ್ಷಪಾತವೂ ಇಲ್ಲದೆ ಸಮಾನತೆಯಿಂದ ವರ್ತಿಸುತ್ತವೆ. ಅದರ ದೃಷ್ಟಿಯಲ್ಲಿ ಜೀವಿ ಅಜೀವಿಗಳ ನಡುವೆ ಭೇದವಿಲ್ಲ. ಪ್ರಕೃತಿಯ ನಡತೆಗೆ ಅನುಗುಣವಾಗಿ ಪ್ರತಿಯೊಬ್ಬ ವ್ಯಕ್ತಿಯೂ ಶ್ರೇಷ್ಠವಾದ, ಉಪಯುಕ್ತವಾದ ಮತ್ತು ಸೂಕ್ತವಾದ ಕಾರ್ಯಗಳನ್ನೇ ಮಾಡಬೇಕಾಗುವುದು. ಇದು ನಿಸ್ವಾರ್ಥವಾದ ನೀತಿಮಾರ್ಗವಾಗಿದೆ. ವ್ಯಕ್ತಿಯು ಜಗತ್ತನ್ನು ಅಥವಾ ಪರಮಾತ್ಮನನ್ನು ಸರಿಯಾಗಿ ಅರಿತು ತನ್ನ ಕರ್ತವ್ಯವನ್ನು ವ್ಯವಸ್ಥಿತ ರೀತಿಯಲ್ಲಿ ನಿರ್ವಹಿಸುವುದೇ ಸರಿಯಾದ ಮಾರ್ಗ. ತತ್ವಶಾಸ್ತ್ರವು ಈ ಮಾರ್ಗವನ್ನು ಸೂಚಿಸುವ ಒಂದು ಪ್ರಮುಖ ಅಂಶವಾಗಿದೆ. ವ್ಯವಸ್ಥಿತ ಕ್ರಿಯೆ ಸ್ಪಿನೋಜನ ದೃಷ್ಟಿಯಲ್ಲಿ ಅತ್ಯಂತ ಶ್ರೇಷ್ಠ ಕ್ರಿಯೆ. ವ್ಯಕ್ತಿಯು ಪೂರ್ಣ ಜ್ಞಾನಿಯಾದರೆ ಮಾತ್ರ ಅವನ ನಡತೆಯು ಶ್ರೇಷ್ಠವಾಗಬಲ್ಲದು. ಮೋಹ, ಅನುರಾಗಗಳು ಮಾನವನ ಶಕ್ತಿಯಾಗಿರದೆ ನಿಜವಾದ ದೌರ್ಬಲ್ಯಗಳಾಗಿವೆ. ಇಂತಹ ದೌರ್ಬಲ್ಯಗಳು ವ್ಯಕ್ತಿಯನ್ನು ತಮ್ಮ ಗುಲಾಮನನ್ನಾಗಿಸಿ ಆತನು ತಪ್ಪುದಾರಿಯಲ್ಲಿ ನಡೆಯುವಂತೆ ಮಾಡುತ್ತವೆ. ಆದುದರಿಂದ ಪ್ರತಿಯೊಬ್ಬ

ವ್ಯಕ್ತಿಯು ಶ್ರೇಷ್ಠ ಜ್ಞಾನವಾದ ಪರಮಾತ್ಮನ ಜ್ಞಾನವನ್ನು ಪಡೆಯಲು ಪ್ರಯತ್ನಿಸ ಬೇಕಾಗುತ್ತದೆ. ಈ ಪೂರ್ಣ ಜ್ಞಾನ ಮಾತ್ರ ಉಪಯುಕ್ತವಾದುದಾಗಿದ್ದು ವ್ಯಕ್ತಿಯ ಸುಖಕ್ಕೆ ಮತ್ತು ಉನ್ನತಿಗೆ ಸಹಕಾರಿಯಾಗಿರುತ್ತದೆ. ಪರಮಾತ್ಮನನ್ನು, ಅವನ ಗುಣ ಗಳನ್ನು, ರೂಪಾಂತರಗಳನ್ನು ಮತ್ತು ಸಮಸ್ತ ಕಾರ್ಯಗಳನ್ನು ಅರಿಯುವುದೇ ಈ ಶ್ರೇಷ್ಠ ಜ್ಞಾನದ ಸ್ವರೂಪ.

ಸ್ಪಿನೋಜನ ಪ್ರಕಾರ ಸಾಮೂಹಿಕ ಹಿತದೃಷ್ಟಿಗಿಂತ ಉಪಯುಕ್ತವಾದುದು ಮತ್ತು ಶ್ರೇಷ್ಠವಾದುದು ಬೇರಾವುದೂ ಇಲ್ಲ. ಸರ್ವಾನುಮತ ಜ್ಞಾನವೇ ಮಾನವನ ಐಕ್ಯತೆಗೆ ಆಧಾರ. ಸಾಮೂಹಿಕವಾದ ವ್ಯವಸ್ಥಿತ ವಿಚಾರವು ಸಮೂಹಕ್ಕೆ ಮಾತ್ರ ವಲ್ಲದೆ ಪ್ರತಿಯೊಬ್ಬ ವ್ಯಕ್ತಿಗೂ ಉಪಯುಕ್ತವಾಗುತ್ತದೆ. ಸ್ಪಿನೋಜನ ದೃಷ್ಟಿಯಲ್ಲಿ ಸಮಾಜ ಅಥವಾ ಜಗತ್ತು ವ್ಯಕ್ತಿಗಿಂತ ಮುಖ್ಯ. ವ್ಯಕ್ತಿಯ ಹಿತಾಶಕ್ತಿಯು ಸಮಾಜದ ಹಿತಾಶಕ್ತಿಯಲ್ಲಡಗಿದೆ ಎಂದು ಅವನ ಅಭಿಮತ. ಮುಖ್ಯವಾಗಿ ವ್ಯಕ್ತಿ ತನ್ನ ತೋರಿಕೆಯ ಸ್ವಾರ್ಥತೆಯನ್ನು ತೊಡೆದು ಹಾಕಬೇಕು. ಅವನಲ್ಲಿ ಸ್ವಾರ್ಥದ ಅಂಶ ಕಡಿಮೆ ಯಾದಷ್ಟು ಆತನಲ್ಲಿ ಬುದ್ಧಿ ವಿಶಾಲತೆ ಉಂಟಾಗುತ್ತದೆ. ಆತನಲ್ಲಿ ಹೆಚ್ಚು ಹೆಚ್ಚು ವಿಚಾರ ಶಕ್ತಿ ಹೆಚ್ಚಾದಂತೆ ಅವನಲ್ಲಿ ಪ್ರಾಮಾಣಿಕತೆ, ವಿಧೇಯತೆ, ನ್ಯಾಯ ಮುಂತಾದ ಸದ್ಗುಣ ಗಳು ವೃದ್ಧಿಯಾಗುತ್ತವೆ.

ವ್ಯಕ್ತಿಯ ಜ್ಞಾನ ಅಸಂಪೂರ್ಣ ಅಥವಾ ಅಸಮಗ್ರವಾಗಿದ್ದರೆ ಆತನ ಸ್ವಾರ್ಥತೆಯು ಅವನನ್ನು ಅನ್ಯಾಯದಿಂದ ವರ್ತಿಸುವಂತೆ ಮಾಡುತ್ತದೆ. ನೈಜ ಜ್ಞಾನದ ಅಭಾವದಿಂದ ಅಂಧಕಾರ ಉಂಟಾಗಿ ಆತನು ದುರಂಹಕಾರಿಯಾಗುವನು. ಅಂತಹವನಲ್ಲಿ ಅರಿಷಡ್ವರ್ಗಗಳೆಂಬ ಕೆಡುಕುಗಳು ಪ್ರವೇಶಿಸಲು ಅವಕಾಶವಾಗುತ್ತವೆ. ಇದರ ಪರಿಣಾಮ ದಿಂದುಂಟಾದ ರಾಗದ್ವೇಷಗಳು ಆತನ ಜ್ಞಾನಗಳಿಕೆಯ ಪ್ರಯತ್ನಕ್ಕೆ ಅಡ್ಡಿ ಮಾಡುವು ದಲ್ಲದೆ ಆತನ ಅಭಿವೃದ್ಧಿಗೂ ಧಕ್ಕೆಯನ್ನುಂಟುಮಾಡುತ್ತದೆ. ಆದುದರಿಂದ ಅವನು ಇಂತಹ ದುಷ್ಟಶಕ್ತಿಗಳನ್ನು ದಮನ ಮಾಡಿ ತನ್ನ ಪ್ರಯತ್ನದಲ್ಲಿ ಯಶಸ್ಸನ್ನು ಗಳಿಸಿದರೆ ಆತನು ಸಮಸ್ತ ಜಗತ್ತನ್ನು ದೇವರ ದೃಷ್ಟಿಯಿಂದ ನೋಡಬಲ್ಲವನಾಗುತ್ತಾನೆ. ಈ ದೃಷ್ಟಿಯಿಂದ ನೋಡಿದಾಗ ಸೃಷ್ಟಿಯ ಎಲ್ಲ ವಿಶಿಷ್ಟಗಳು ಜಗತ್ತಿನಲ್ಲಿ ಐಕ್ಯವಾಗಿರುವಂತೆ ಕಾಣುವುದಲ್ಲದೆ ಸರ್ವವೂ ಉತ್ತಮವಾದುದು ಮತ್ತು ಶ್ರೇಷ್ಠವಾದುದು ಎಂಬ ಅರಿವುಂ ಟಾಗುತ್ತದೆ. ಜಗತ್ತಿನ ಪ್ರತಿಯೊಂದು ಅಂಶವೂ ದೈವೀಕವಾದುದೆಂಬ ಪರಿಜ್ಞಾನ ಉಂಟಾದ ಈ ಹಂತದಲ್ಲಿ ವ್ಯಕ್ತಿಯ ಜೀವನದ ಶ್ರೇಷ್ಠತೆಯನ್ನು ಮುಟ್ಟುತ್ತದೆ.

ಲೈಬ್ನಿಜ್—1646–1716

ಲೈಬ್ನಿಜ್‌ನ ತತ್ವ ನಿರೂಪಣೆಯು ಬಹುತತ್ವವಾಗಿದೆ. ಡೇಕಾರ್ಟೆಯು ದ್ವೈತವಾದಿ ಯಾದರೆ, ಸ್ಪಿನೋಜನು ಅದ್ವೈತವಾದಿಯಾದರೆ ಲೈಬ್ನಿಜ್ ಬಹುತತ್ವವಾದಿ ಅಥವಾ ವೈಶೇಷಿಕವಾದಿಯಾಗಿದ್ದಾನೆ. ಈ ಮೂವರೂ ವಿಚಾರ ಒಂದರಿಂದ ಮಾತ್ರ ಸಮಗ್ರ

ಹಾಗೂ ಸ್ಪಷ್ಟಜ್ಞಾನ ಸಾಧ್ಯ ಎನ್ನುವ ವಿಚಾರವಾದಿಗಳೇ. ಆದರೂ ತತ್ವ ಮೀಮಾಂಸೆಯ ಹಂತದಲ್ಲಿ ಇವರ ಅಭಿಪ್ರಾಯಗಳು ಭಿನ್ನವಾಗಿವೆ. ಸ್ಪಿನೋಜನ ದೃಷ್ಟಿಯಲ್ಲಿ ದೇವರು ಮಾತ್ರ ಅತ್ಯಂತ ಶ್ರೇಷ್ಠನಾದ ಏಕೈಕ ದ್ರವ್ಯ ಹಾಗೂ ಅಂತಿಮ ಸತ್ಯ. ಆದರೆ ಲೈಬ್ನಿಜ್‌ನ ಅಭಿಪ್ರಾಯದಲ್ಲಿ ಸತ್ಯವೆನ್ನುವುದು ಒಂದೇ ಆಗಿರದೆ ಅಸಂಖ್ಯಾತವಾಗಿವೆ. ಲೈಬ್ನಿಜ್‌ನು ಈ ರೀತಿ ಬಹುತತ್ವವಾದಿಯಾಗಲು ಆತನ ಕಾಲದ ವೈಚಾರಿಕ ಸ್ಥಿತಿಗಳು ಅವನ ಮೇಲೆ ಬೀರಿದ ಪ್ರಭಾವವೇ ಕಾರಣ. ಕ್ರಿ.ಶ. 17ನೆಯ ಶತಮಾನದಲ್ಲಿ ಜನರು ಧರ್ಮ ಮತ್ತು ಸಂಪ್ರದಾಯಗಳ ಪಟ್ಟಳಿಕೆಗೆ ವಿರೋಧವನ್ನು ವ್ಯಕ್ತಪಡಿಸಲು ಪ್ರಾರಂಭಿಸಿದರು. ತಾವು ಸ್ವತಂತ್ರರು, ತಮ್ಮ ಕಷ್ಟಸುಖಗಳಿಗೆ ತಾವೇ ಕಾರಣರು ಎಂಬ ಅಭಿಪ್ರಾಯ ಅವರಲ್ಲಿ ಬೆಳೆಯಿತು. ವೈಯುಕ್ತಿಕ ಇಚ್ಛೆ, ವಿಚಾರ ಶಕ್ತಿ, ಆಸೆ-ಆಕಾಂಕ್ಷೆಗಳು ಪ್ರಧಾನ ಸ್ಥಾನವನ್ನು ಪಡೆದು ಧಾರ್ಮಿಕ ಕಟ್ಟುಪಾಡುಗಳಿಗೆ ಎದುರಾಗಿ ನಿಂತವು. ಈ ಸ್ವಾತಂತ್ರ್ಯಪ್ರಜ್ಞೆಗೆ ಅನುಗುಣವಾಗಿ ಲೈಬ್ನಿಜ್‌ನು ತನ್ನ ತತ್ವ ನಿರೂಪಣೆಯನ್ನು ಕೊಟ್ಟಿದ್ದಾನೆ.

ತತ್ವಶಾಸ್ತ್ರದ ಕ್ಷೇತ್ರದಲ್ಲಿ ಸ್ಪಿನೋಜನು ವ್ಯಕ್ತಿಯ ವೈಯುಕ್ತಿಕ ಇಚ್ಛೆ ಮತ್ತು ಸ್ವಾತಂತ್ರ್ಯಗಳನ್ನು ತನ್ನ ಏಕೈಕ ದ್ರವ್ಯದ ನಿರೂಪಣೆಯ ಮೂಲಕ ನಿರ್ನಾಮ ಮಾಡಿದನು. ಪ್ರಪಂಚದ ಪ್ರತಿಯೊಂದು ವಸ್ತುವು, ಜೀವಿಯು ಪರಮಾತ್ಮನ ರೂಪಾಂತರ ವೆಂದು ವಿವರಿಸಿದ ಸ್ಪಿನೋಜನು ಯಾವ ವಸ್ತುವೇ ಕೊನೆಯ ಹಂತದ ಭೌತವಸ್ತು. ಈ ಅಣುವು ಎಷ್ಟೇ ಸೂಕ್ಷ್ಮವಾದುದಾದರೂ ಅದು ಭೌತವಸ್ತುವಾಗಿರುವುದರಿಂದ ವಿಸ್ತೃತಿ ಯನ್ನು ಪಡೆದಿರಬೇಕು. ಪ್ರತಿಯೊಂದು ಅಣುವೂ ಒಂದು ನಿರ್ದಿಷ್ಟ ಸ್ಥಳವನ್ನು ಆಕ್ರಮಿಸುತ್ತದೆ ಎಂದು ಈ ವಿವರಣೆಯ ಅರ್ಥ. ಲೈಬ್ನಿಜ್‌ನು ತನ್ನ ವಿಚಾರಶಕ್ತಿಯನ್ನು ಮತ್ತೂ ಮುಂದುವರಿಸುತ್ತಾನೆ. ಅವನ ಪ್ರಕಾರ ಸೂಕ್ಷ್ಮವಾದ ಭೌತ ಅಣುವನ್ನು ಮತ್ತೆ ವಿಭಜಿಸಿದರೆ ಅದು ಮತ್ತಷ್ಟು ಸೂಕ್ಷ್ಮವಾಗಿ ತನ್ನ ಭೌತ ರೂಪವನ್ನು ಕಳೆದು ಕೊಂಡು ಒಂದು ಮಾನಸಿಕ ಶಕ್ತಿಯಾಗಿ ಪರಿವರ್ತನೆಗೊಳ್ಳುತ್ತದೆ. ಲೈಬ್ನಿಜ್ ಈ ಮಾನಸಿಕ ಶಕ್ತಿಯನ್ನು "ಜೀವಾಣು" ಎಂದು ಕರೆಯುತ್ತಾನೆ, ಈ ಜೀವಾಣುವು ಸದಾಕಾಲವೂ ಕ್ರಿಯಾತ್ಮಕವಾಗಿಯೇ ಇರುತ್ತದೆ. ಆದ್ದರಿಂದ ಈ ಜೀವಾಣುವೇ ಪ್ರಪಂಚದ ಸರ್ವಶಕ್ತಿಯ ಕೇಂದ್ರವಾಗುತ್ತದೆ. ಲೈಬ್ನಿಜ್‌ನ ಈ ವಿವರಣೆಯಂತೆ ನಾವು ಅನುಭವಿಸುವ ಭೌತ ಪ್ರಪಂಚವು ಇಂತಹ ಅಸಂಖ್ಯಾತ ಜೀವಾಣುಗಳ ಸಮೂಹ ವಾಗಿವೆ. ಜಗತ್ತಿನ ಈ ಕಲ್ಪನೆಯು ಅದನ್ನು ಒಂದು ಸ್ವಯಂಚಾಲಿತ ಶಕ್ತಿಯನ್ನಾಗಿ ಪರಿಗಣಿಸುತ್ತದೆ. ಆದ್ದರಿಂದ ಭೌತ ವಸ್ತುಗಳು ಅಥವಾ ಶರೀರಗಳು ಸ್ಥಳವನ್ನವಲಂಬಿ ಸುವುದಿಲ್ಲ. ಇದಕ್ಕೆ ಬದಲಾಗಿ ಸ್ಥಳವು ಈ ಜೀವಾಣುಗಳ ಇರುವಿಕೆಯಿಂದ ನಿರ್ಧರಿಸ ಲ್ಪಟ್ಟಿರುತ್ತದೆ. ಪ್ರತಿಯೊಂದು ಜೀವಾಣು ಅಥವಾ ಶಕ್ತಿಯು ಮತ್ತೆ ವಿಭಜಿಸಲಾಗದ ಶಕ್ತಿಯಾಗಿದ್ದು ಇಲ್ಲಿಯ ಚಲನೆ ಮತ್ತು ನಿಶ್ಚಿಂತೆಗಳು ಸ್ವಯಂ ನಿರ್ಧಾರವಾದುವುಗಳಾ ಗಿವೆ. ಪ್ರತಿಯೊಂದು ಜೀವಾಣುವು ಸ್ವಯಂ ಸ್ವತಂತ್ರವಾದುದರಿಂದ ಜಗತ್ತಿನ ಸೃಷ್ಟಿಗೆ

ಸೃಷ್ಟಿಕರ್ತನೊಬ್ಬನ ಅವಶ್ಯಕತೆಯನ್ನು ನಿವಾರಿಸುತ್ತದೆ. ಸರ್ವ ಸ್ವತಂತ್ರವಾದ ಜೀವಾಣುಗಳು ತಮ್ಮ ಅಸ್ತಿತ್ವಕ್ಕೆ ಬೇರಾವ ಬಾಹ್ಯ ಅಂಶವನ್ನೂ ಅವಲಂಬಿಸದೇ ಇರುವುದರಿಂದ ಅವುಗಳೇ ಅನುಭವಗ್ರಾಹಿಯಾದ ಜಗತ್ತಿನ ಮೂಲಕಾರಣಗಳಾಗಿವೆ.

ವ್ಯಕ್ತಿಯು ಸ್ವತಂತ್ರ ಇಚ್ಛೆಯಿಂದ ವರ್ತಿಸಲು ಸಾಧ್ಯವಿಲ್ಲವೆಂದು ಸ್ಪಿನೋಜ ಹೇಳಿದನು. ಆದರೆ ಪರಿಸ್ಥಿತಿಯ ಬದಲಾವಣೆಯನ್ನು ಮನಗಂಡ ಲೈಬ್ನಿಜ್ ಸ್ಪಿನೋಜನ ಅದ್ವೈತವಾದವನ್ನು ತಳ್ಳಿಹಾಕಿ ತನ್ನ ಪರಮಾಣುವಾದದ ಮೂಲಕ ತತ್ವಶಾಸ್ತ್ರಕ್ಕೆ ವೈಶೇಷಿಕವಾದ ಕೊಡುಗೆಯನ್ನು ನೀಡುತ್ತಾನೆ. ಇತರ ವಿಚಾರವಾದಿಗಳಂತೆ ಲೈಬ್ನಿಜ್‌ನು ಹುಟ್ಟಿನೊಡನೆ ನಾವು ಪಡೆದಿರಬಹುದಾದ ಮೂಲಕಲ್ಪನೆಗಳಿಂದಲೇ ತನ್ನ ವಾದವನ್ನು ಪ್ರಾರಂಭಿಸುತ್ತಾನೆ. ಅನುಮಾನರಹಿತವಾದ ಮೂಲಭಾವನೆಗಳಿಂದ ನಿಗಮನದ ರೂಪದಲ್ಲಿ ತೀರ್ಮಾನಗಳನ್ನು ಪಡೆಯುವುದು ವಿಚಾರವಾದಿಗಳ ಲಕ್ಷಣ. ಲೈಬ್ನಿಜ್ ಈ ಕ್ರಮಕ್ಕೆ ಹೊರತಲ್ಲ. ಆದರೆ ಡೇಕಾರ್ಟೆ ಮತ್ತು ಸ್ಪಿನೋಜ ತಮ್ಮ ವಾದವನ್ನು ಚೈತನ್ಯ ಸ್ವರೂಪವಾದ ಮನಸ್ಸಿನಿಂದ ಪ್ರಾರಂಭಿಸಿದ್ದರೆ ಲೈಬ್ನಿಜ್ ತನ್ನ ನಿರೂಪಣೆಯನ್ನು ಭೌತ ದ್ರವ್ಯದಿಂದ ಪ್ರಾರಂಭಿಸುತ್ತಾನೆ. ಆತನ ಈ ಪ್ರಯತ್ನವು ಆತನಲ್ಲಿದ್ದ ವಿಶ್ಲೇಷಣಾಯುಕ್ತವಾದ ವೈಜ್ಞಾನಿಕ ಪ್ರವೃತ್ತಿಯನ್ನು ಸೂಚಿಸುತ್ತದೆ. ಡೇಕಾರ್ಟೆ ವಿವರಿಸಿರುವಂತೆ ದ್ರವ್ಯವು ಸರ್ವ ಸ್ವತಂತ್ರವಾಗಿದ್ದು ತನ್ನ ಇರುವಿಕೆಗೆ ಬೇರಾದ ಅಂಶವನ್ನು ಅವಲಂಬಿಸಿರುವುದಿಲ್ಲ. ಆದರೆ ಸ್ಪಿನೋಜನ ದೇವರು ವ್ಯಕ್ತಿಯ ಮತ್ತು ವಸ್ತುವಿನ ಸ್ವಾತಂತ್ರ್ಯವನ್ನು ಕಸಿದುಕೊಂಡು ತನ್ನ ಇರವನ್ನು ಪಡೆಯುವುದರಿಂದ ಲೈಬ್ನಿಜ್‌ನು ದೇವರನ್ನು ಒಂದು ದ್ರವ್ಯವೆಂದು ಪರಿಗಣಿಸುವುದಿಲ್ಲ. ಆದುದರಿಂದ ಆತನ ತತ್ವ ನಿರೂಪಣೆಯು ಭೌತ ವಸ್ತುವಿನಿಂದ ಪ್ರಾರಂಭವಾಗುತ್ತದೆ.

ಡೇಕಾರ್ಟೆಯು ಭೌತವಸ್ತುವು ಒಂದು ದ್ರವ್ಯವೆಂದು ಅದು ವಿಸ್ತೃತಿಯನ್ನು ಪಡೆದಿದೆ ಎಂದು ವಿವರಿಸಿದ್ದಾನೆ. ಇಂತಹ ಭೌತವಸ್ತುವೊಂದನ್ನು ವಿಭಜಿಸುತ್ತಾ ಹೋದರೆ ಕಣ್ಣಿಗೆ ಅಗೋಚರವಾದ ಅತಿಸೂಕ್ಷ್ಮ ಭೌತವಸ್ತುಗಳು ಉಂಟಾಗುತ್ತವೆ. ವಿಜ್ಞಾನದ ಅಥವಾ ತತ್ವಶಾಸ್ತ್ರದ ಅಂದಿನ ನಂಬಿಕೆಯ ಪ್ರಕಾರ ಅಣುವು ವಿಭಜಿಸಲು ಅಸಾಧ್ಯವಾದಂತಹ ಅಸಂಖ್ಯಾತ ಜೀವಾಣುಗಳು ಒಂದುಗೂಡಿ ಭೌತವಸ್ತುವಿನ ಆಕೃತಿಯನ್ನು ತಾಳುತ್ತವೆ. ಆದರೆ ಹೀಗೆ ಅವು ಒಂದುಗೂಡಿದಾಗ ತಮ್ಮ ಸಹಜ ಮಾನಸಿಕ ಶಕ್ತಿಯನ್ನು ಕಳೆದುಕೊಳ್ಳುತ್ತವೆ. ಆದರೆ ಈ ಸಂಘಟನೆಯಲ್ಲೂ "ಪ್ರತಿಯೊಂದು ಜೀವಾಣುವೂ ಸ್ವತಂತ್ರವೆಂದೂ ಅದು ತನ್ನ ಅಸ್ತಿತ್ವಕ್ಕೆ ಬೇರಾವ ಅಂಶವನ್ನು ಅವಲಂಬಿಸುವುದಿಲ್ಲವೆಂದೂ ನಿರೂಪಿಸಲ್ಪಡುವ ಲೈಬ್ನಿಜ್‌ನ ವಾದವು ವೈಶೇಷಿಕವಾದ ಅಥವಾ ಬಹುತತ್ವವಾದವಾಗುತ್ತದೆ." ಪ್ರತಿಯೊಂದು ಜೀವಾಣು ಶಕ್ತಿಯೂ ಒಂದು ದ್ರವ್ಯವಾಗಿದೆ, ಮತ್ತು ಪ್ರತಿಯೊಂದು ದ್ರವ್ಯವೂ ತನ್ನದೇ ಆದ ವಿಶಿಷ್ಟ ಗುಣವನ್ನು ತನ್ನ ಮಾನಸಿಕ ಶಕ್ತಿಯ ರೂಪದಲ್ಲಿ ಹೊಂದಿಕೊಂಡಿದೆ. ಈ ಮಾನಸಿಕ ಶಕ್ತಿಯನ್ನು ವಿಭಜಿಸಲು ಸಾಧ್ಯ

ವಿಲ್ಲ. ಆದರೆ ಎಲ್ಲಾ ವಸ್ತುಗಳಲ್ಲಿಯೂ ಈ ಶಕ್ತಿಯನ್ನು ಬೇರೆ ಬೇರೆ ಹಂತಗಳಲ್ಲಿ ನೋಡಬಹುದಾಗಿದೆ.

ಲೈಬ್ನಿಜ್‌ನ ಪ್ರಕಾರ ಜೀವಾಣುಗಳು ನಮ್ಮ ಆತ್ಮನ ಕಲ್ಪನೆಯನ್ನು ಹೋಲುತ್ತವೆ. ಆತ್ಮವು ಕೂಡ ಒಂದು ರೀತಿಯ ಜೀವಾಣು ಶಕ್ತಿಯಾಗಿದೆ. ಈ ಜೀವಾಣುವು ಕ್ರಿಯಾತ್ಮಕವಾಗಿರುವುದರಿಂದಲೇ ಅವುಗಳಿಂದುಂಟಾದ ವಸ್ತು ಕ್ರಿಯಾತ್ಮಕವಾಗುತ್ತವೆ. ಈ ಕ್ರಿಯಾತ್ಮಕ ಶಕ್ತಿ ಸರ್ವಜೀವಿಗಳಿಗೂ ಆಧಾರವಾಗಿದೆ. ಲೈಬ್ನಿಜ್‌ನ ಪ್ರಕಾರ ಪ್ರಕೃತಿಯ ಎಲ್ಲೆಡೆಯಲ್ಲೂ ಇಂತಹ ಶಕ್ತಿಗಳಿವೆ. ಆದರೆ ನಿರ್ಜೀವವೆಂದು ಪರಿಗಣಿಸಲ್ಪಟ್ಟಿರುವ ಕಲ್ಲಿನಲ್ಲಿಯೂ ಜೀವಾಣುವಿದೆಯೆಂದು ಲೈಬ್ನಿಜ್ ವಾದಿಸುತ್ತಾನೆ. ಜಗತ್ತಿನ ಎಲ್ಲೆಡೆಯಲ್ಲೂ ಈ ಜೀವಾಣುಗಳಿದ್ದರೂ ಅವುಗಳು ಒಂದೇ ರೀತಿಯಾಗಿರುವುದಿಲ್ಲ. ಅವು ಮನುಷ್ಯರಲ್ಲಿ, ಸಸ್ಯಗಳಲ್ಲಿ, ಪ್ರಾಣಿಗಳಲ್ಲಿ ಮತ್ತು ನಿರ್ಜೀವ ವಸ್ತುಗಳಲ್ಲಿ ಭಿನ್ನ ಭಿನ್ನವಾಗಿರುತ್ತವೆ. ಈ ಭಿನ್ನತೆಗೆ ಪ್ರತಿಯೊಂದು ಜೀವಾಣುವಿನಲ್ಲಿರುವ ಗ್ರಹಣ ಶಕ್ತಿ ಅಥವಾ ಚೈತನ್ಯತಾ ವ್ಯತ್ಯಾಸವೇ ಕಾರಣವಾಗಿದೆ. ಕೆಲವು ಜೀವಾಣುಗಳಲ್ಲಿ ಈ ಗ್ರಹಣ ಶಕ್ತಿಯು ಅತ್ಯಂತ ಸಂಪೂರ್ಣವಾಗಿರುತ್ತದೆ. ಇನ್ನು ಕೆಲವು ಜೀವಾಣುಗಳಲ್ಲಿ ಅಲ್ಪಮಾತ್ರದಲ್ಲಿರುತ್ತವೆ, ಮತ್ತು ಇನ್ನು ಕೆಲವು ಜೀವಾಣುಗಳಲ್ಲಿ ಅದು ಸಂಪೂರ್ಣವಾಗಿ ತುಂಬಿರುತ್ತದೆ. ಗ್ರಹಣಶಕ್ತಿ ಸಂಪೂರ್ಣ ಕಡಿಮೆ ಇರುವ ಜೀವಾಣುವನ್ನು ಲೈಬ್ನಿಜ್ ಖಾಲಿ ಜೀವಾಣುಗಳೆಂದು ಕರೆದಿದ್ದಾನೆ.

(1) ನಿರ್ವಿಕಲ್ಪಕ ಹಂತ :

ಇಲ್ಲಿ ಗ್ರಹಿಸಲ್ಪಡುವ ವಸ್ತುವಿನ ಲಕ್ಷಣಗಳು ಇನ್ನೂ ಸ್ಪಷ್ಟವಾಗಿರುವುದಿಲ್ಲ.

(2) ಸವಿಕಲ್ಪಕ ಹಂತ :

ಒಂದು ವಸ್ತು ಅದರ ಲಕ್ಷಣಗಳೊಡನೆ ಸಂಪೂರ್ಣವಾಗಿ ತಿಳಿಯಲ್ಪಟ್ಟಾಗ ಅದು ಸವಿಕಲ್ಪಕವಾಗುತ್ತದೆ. ಕೆಳಮಟ್ಟದ ಜೀವಾಣುಗಳಲ್ಲಿ ಸವಿಕಲ್ಪ ಗ್ರಹಣಶಕ್ತಿಯು ಕೊರತೆ ಇರುತ್ತದೆ. ನಿರ್ಜೀವ ವಸ್ತುವಿನಲ್ಲಿ ನಿರ್ವಿಕಲ್ಪ ಪ್ರತ್ಯಕ್ಷ ಅತ್ಯಂತ ಹೆಚ್ಚಿದ್ದರೆ ಸಸ್ಯಗಳಲ್ಲಿ ಅದು ಸುಧಾರಿತ ಹಂತದಲ್ಲಿರುತ್ತದೆ. ಪ್ರಾಣಿಗಳಲ್ಲಿ ಈ ಗ್ರಹಣ ಶಕ್ತಿಯು ಮತ್ತಷ್ಟು ಸುಧಾರಿಸಿದ್ದು ಪ್ರತ್ಯಕ್ಷ ಜ್ಞಾನ ಮತ್ತು ಜ್ಞಾಪಕಶಕ್ತಿಯನ್ನೊಳಗೊಂಡಿರುತ್ತದೆ. ಮನುಷ್ಯನಲ್ಲಿ ನಿರ್ವಿಕಲ್ಪ ಜ್ಞಾನವು ಬಹಳ ಹೆಚ್ಚಿನ ಮಟ್ಟದಲ್ಲಿ ಸವಿಕಲ್ಪದ ಹಂತವನ್ನು ಮುಟ್ಟಿರುತ್ತದೆ. ಈ ಹಂತವನ್ನು ಮನಃಪ್ರಜ್ಞೆ ಎನ್ನಬಹುದು. ಈ ಗ್ರಹಣ ಶಕ್ತಿಗನುಗುಣವಾಗಿ ಲೈಬ್ನಿಜ್‌ನು ಪ್ರಪಂಚದ ವಸ್ತುಗಳನ್ನು ಮತ್ತು ಜೀವಿಗಳನ್ನು ಒಂದು ಪ್ರಗತಿಪರ ಅನುಕ್ರಮಣಿಕೆಯಲ್ಲಿ ಜೋಡಿಸುತ್ತಾನೆ. ಈ ಅನುಕ್ರಮಣಿಕೆಯಲ್ಲಿ ಅತ್ಯಂತ ಕೆಳಮಟ್ಟದ ಜೀವಾಣುವಿನಿಂದ ಪ್ರಾರಂಭಿಸಿ ಅತ್ಯುನ್ನತವಾದ ಜೀವಾಣುಗಳ ವರೆಗಿನ ವಿವಿಧ ಹಂತಗಳನ್ನು ನಿರೂಪಿಸುತ್ತಾನೆ. ಈ ವ್ಯವಸ್ಥೆಯಲ್ಲಿ ಅತ್ಯಂತ ಕೆಳಮಟ್ಟ

ದಲ್ಲಿ ಭೌತವಸ್ತುಗಳನ್ನೊಳಗೊಂಡ ಜೀವಾಣುಗಳು, ಅನಂತರ ಸಸ್ಯವರ್ಗದ ಜೀವಾಣುಗಳು, ನಂತರ ಪ್ರಾಣಿವರ್ಗದ ಜೀವಾಣುಗಳು, ನಂತರ ಮಾನವ ಜೀವಾಣುಗಳು, ಅನಂತರ ದೇವದೂತರು ಮತ್ತು ಕೊನೆಯಲ್ಲಿ ದೇವರ ಜೀವಾಣುಗಳನ್ನು ನಿರೂಪಿಸುತ್ತಾನೆ. ಅತ್ಯಂತ ಕೊನೆಯದಾದ ದೇವ ಜೀವಾಣುವನ್ನು ಲೈಬ್ನಿಜ್‌ನು ಜೀವಾಣುಗಳ ಜೀವಾಣುವೆಂದು ಕರೆದಿದ್ದಾನೆ. ಇದು ಅತ್ಯಂತ ಶ್ರೇಷ್ಠವಾದ, ಪವಿತ್ರವಾದ ಮತ್ತು ಸಂಪೂರ್ಣವಾಗಿ ಕ್ರಿಯಾತ್ಮಕವಾದ ಜೀವಾಣುವಾಗಿದೆ. ಈ ಮೂಲ ಜೀವಾಣುವಿನಲ್ಲಿ ಪ್ರಜ್ಞೆ ಅಥವಾ ಗ್ರಹಣಶಕ್ತಿಯು ಪರಿಪೂರ್ಣಸ್ಥಿತಿಯನ್ನು ಪಡೆದಿರುತ್ತದೆ.

ಪೂರ್ವನಿಯೋಜಿತ ಸಾಮರಸ್ಯದ ನಿರೂಪಣೆ :

ಜೀವಾಣುಗಳೆಲ್ಲವೂ ಸ್ವಾವಲಂಬಿಗಳಾದ ದ್ರವ್ಯಗಳಾಗಿವೆ. ತಮ್ಮ ಅಸ್ತಿತ್ವಕ್ಕೆ ಬೇರಾವ ಅಂಶಗಳ ಆಧಾರವನ್ನೂ ಪಡೆದಿರದ ಈ ದ್ರವ್ಯಗಳು ಸಂಪೂರ್ಣ ಸ್ವತಂತ್ರವಾಗಿವೆ ಒಂದು ಜೀವಾಣುವಿನೊಳಗೆ ಮತ್ತೊಂದು ಜೀವಾಣು ಯಾವ ರೀತಿಯಿಂದಲೂ ಪ್ರವೇಶಿಸಲು ಸಾಧ್ಯವಿಲ್ಲ, ಲೈಬ್ನಿಜ್‌ನು ಈ ಜೀವಾಣುಗಳಿಗೆ ಸರ್ವಸ್ವತಂತ್ರ ಅಸ್ತಿತ್ವವನ್ನು ನೀಡಿರುವುದರಿಂದ ಆ ಜೀವಾಣುಗಳನ್ನೊಳಗೊಂಡ ಪ್ರತಿಯೊಂದು ಜೀವಿ ಅಥವಾ ವಸ್ತುವು ಸ್ವತಂತ್ರವಾಗಿಯೇ ಇರುತ್ತದೆ. ಪ್ರತಿಜೀವಿಗೂ ತನ್ನ ನಡತೆಯ ಬಗ್ಗೆ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟು ತನ್ನ ನಡೆನುಡಿಗಳಿಗೆ ತಾನೇ ಹೊಣೆ ಎನ್ನುವ ನಿರೂಪಣೆಯನ್ನು ಕೊಡುವುದೇ ಲೈಬ್ನಿಜ್‌ನ ತತ್ವ ನಿರೂಪಣೆಯ ಉದ್ದೇಶ. ಒಂದು ಜೀವಾಣುವಿನ ಮೇಲೆ ಮತ್ತೊಂದು ಜೀವಾಣು ಯಾವುದೇ ವಿಧವಾದ ಒತ್ತಾಯವನ್ನೂ ತರಲು ಸಾಧ್ಯವಿಲ್ಲ. ಆದುದರಿಂದ ಪರಿಪೂರ್ಣ ಜೀವಾಣುವಾದ ದೇವರು ಕೂಡ ಇತರ ಜೀವಿಗಳನ್ನು ನಿಯಂತ್ರಿಸಲು ಸಾಧ್ಯವಿಲ್ಲ. ಈ ನಿರೂಪಣೆಯ ಪ್ರಕಾರ ಪ್ರತಿಯೊಂದು ಜೀವಿಯೂ ತನ್ನ ಇಚ್ಛಾಸ್ವಾತಂತ್ರ್ಯದ ಅನ್ವಯ ವರ್ತಿಸಿ ಅದರಿಂದುಂಟಾದ ಪರಿಣಾಮಗಳಿಗೆ ತಾನೆ ಹೊಣೆಯಾಗುತ್ತದೆ. ಲೈಬ್ನಿಜ್‌ನ ಈ ನಿರೂಪಣೆಯು ಡೇಕಾರ್ಟೆಯು ನಿರೂಪಿಸುವ ಪ್ರಕ್ರಿಯ ಸಿದ್ಧಾಂತಕ್ಕೆ ವಿರುದ್ಧವಾಗಿದೆ. ಪ್ರಕ್ರಿಯ ಸಿದ್ಧಾಂತವು ಒಂದು ದ್ರವ್ಯವು ಮತ್ತೊಂದು ದ್ರವ್ಯದೊಡನೆ ಪರಸ್ಪರ ಸಂಬಂಧ ಹೊಂದಿರುವಂತೆಯೂ, ಒಂದು ಮತ್ತೊಂದರ ಮೇಲೆ ಪ್ರಭಾವವನ್ನು ಬೀರುವುದಾಗಿಯೂ ತಿಳಿಸುತ್ತದೆ. ಆದರೆ ಲೈಬ್ನಿಜ್‌ನ ದ್ರವ್ಯ ನಿರೂಪಣೆಯು ದ್ರವ್ಯಗಳ ನಡುವಿನ ಪರಸ್ಪರ ಪ್ರಕ್ರಿಯೆಯನ್ನು, ಪರಸ್ಪರ ಪ್ರಭಾವವನ್ನು ನಿರಾಕರಿಸುತ್ತದೆ. ಈ ವಿವರಣೆಯಿಂದ ಡೇಕಾರ್ಟೆ ಆಧುನಿಕ ತತ್ವಶಾಸ್ತ್ರದ ಮುಂದಿಟ್ಟ ಶರೀರ ಮತ್ತು ಮನಸ್ಸಿನ ಸಮಸ್ಯೆಯನ್ನು ಮತ್ತಷ್ಟು ಬಿಗಿಗೊಳಿಸುವಂತೆ ಕಾಣುತ್ತದೆ. ಲೈಬ್ನಿಜ್‌ನ ಹೇಳಿಕೆಯಂತೆ ಪ್ರತಿಯೊಂದು ಜೀವಾಣುವು ಸ್ವತಂತ್ರವಾಗಿದ್ದು ಒಂದು ಮತ್ತೊಂದರೊಡನೆ ಪ್ರಕ್ರಿಯೆ ಹೊಂದಿರಲು ಸಾಧ್ಯವಿಲ್ಲವಾದರೆ ನಮ್ಮ ಮನಸ್ಸಿನ ಇಚ್ಛೆಗಳನ್ನು ಹೇಗೆ ಶರೀರದ ಭಾಗಗಳು ಪೂರೈಸುವುದು ಸಾಧ್ಯ ಅಥವಾ ಶರೀರದ ಕಾರ್ಯಗಳು ಹೇಗೆ ಮನಸ್ಸಿನ ಮೇಲೆ ಪ್ರಭಾವವನ್ನು ಬೀರ

ಒಲ್ಲವು ಎಂಬ ಸಮಸ್ಯೆ ಇನ್ನೂ ತೀವ್ರವಾಗುತ್ತದೆ. ಆದರೆ ಲೈಬ್ನಿಜ್‌ನು ಈ ಸಮಸ್ಯೆಗೆ ಪರಿಹಾರವನ್ನು ತನ್ನದೇ ಆದ ವಿಶಿಷ್ಟ ರೀತಿಯಲ್ಲಿ ಸೂಚಿಸಿದ್ದಾನೆ. ಆತನು ಸೂಚಿಸಿದ ಪರಿಹಾರವು ತಾನು ನಿರೂಪಿಸಿದ ಪೂರ್ವ ನಿಯೋಜಿತ ಸಾಮರಸ್ಯ ಸಿದ್ಧಾಂತದಲ್ಲಿ ಅಡಗಿದೆ.

ಲೈಬ್ನಿಜ್‌ನ ಈ ಸಿದ್ಧಾಂತದಂತೆ ಶರೀರ ಮತ್ತು ಮನಸ್ಸುಗಳ ಅಂದರೆ ಭೌತವಸ್ತು ಮತ್ತು ಜೀವಿಗಳ ನಡುವಿರುವ ಪ್ರಕ್ರಿಯೆಯು ನಿಜವಾದ ಪ್ರಕ್ರಿಯೆಯಾಗಿರದೇ ಒಂದು ರೀತಿಯ ಮಾನಸಿಕ ಮತ್ತು ಶಾರೀರಕ ಸಮಾನಾಂತರ ಕ್ರಿಯೆಯಾಗಿದೆ. ಈ ಕ್ರಿಯೆಯು ಏಕಕಾಲದಲ್ಲಿ ಶರೀರ ಮತ್ತು ಮನಸ್ಸುಗಳೆರಡರಲ್ಲಿಯೂ ನಡೆಯುವುದರಿಂದ ಅವುಗಳ ನಡುವೆ ಪ್ರಕ್ರಿಯೆ ಇರುವಂತೆ ಭಾಸವಾಗುತ್ತದೆ. ಅಂದರೆ ಶರೀರದಲ್ಲಿ ಬದಲಾವಣೆ ಅಥವಾ ಚಟುವಟಿಕೆ ಉಂಟಾದಾಗಲೆಲ್ಲಾ ಅದಕ್ಕನುಗುಣವಾಗಿ ಮನಸ್ಸಿನಲ್ಲಿಯೂ ಅದರದೇ ಆದ ಸಮಾನಾಂತರ ಚಟುವಟಿಕೆ ಉಂಟಾಗುತ್ತದೆ. ಇದು ಮನಸ್ಸು ಮತ್ತು ಶರೀರಗಳು ಪರಸ್ಪರರ ಮೇಲೆ ಪ್ರಭಾವ ಬೀರುವಂತೆ ಭಾಸವಾಗಲು ಕಾರಣವಾಗಿದೆ. ಶರೀರ ಮತ್ತು ಮನಸ್ಸುಗಳ ಪರಸ್ಪರ ಕಾರ್ಯಗಳು ನಿಯೋಜಿತ ರೀತಿಯಲ್ಲಿ ನಡೆಯುತ್ತದೆ. ಈ ಪೂರ್ವ ನಿಯೋಜನೆಯು ಪರಿಪೂರ್ಣ ದ್ರವ್ಯವಾದ ದೇವರ ಮೂಲಕ ನಡೆಯುತ್ತದೆ. ಈ ನಿಯೋಜನೆಯಿಂದಾಗಿ ಮಾನಸಿಕ ಕ್ರಿಯೆಯು ಶಾರೀರಕವಾಗಿ ಪ್ರತಿಬಿಂಬಿತವಾಗುತ್ತದೆ, ಮತ್ತು ಶಾರೀರಕ ಕ್ರಿಯೆಯು ಮಾನಸಿಕವಾಗಿ ಪ್ರತಿಬಿಂಬಿತವಾಗುತ್ತದೆ. ಇದನ್ನು ಲೈಬ್ನಿಜ್‌ನು ಮನಸ್ಸು ಶರೀರಗಳ "ಸಮಾನಾಂತರ ಸಮಾನತ್ವ" ಎಂದಿದ್ದಾನೆ. ಮನಸ್ಸು ಮತ್ತು ಶರೀರಗಳನ್ನು ಒಬ್ಬನೇ ಆದ ತಯಾರಕನಿಂದ ನಿರ್ಮಿಸಲ್ಪಟ್ಟ ಎರಡು ಗಡಿಯಾರಗಳು ಹೇಗೆ ಪರಸ್ಪರವಾಗಿ ಒಂದೇ ರೀತಿಯಲ್ಲಿ ಗಂಟೆಯನ್ನು ತೋರಿಸುತ್ತವೋ, ಅದೇ ರೀತಿ ಶರೀರ ಮತ್ತು ಮನಸ್ಸು ಒಂದೇ ಜೀವಾಣು ಮೂಲವನ್ನು ಪಡೆದಿದ್ದು ಪರಸ್ಪರ ಸಮಾನತ್ವವನ್ನು ಹೊಂದಿವೆ. ಒಂದು ಗಡಿಯಾರದಲ್ಲಿ 12 ಗಂಟೆ ತೋರಿಸಲ್ಪಟ್ಟರೆ ಮತ್ತೊಂದು ಗಡಿಯಾರದಲ್ಲಿ 12 ಗಂಟೆ ತೋರಿಸಲ್ಪಡುವುದು ಆ ಗಡಿಯಾರಗಳ ನಡುವೆ ನಡೆಯುವ ಪ್ರಕ್ರಿಯೆಯಿಂದಲ್ಲ. ಅದೇ ರೀತಿ ಮನಸ್ಸು ಮತ್ತು ಶರೀರದ ಚಟುವಟಿಕೆಗಳು ಪರಸ್ಪರ ಹೊಂದಾಣಿಕೆ ಇರುವಂತೆ ಕಂಡುಬರುವುದು ಅವುಗಳ ಪ್ರಕ್ರಿಯೆಯಿಂದಲ್ಲ. ಈ ಹೊಂದಾಣಿಕೆಗೆ ಅವುಗಳ ನಡುವಿರುವ ಪೂರ್ವ ನಿಯೋಜಿತ ಸಾಮರಸ್ಯವೇ ಕಾರಣ. ಶರೀರ ಮತ್ತು ಮನಸ್ಸಿನ ನಡುವೆ ಪರಸ್ಪರ ಪ್ರಕ್ರಿಯೆಯು ಇಲ್ಲದಿರುವುದರಿಂದ ಶರೀರ ಮತ್ತು ಮನಸ್ಸಿನ ಸಮಸ್ಯೆಯು ಇಲ್ಲವಾಗುತ್ತದೆ.

ಜಾನ್ ಲಾಕ್—1632–1704

ವಿಚಾರವಾದವನ್ನು ಪ್ರತಿಪಾದಿಸಿದ ಡೇಕಾರ್ಟ್ ಅಧ್ಯಾತ್ಮಶಾಸ್ತ್ರದ ಸಮಸ್ಯೆಯನ್ನು ತನ್ನ ವಿಚಾರವಾದವು ಸಂಪೂರ್ಣವಾಗಿ ಬಗೆಹರಿಸುತ್ತದೆ ಎಂದು ಭಾವಿಸಿದ್ದನು.

ಆದರೆ ಆತನ ಅನುಯಾಯಿಗಳ ಕೈಲಿ ಆ ವಿಚಾರವಾದವು ಪ್ರಾಯೋಗಿಕವಾಗಿ ನಿರೂಪಿಸಲ್ಪಟ್ಟಾಗ ಸತ್ಯ ತತ್ವದ ವಿಚಾರದಲ್ಲಿ ಅವರಲ್ಲಿ ಭಿನ್ನಾಭಿಪ್ರಾಯವುಂಟಾದವು ಮಾತ್ರವಲ್ಲದೆ ವಿಚಾರವಾದವು ಮುಂದುವರಿಯುತ್ತಾ ರಹಸ್ಯ ವಾದದಲ್ಲಿ ಕೊನೆಗೊಳ್ಳುತ್ತದೆ. ವಿಚಾರವಾದದ ಪ್ರಕಾರ ನಮ್ಮ ಮನಸ್ಸಿನಲ್ಲಿಯ ಎಲ್ಲ ರೀತಿಯ ಕಲ್ಪನೆಗಳು ನಮ್ಮ ಹುಟ್ಟಿನೊಡನೆ ತುಂಬಿದ್ದು ಅವುಗಳನ್ನು ಧ್ಯಾನದ ಮೂಲಕ ತಿಳಿಯಬೇಕಾಗಿತ್ತು. ಧ್ಯಾನದಿಂದಲೇ ಜ್ಞಾನವನ್ನು ಗಳಿಸುವುದಾದರೆ ತತ್ವಶಾಸ್ತ್ರದಲ್ಲಿ ವಿಚಾರವಾದವು ಯಾವ ಪ್ರಯೋಜನಕ್ಕೂ ಬಾರದ ವಾದವಾಗುತ್ತದೆ. ವಿಚಾರವಾದವನ್ನು ಮತ್ತು ಅದರ ಆಧಾರವಾಗಿರುವ ಮೂಲಕಲ್ಪನೆಗಳನ್ನು ಮೊಟ್ಟಮೊದಲು ಪ್ರಶ್ನಿಸಿದವನು ಬ್ರಿಟನ್ನಿನ ಜಾನ್ ಲಾಕ್. ವಿಚಾರವಾದದ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಿಸಿದ ಜಾನ್ ಲಾಕ್ "ಅನುಭವವಾದ" ಎಂಬ ಒಂದು ಹೊಸ ಸಿದ್ಧಾಂತವನ್ನೇ ಪ್ರತಿಪಾದಿಸಿದನು. ಮುಂದೆ ಈ ಅನುಭವವಾದವು ತತ್ವಶಾಸ್ತ್ರದ ಒಂದು ಶಾಖೆಯಾದ "ಜ್ಞಾನಮೀಮಾಂಸೆ"ಯ ರೂಪವನ್ನು ತಾಳಿತು. ಜಾನ್ ಲಾಕ್ ಬರೆದ "ಮಾನವನ ತಿಳುವಳಿಕೆ" (human understanding) ಎಂಬ ಪ್ರಬಂಧವು ಅನುಭವವಾದದ ಸಿದ್ಧಾಂತಗಳನ್ನು ಒಳಗೊಂಡಿರುವುದಲ್ಲದೆ ಜ್ಞಾನಮೀಮಾಂಸೆಯ ಉಗಮಕ್ಕೂ ನಾಂದಿಯಾಯಿತು. ಸಾಂಪ್ರದಾಯಿಕವಾಗಿ ತತ್ವಶಾಸ್ತ್ರವನ್ನು ಆದಿ ಭೌತಿಕಶಾಸ್ತ್ರ ಅಥವಾ ಸತ್ಯದ ನಿರೂಪಣೆ ಎಂದೇ ಪರಿಗಣಿಸಲಾಗಿತ್ತು. ಆದರೆ ಲಾಕ್‌ನ ಪ್ರಕಾರ ದೇವರು, ಮನಸ್ಸು, ಆತ್ಮದ ಅಮರತ್ವ, ಜಗತ್ತು ಮತ್ತು ಅದರ ಸತ್ಯಾಸತ್ಯತೆ ಮುಂತಾದ ವಿಷಯಗಳನ್ನೊಳಗೊಂಡ ತತ್ವಮೀಮಾಂಸೆಯ ಬಗ್ಗೆ ನಮ್ಮ ಜ್ಞಾನದ ಮಿತಿಯನ್ನು ಮೊದಲು ಪರಿಗಣಿಸಬೇಕಾಗಿದೆ. ಮೊಟ್ಟಮೊದಲು ನಮ್ಮ ಜ್ಞಾನವೆಂದರೇನು ? ಅದರ ಮೂಲಗಳಾವುವು ? ಜ್ಞಾನದ ಸಮಂಜಸತೆಯ ನಿಯಮ ಮತ್ತು ಒರೆಗಲ್ಲು ಯಾವುದು ? ಜ್ಞಾನದ ಮಿತಿಯೇನು? ಎಂಬ ಪ್ರಶ್ನೆಗಳನ್ನು ಉತ್ತರಿಸಬೇಕಾದುದು ಮೊದಲ ಕರ್ತವ್ಯ. ಇದು ಲಾಕ್‌ನ ಅಭಿಮತ. ಮೇಲ್ಕಂಡ ವಿಷಯಗಳನ್ನು ಅರಿತ ನಂತರವೇ ಅಧಿಭೌತಿಕ ವಿಷಯಗಳ ಬಗ್ಗೆ ಜಿಜ್ಞಾಸೆಯನ್ನು ನಡೆಸಬಹುದಾಗಿದೆ. ಅಂದರೆ ನಾವು ತತ್ವಶಾಸ್ತ್ರವನ್ನು ಪ್ರವೇಶಿಸುವ ಮೊದಲು ನಮ್ಮ ತಿಳುವಳಿಕೆ ಮತ್ತು ಸಾಮರ್ಥ್ಯಗಳನ್ನು ಕುರಿತು ಸಾಕಷ್ಟು ಪರಿಜ್ಞಾನ ಪಡೆದಿರುವುದು ಉತ್ತಮ. "ಮಾನವನ ತಿಳುವಳಿಕೆಯ ಮಿತಿ" ಎಂಬ ತನ್ನ ಪ್ರಬಂಧವಲ್ಲಿ ಲಾಕ್‌ನು ಒಂದುಕಡೆ ವಿಚಾರವಾದವನ್ನು ನಿರಾಕರಿಸಿ ಮತ್ತೊಂದುಕಡೆ ಮಿತಿಗೊಳಪಟ್ಟ ತನ್ನ ಅನುಭವವಾದವನ್ನು ವಿವರಿಸುತ್ತಾನೆ. ಈ ರೀತಿ ಲಾಕ್‌ನ ತತ್ವನಿರೂಪಣೆಯು ಎರಡು ಮುಖಗಳಿಂದ ಕೂಡಿದೆ. ಇವುಗಳಲ್ಲಿ ಮೊದಲ ವಿಭಾಗವು ಡೇಕಾರ್ಟೆಯ ವಿಚಾರವಾದವನ್ನು ಆತನ ಮೂಲಕಲ್ಪನಾ ಸಿದ್ಧಾಂತವನ್ನು ಸಹಿತ ನಿರಾಕರಿಸಿದ್ದರೆ, ರಚನಾತ್ಮಕವಾಗಿ ಮತ್ತೊಂದು ವಿಭಾಗವು ಅನುಭವವಾದದ ಮೂಲತತ್ವವನ್ನು ವಿವರಿಸುತ್ತದೆ.

ಮೂಲಕಲ್ಪನೆಗಳ ನಿರಾಕರಣೆ :

ಅನುಭವವಾದವನ್ನು ಉದ್ದೀಪನಗೊಳಿಸಲು ವಿಚಾರವಾದವನ್ನು ನಿರಾಕರಿಸಬೇಕಾದುದರಿಂದ ಅದರ ಮೂಲವಾದ ಮೂಲಕಲ್ಪನಾ ಸಿದ್ಧಾಂತವನ್ನು ಲಾಕ್ ಸಂಪೂರ್ಣವಾಗಿ ನಿರಾಕರಿಸುತ್ತಾನೆ. ಮೂಲಕಲ್ಪನೆಗಳು ನಮ್ಮ ಮಿದುಳಿನಲ್ಲಿ ದೇವರಿಂದ ಬರೆಯಲ್ಪಟ್ಟ ಮಾನವನು ಅವನ್ನು ತನ್ನ ಹುಟ್ಟಿನೊಡನೆ ಪಡೆಯುವುದಾದರೆ ಅವು ಎಲ್ಲರಲ್ಲಿಯೂ ಒಂದೇ ರೀತಿಯಲ್ಲಿರಬೇಕು. ದೇವರು ಪಕ್ಷಪಾತಿಯಲ್ಲವಾದ್ದರಿಂದ ಒಬ್ಬರಲ್ಲಿ ಹೆಚ್ಚು ಕಲ್ಪನೆಗಳನ್ನು ಮತ್ತೊಬ್ಬರಲ್ಲಿ ಕಡಿಮೆ ಕಲ್ಪನೆಗಳನ್ನು ತುಂಬಲು ಸಾಧ್ಯವಿಲ್ಲ. ಆದರೆ ವಿವಿಧ ರೀತಿಯ ವ್ಯಕ್ತಿಗಳನ್ನು ಪರಿಶೀಲಿಸಿದರೆ ಅವರ ಕಲ್ಪನೆ ಮತ್ತು ಭಾವನೆಗಳಲ್ಲಿ ವ್ಯತ್ಯಾಸವನ್ನು ಕಾಣಬಹುದಾಗಿದೆ. ಡೇಕಾರ್ಟೆನ ಹೇಳಿಕೆ ಸತ್ಯವಾಗಿದ್ದರೆ ನಾಗರಿಕನಿಗೂ, ಅನಕ್ಷರಸ್ಥನಿಗೂ, ಮನೋವಿಕಲ್ಪಗೊಂಡ ವ್ಯಕ್ತಿಗೂ ವ್ಯತ್ಯಾಸವಿರಲು ಸಾಧ್ಯವಿಲ್ಲ. ಆದರೆ ನಿಜಸ್ಥಿತಿ ಹಾಗಿಲ್ಲ. ಈ ಟೀಕೆಯನ್ನು ಉತ್ತರಿಸುವ ವಿಚಾರವಾದಿಗಳು ಎಲ್ಲಾ ವ್ಯಕ್ತಿಗಳೂ ಒಂದೇ ತೆರನಾಗಿ ಮೂಲಕಲ್ಪನೆಗಳನ್ನು ಹೊಂದಿದ್ದರೂ ಅವರೆಲ್ಲರೂ ಒಂದೇ ರೀತಿಯಲ್ಲಿ ಅವುಗಳನ್ನು ತಿಳಿದಿರುವುದಿಲ್ಲ ಎಂದು ವಾದಿಸುತ್ತಾರೆ. ಆದರೆ ಲಾಕ್‌ನ ಪ್ರಕಾರ ಈ ವಾದವು ತರ್ಕ ವಿರುದ್ಧವಾಗಿದೆ. ನಾವು ಕಲ್ಪನೆಗಳನ್ನು ಪಡೆದಿದ್ದೇವೆ, ಆದರೆ ಅವುಗಳನ್ನು ತಿಳಿದಿಲ್ಲ ಎಂದರೆ ಅದು ವಿರೋಧಾಭಾಸವಾಗುತ್ತದೆ. ನಮ್ಮಲ್ಲಿ ಕಲ್ಪನೆಗಳಿವೆ ಎಂದರೆ ಅವುಗಳ ಬಗ್ಗೆ ಪ್ರಜ್ಞೆ ಇರುವುದೆಂದೇ ಅರ್ಥ. ಇಷ್ಟು ಮಾತ್ರವಲ್ಲದೆ ಒಂದು ಕಲ್ಪನೆ ಒಬ್ಬನಿಗೆ ಒಳ್ಳೆಯದಾಗಿದ್ದರೆ ಅದೇ ಕಲ್ಪನೆ ಮತ್ತೊಬ್ಬನಿಗೆ ಕೆಡುಕಾದ ಕಲ್ಪನೆಯಾಗಿರುತ್ತದೆ. ಈ ವಿಷಯಗಳನ್ನೆಲ್ಲಾ ಪರಿಶೀಲಿಸಿದರೆ ಮೂಲಕಲ್ಪನೆಯೇ ಇಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ಆದುದರಿಂದ ನಮ್ಮ ಜ್ಞಾನವೆಲ್ಲವೂ ಹುಟ್ಟಿನ ನಂತರ ನಮ್ಮ ಅನುಭವದಿಂದಲೇ ಬರುತ್ತದೆ. ಗಣಿತ ಶಾಸ್ತ್ರದ ಜ್ಞಾನವೂ ಸೇರಿದಂತೆ ಎಲ್ಲ ರೀತಿಯ ಜ್ಞಾನವನ್ನೂ ಅನುಭವದಿಂದಲೇ ಪಡೆಯಬಹುದಾಗಿದೆ. ಆದುದರಿಂದ ನಾವು ಹುಟ್ಟಿದಾಗ ನಮ್ಮ ಮಿದುಳು ಅಥವಾ ಮನಸ್ಸು ಯಾವ ಕಲ್ಪನೆ ಅಥವಾ ಭಾವನೆಗಳನ್ನೂ ಹೊಂದಿರದೆ ಕಾಗದದ ಖಾಲಿ ಹಾಳೆಯಂತಿರುತ್ತದೆ. ಇಂತಹ ಮನಸ್ಸನ್ನು ಲಾಕ್ ಯಾವ ವಸ್ತುವನ್ನೂ ಹೊಂದಿರದ ಖಾಲಿ ಕೋಣೆಗೆ ಹೋಲಿಸುತ್ತಾನೆ. ಹುಟ್ಟುವಾಗ ಯಾವ ಲಕ್ಷಣಗಳನ್ನೂ ಹೊಂದಿರದ ನಮ್ಮ ಮನಸ್ಸು ಆನಂತರದ ಅನುಭವದ ಮೂಲಕ ವಿವಿಧ ರೀತಿಯಲ್ಲಿ ಕಲ್ಪನೆಗಳನ್ನು ಪಡೆದು ಜ್ಞಾನವನ್ನು ಗಳಿಸುತ್ತದೆ.

ಅನುಭವವಾದದ ಮೂಲತತ್ವಗಳು :

ಲಾಕ್‌ನ ತತ್ವಮೀಮಾಂಸೆಯ ರಚನಾತ್ಮಕ ವಿಭಾಗವು ರಾಜ್ಯಶಾಸ್ತ್ರ, ನೀತಿಶಾಸ್ತ್ರ ಮತ್ತು ಅನುಭವವಾದದ ಮೂಲತತ್ವಗಳನ್ನೊಳಗೊಂಡಿದೆ. ಮಾನವನ ಎಲ್ಲಾ ಕ್ಷೇತ್ರಗಳ ಜ್ಞಾನವು ಅನುಭವದಿಂದಲೇ ಲಭ್ಯವಾಗುತ್ತದೆ. ಇಂತಹ ಅನುಭವದಿಂದ

ಸಾಮಾಜಿಕ, ಧಾರ್ಮಿಕ, ನೈತಿಕ ಸೌಂದರ್ಯದ ಜ್ಞಾನ ನಮ್ಮಲ್ಲಿ ಉಂಟಾಗುತ್ತದೆ. ಇಂತಹ ಯಾವ ಜ್ಞಾನವನ್ನು ಅಥವಾ ಭಾವನೆಗಳನ್ನು ನಾವು ಹುಟ್ಟಿದಾಗ ಪಡೆದಿರಲಿಲ್ಲ. ಈ ಎಲ್ಲ ಭಾವನೆಗಳು ಇಂದ್ರಿಯಾನುಭವದಿಂದಲೇ ಉಂಟಾದವುಗಳಾಗಿವೆ.

ಇಂದ್ರಿಯಗಳು ಹೊರಪ್ರಪಂಚದೊಡನೆ ನೇರ ಸಂಪರ್ಕವನ್ನು ಹೊಂದಿ ನಮ್ಮ ಮನಸ್ಸಿನಲ್ಲಿ ಹೊರಪ್ರಪಂಚದ ವಸ್ತುಗಳ ಬಗ್ಗೆ ಕಲ್ಪನೆಗಳನ್ನು ನಿರ್ಮಿಸಲು ಸಹಕರಿಸುತ್ತವೆ. ಇಂತಹ ಇಂದ್ರಿಯಗಳು ಐದು ವಿಧಗಳು : ಕಣ್ಣು, ಮೂಗು, ನಾಲಿಗೆ, ಕಿವಿ ಮತ್ತು ಚರ್ಮ. ಇವು ನಮ್ಮ ಮನಸ್ಸಿಗೆ ವಿವಿಧ ರೀತಿಯ ಅನುಭವಗಳನ್ನು ಒದಗಿಸುತ್ತವೆ. ಆದುದರಿಂದ ಈ ಪಂಚೇಂದ್ರಿಯಗಳನ್ನು ಜ್ಞಾನವಾಹಿನಿಗಳೆಂದು ಕರೆಯಲಾಗಿದೆ. ಇವುಗಳೇ ನಮ್ಮ ಜ್ಞಾನ ಮತ್ತು ಭಾವನೆಗಳ ಆಧಾರಸ್ತಂಭಗಳು.

ಜ್ಞಾನ ಸಾಮಾನ್ಯರ ಮತ್ತು ಧಾರ್ಮಿಕ ಮನೋಭಾವವುಳ್ಳವರ ಅನುಭವಗಳನ್ನು ಗಳಿಸುವ ಸಲುವಾಗಿ ಲಾಕ್ ಇಂದ್ರಿಯ ಜ್ಞಾನದೊಂದಿಗೆ ಪ್ರತಿಭಾನ ಮತ್ತು ಪ್ರದರ್ಶನಾತ್ಮಕ ಅಥವಾ ಪ್ರತಿಪಾದನಾ ಜ್ಞಾನವನ್ನು ಅಂಗೀಕರಿಸುತ್ತಾನೆ. ಇಂದ್ರಿಯಾನುಭವವು ಪಂಚೇಂದ್ರಿಯಗಳ ಕ್ರಿಯೆಗಳಿಂದ ಸಾರ್ಥವಾಗುವುದಾದರೆ, ಪ್ರತಿಭಾನವು ನಮ್ಮ ಮನಸ್ಸಿನ ಆಂತರಿಕ ಜ್ಞಾನವಾಗಿದೆ. ಪ್ರತಿಪಾದನಾ ಜ್ಞಾನವು ಇಂದ್ರಿಯಾನುಭವದ ಆಧಾರವನ್ನು ಪಡೆದಿದ್ದು ನಿತ್ಯ ಜ್ಞಾನಿಯಾದ ದೇವರ ಇರವನ್ನು ಅರಿಯುವ ಸಾಧನವಾಗಿದೆ. ಇಂದ್ರಿಯ ಜ್ಞಾನವು ಬಾಹ್ಯ ಸಂವೇದನೆಯಾದರೆ ವಿಚಾರಕ್ಕೂ ಮೀರಿದ ಪ್ರತಿಭಾನವು ಆಂತರಿಕ ಸಂವೇದನೆಯಾಗಿದೆ.

ಇಂದ್ರಿಯ ಜ್ಞಾನವು ತನ್ನದೇ ಆದ ಒಂದು ಮಿತಿಯನ್ನು ಹೊಂದಿರುವುದರಿಂದ ಹಾಗೂ ಆತ್ಮ ಮತ್ತು ದೇವರ ಇರವನ್ನು ತಿಳಿಸಲು ಅಸಮರ್ಥವಾಗಿರುವುದರಿಂದ ಲಾಕ್ ಪ್ರತಿಭಾನ ಜ್ಞಾನ ಮತ್ತು ಪ್ರತಿಪಾದನಾ ಜ್ಞಾನವನ್ನು ಅಂಗೀಕರಿಸಬೇಕಾಗುತ್ತದೆ. ಪ್ರತ್ಯಕ್ಷದಿಂದಲೇ ನಾವು ಬಹಳಷ್ಟು ಜಾನವನ್ನು ಪಡೆದರೂ ನಮ್ಮೆಲ್ಲಾ ಜ್ಞಾನವೂ ಪ್ರತ್ಯಕ್ಷದಿಂದಲೇ ಉಂಟಾಗಲು ಸಾಧ್ಯವಿಲ್ಲ. ಉದಾಹರಣೆಗೆ, ಅತಿದೂರದಲ್ಲಿರುವ ವಸ್ತುಗಳನ್ನು ಇಂದ್ರಿಯಾನುಭವದಿಂದ ತಿಳಿಯಲು ಸಾಧ್ಯವಿಲ್ಲ. ಇಂತಹ ಸಂದರ್ಭಗಳಲ್ಲಿ ನಾವು ಅನುಮಾನ ಮತ್ತು ಶಬ್ದ ಪ್ರಮಾಣಗಳ ಸಹಾಯವನ್ನು ಪಡೆಯುತ್ತೇವೆ. ಆದರೆ ಅವುಗಳನ್ನು ಕೂಡ ಒಪ್ಪಿಕೊಳ್ಳಬೇಕಾದರೆ ಇವುಗಳನ್ನು ಅನುಭವದ ಒರೆಗಲ್ಲಿನಿಂದ ಪರೀಕ್ಷಿಸಬೇಕಾಗಿದೆ.

ಅನುಭವವಾದಿಯಾದ ಲಾಕ್ ಇತರ ವಾಸ್ತವವಾದಿಗಳಂತೆ ಇಂದ್ರಿಯ ಜ್ಞಾನದಿಂದ ತಿಳಿಯಬಹುದಾದಂತಹ ಪ್ರಾಪಂಚಿಕ ವಸ್ತುಗಳನ್ನು ಒಂದು ಕಡೆಯಲ್ಲಿ ಅಂಗೀಕರಿಸಿದರೆ ಮತ್ತೊಂದು ಕಡೆ ಚಿದ್‌ವಾದಿಗಳು ನಿರೂಪಿಸುವ ಮನಸ್ಸಿನ ಅಸ್ತಿತ್ವವನ್ನು, ಇನ್ನೊಂದುಕಡೆ ಧಾರ್ಮಿಕ ಭಾವನೆಯುಳ್ಳವರು ಅಂಗೀಕರಿಸುವ ದೇವರ ಕಲ್ಪನೆಯನ್ನು ಒಪ್ಪುತ್ತಾನೆ. ಮನಸ್ಸು ಅಥವಾ ಆತ್ಮ ಮತ್ತು ದೇವರನ್ನು ಇಂದ್ರಿಯ ಜ್ಞಾನದ ಮೂಲಕ ತಿಳಿಸಲು ಸಾಧ್ಯವಿಲ್ಲದ್ದರಿಂದ ಆತನು ಕ್ರಮವಾಗಿ ಪ್ರತಿಭಾನವನ್ನು ಮತ್ತು

ಪ್ರತಿಪಾದನಾ ಜ್ಞಾನವನ್ನು ಅಂಗೀಕರಿಸುತ್ತಾನೆ. ಹೀಗೆ ಲಾಕ್ ಮೂರು ರೀತಿಯ ದ್ರವ್ಯಗಳಿರುವುದನ್ನು ಮತ್ತು ಅವುಗಳ ಜ್ಞಾನದ ಮೂಲವನ್ನು ಪ್ರತಿಪಾದಿಸುತ್ತಾನೆ. ಆದರೆ ಇಂದ್ರಿಯ ಜ್ಞಾನಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡುವ ಲಾಕ್ ಆ ವಿಭಾಗವನ್ನು ಮತ್ತೂ ವಿಸ್ತೀಕರಿಸುತ್ತಾನೆ. ಲಾಕ್‌ನು ಇಂದ್ರಿಯ ಜ್ಞಾನವನ್ನು ವಿವರಿಸಿದ ರೀತಿಯು ಆ ಕ್ರಮಕ್ಕೆ ಪ್ರತಿನಿಧಿತ ವಾಸ್ತವವಾದ ಎಂಬ ಹೆಸರನ್ನು ತಂದಿತು.

ಪ್ರತಿನಿಧಿತ ವಾಸ್ತವವಾದ :

ಲಾಕನ ಪ್ರಕಾರ ನಮ್ಮ ಇಂದ್ರಿಯಗಳ ಸಹಾಯದಿಂದಲೇ ನಾವು ಪಡೆಯಬಹುದಾದ ಕಲ್ಪನೆಗಳು ಮತ್ತು ಜ್ಞಾನವು ನಾವೆಲ್ಲರೂ ಸಾಮಾನ್ಯವಾಗಿ ಪಡೆಯುವ ಜ್ಞಾನವಾಗಿದೆ. ಈ ಅಭಿಪ್ರಾಯವು ವಿಚಾರವಾದದ ಮೂಲತತ್ವಕ್ಕೆ ವಿರುದ್ಧವಾಗಿದೆ. ಅನುಭವವಾದ ಅಥವಾ ವಾಸ್ತವವಾದದ ಮೂಲತತ್ವಕ್ಕೆ ವಿರುದ್ಧವಾದುದಾಗಿದೆ. ಅನುಭವವಾದ ಅಥವಾ ವಾಸ್ತವವಾದದ ಪ್ರಕಾರ ಭೌತ ದ್ರವ್ಯಗಳು ಸಂಪೂರ್ಣವಾಗಿ ಬೇರೆಯಾಗಿದ್ದು ತಮ್ಮದೇ ಆದ ನಿರ್ದಿಷ್ಟ ಅಸ್ತಿತ್ವವನ್ನು ಹೊಂದಿವೆ. ಮನಸ್ಸು ಭೌತ ವಸ್ತುಗಳನ್ನು ತಿಳಿಯುವುದಾದರೂ ಅದು ಅವುಗಳ ಅಸ್ತಿತ್ವದ ಕಾರಣವಲ್ಲ. ಭೌತ ವಸ್ತುಗಳು ಸ್ವತಂತ್ರವಾಗಿದ್ದು ಯಾವುದೇ ಮನಸ್ಸು ಅವನ್ನು ತಿಳಿದಿರಲಿ ಅಥವಾ ತಿಳಿಯದೇ ಇರಲಿ ಅವು ತನ್ನದೇ ಆದ ಇರವನ್ನು ಹೊಂದಿರುತ್ತದೆ. ಆದರೆ ಮನಸ್ಸು ಆ ವಸ್ತುಗಳನ್ನು ತನ್ನ ಪ್ರಯತ್ನದಿಂದ ತಿಳಿಯುತ್ತದೆ. ಇಲ್ಲಿ ಸಾಮಾನ್ಯವಾಗಿ ಒಂದೆರಡು ಪ್ರಶ್ನೆಗಳು ಉದ್ಭವಿಸುತ್ತವೆ. ವಸ್ತುಗಳು ಮನಸ್ಸಿನಿಂದ ಪ್ರತ್ಯೇಕವಾಗಿರುವುದಾದರೆ ಮನಸ್ಸು ಅವನ್ನು ಹೇಗೆ ತಿಳಿಯುತ್ತದೆ ? ಮನಸ್ಸಿನಲ್ಲಿ ವಸ್ತುಗಳ ಬಗ್ಗೆ ಕಲ್ಪನೆಗಳು ಹೇಗೆ ಉಂಟಾಗುತ್ತವೆ ? ಈ ಕಲ್ಪನೆಗಳು ಎಷ್ಟರಮಟ್ಟಿಗೆ ವಸ್ತುಗಳನ್ನು ಅವಲಂಬಿಸಿವೆ ? ಇವುಗಳಿಗೆ ಉತ್ತರವಾಗಿ ಲಾಕ್ ತನ್ನ ಪ್ರತಿನಿಧಿತ ವಾಸ್ತವವಾದವನ್ನು ನಿರೂಪಿಸುತ್ತಾನೆ. ವಾಸ್ತವವಾದದ ಮುಖ್ಯ ಅಭಿಪ್ರಾಯವಾದ ವಸ್ತುಗಳ ಸ್ವತಂತ್ರ ಇರುವಿಕೆಯನ್ನು ಅಂಗೀಕರಿಸಿದ ಲಾಕ್ ಸಿದ್ಧಾಂತವನ್ನು ವಾಸ್ತವವಾದದ ದಾರಿಯಲ್ಲಿಯೇ ಪ್ರತಿಪಾದಿಸುತ್ತಾನೆ. ಆತನ ಪ್ರತಿಪಾದನೆಯು ಆತನ ಕಾಲದಲ್ಲಿ ಪ್ರಾಯೋಗಿಕವಾಗಿದ್ದ ಭೌತಶಾಸ್ತ್ರ ಮತ್ತು ಮನಶ್ಶಾಸ್ತ್ರದ ವಿವರಣೆಗಳಿಂದ ಆಧಾರಿತವಾಗಿದೆ. ಆತ ತನ್ನ ಪ್ರತ್ಯಕ್ಷ ಸಿದ್ಧಾಂತವನ್ನು ಅರ್ಥಶಾಸ್ತ್ರ ಮತ್ತು ಶರೀರಶಾಸ್ತ್ರಗಳ ಸಮನ್ವಯತೆಯ ಒಂದು ಉದಾಹರಣೆಯ ಮೂಲಕ ವಿವರಿಸುತ್ತಾನೆ. ವಸ್ತುಗಳ ಮೇಲೆ ಬಿದ್ದ ಬೆಳಕು ಕಣ್ಣಿನ ಪರದೆಯಲ್ಲಿ ಉಂಟಾಗುತ್ತದೆ. ಈ ಅನುಭವವು ಜ್ಞಾನವಾಹಿನಿಗಳ ಮೂಲಕ ಮನಸ್ಸಿಗೆ ಒಯ್ಯಲ್ಪಡುತ್ತವೆ. ಮನಸ್ಸು ಆ ಇಂದ್ರಿಯಾನುಭವಗಳನ್ನು ವ್ಯವಸ್ಥೆಗೊಳಪಡಿಸಿ ಕಣ್ಣು ನೋಡಿದ ವಸ್ತು ಇಂತಹದ್ದೇ ಎಂದು ನಿರ್ಧರಿಸುತ್ತದೆ. ಅಂದರೆ ತಾಂತ್ರಿಕವಾಗಿ ನೋಡುವುದಾದರೆ ವಸ್ತುವಿನ ಪ್ರತಿಬಿಂಬ ಮಾತ್ರ ನಮ್ಮ ಕಣ್ಣಿನಲ್ಲಿ ಉಂಟಾಗಿ ಅದರಿಂದ ನಮ್ಮ ಕಲ್ಪನೆಗಳು ಉಂಟಾಗುತ್ತವೆ. ಮನಸ್ಸು ಯಾವ ವಸ್ತುವನ್ನು ನೇರವಾಗಿ ಅರಿಯ

ಲಾರದು. ವಸ್ತುಗಳ ಬಗ್ಗೆ ಇಂದ್ರಿಯಾನುಭವಗಳು ಮಾತ್ರ ನಮ್ಮ ಮನಸ್ಸನ್ನು ಸೇರುತ್ತವೆ. ಆದರಿಂದ ಪ್ರತಿನಿಧಿತವಾದದಂತೆ ನಾವು ವಸ್ತುಗಳ ಪ್ರತಿಬಿಂಬವನ್ನು ಅರಿಯುವೆವೇ ಹೊರತು ವಸ್ತುಗಳನ್ನಲ್ಲ. ಕೆಲವು ವೇಳೆ ವಸ್ತುಗಳ ಬಗ್ಗೆ ನೇರವಾದ ಪ್ರತ್ಯಕ್ಷಜ್ಞಾನ ಉಂಟಾದರೂ ನಮ್ಮ ಹಿಂದಿನ ಅನುಭವದಿಂದ ಮಾತ್ರ ಅವುಗಳ ಬಗೆ ಅರಿವನ್ನು ಪಡೆಯಬಹುದಾಗಿದೆ. ಮುಖ್ಯವಾಗಿ ನಮ್ಮ ಮನಸ್ಸು ನಿಜವಸ್ತುಗಳನ್ನು ತಿಳಿಯದೆ ಅವುಗಳ ಕಲ್ಪನೆಗಳನ್ನು ಮಾತ್ರ ಅರಿಯುತ್ತದೆಯಾದುದರಿಂದ ನಮ್ಮ ಜ್ಞಾನವು ನೇರಜ್ಞಾನವೆನ್ನಲಾಗುವುದಿಲ್ಲ. ಸೂಕ್ಷ್ಮವಾಗಿ ಹೇಳುವುದಾದರೆ ಇಂದ್ರಿಯಾನುಭವಗಳಿಂದ ನಮ್ಮ ಮನಸ್ಸು ವಸ್ತುಗಳನ್ನು ತಿಳಿಯಲು ಸಾಧ್ಯವಿಲ್ಲ. ಅದು ವಸ್ತುಗಳ ಪ್ರತಿರೂಪವನ್ನು ಮಾತ್ರ ತಿಳಿಯಬಲ್ಲದು.

ಲಾಕ್‌ನ ಪ್ರಾತಿನಿಧ್ಯ ವಾಸ್ತವವಾದವು ಅವನ ಅನುಭವವಾದದ ಮೂಲ ಉದ್ದೇಶಗಳನ್ನೇ ತಳ್ಳಿ ಹಾಕುತ್ತದೆ. ಪ್ರಾಮುಖ್ಯವಾಗಿ ಆತನ ಪ್ರಾತಿನಿಧ್ಯ ಸಿದ್ಧಾಂತವು ಸಾಮಾನ್ಯ ಜ್ಞಾನದ ಕಲ್ಪನೆಗೆ ಸಂಪೂರ್ಣ ವಿರುದ್ಧವಾಗಿರುತ್ತದೆ. ನಾವು ವಸ್ತುಗಳನ್ನು ಅವಲೋಕಿಸುವುದಲ್ಲದೆ ಅವುಗಳ ಇರವನ್ನು, ಲಕ್ಷಣಗಳನ್ನು ಅರಿಯುವುದು ಸಾಮಾನ್ಯ ಜ್ಞಾನದ ಲಕ್ಷಣ. ಜನಸಾಮಾನ್ಯರು ವಸ್ತುಗಳನ್ನು ನೇರವಾಗಿಯೇ ಅರಿಯುತ್ತೇವೆ ಎಂದು ಭಾವಿಸುವುದಲ್ಲದೆ ಅವುಗಳನ್ನು ಅವುಗಳ ಪ್ರತಿಬಿಂಬದ ಮೂಲಕ ತಿಳಿಯುವೆವೆಂದು ಭಾವಿಸುವಂತಿಲ್ಲ. ವಸ್ತುಗಳನ್ನು ನೇರವಾಗಿ ಅರಿಯುವುದರಿಂದಲೇ ನಮ್ಮ ದಿನನಿತ್ಯದ ಆಗುಹೋಗುಗಳು ನಡೆಯುವುವೆಂದು ಅವರ ದೃಢನಂಬಿಕೆ. ಈ ನಂಬಿಕೆಯನ್ನು ವಿರೋಧಿಸಲು ಲಾಕ್ ಇಚ್ಛೆ ಪಡುವುದಿಲ್ಲ. ಆದ್ದರಿಂದ ತನ್ನ ಪ್ರಾತಿನಿಧಿತ ವಾಸ್ತವ ವಾದವನ್ನು ಜನಸಾಮಾನ್ಯರ ನಂಬಿಕೆಗೆ ಸರಿಹೋಗುವಂತೆ ಮಾಡಲು ಕೆಲವು ಮಾರ್ಗಗಳನ್ನು ಅನುಸರಿಸುತ್ತಾನೆ. ಈ ಮಾರ್ಗಗಳು ತನ್ನ ಮೂಲ ಅನುಭವವಾದಕ್ಕೆ ವಿರುದ್ಧವಾದವುಗಳಾದರೂ ಜನಸಾಮಾನ್ಯರನ್ನು ಮತ್ತು ಧರ್ಮಾಭಿಮಾನಿಗಳನ್ನು ತೃಪ್ತಿಗೊಳಿಸಲು ಅವನು ಆ ಮಾರ್ಗಗಳನ್ನು ಅನುಸರಿಸಲೇಬೇಕಾಗುತ್ತದೆ. ಮೊದಲನೆಯದಾಗಿ ಎಲ್ಲಾ ವಸ್ತುಗಳಲ್ಲಿಯೂ ಎರಡು ರೀತಿಯ ಗುಣಗಳಿದ್ದು, ಅವುಗಳಲ್ಲಿ ಒಂದು ರೀತಿಯವು ವಸ್ತುಗಳಲ್ಲಿ ಶಾಶ್ವತವಾಗಿರುನಂತೆಯೂ ಮತ್ತೊಂದು ವಿಧದವು ವೀಕ್ಷಿಸುವ ನಮ್ಮ ಮನಸ್ಸಿನಲ್ಲಿರುವಂತೆಯೂ ಪ್ರತಿಪಾದಿಸುತ್ತಾನೆ. ವಸ್ತುಗಳಲ್ಲೀ ಶಾಶ್ವತವಾಗಿರುವ ಗುಣಗಳನ್ನು ಪ್ರಾಥಮಿಕ ಗುಣಗಳೆಂದು, ನಮ್ಮ ಮನಸ್ಸು ಪ್ರತಿನಿಧಿತ ರೂಪದಲ್ಲಿ ಅರಿಯುವ ಗುಣಗಳನ್ನು ದ್ವಿತೀಯ ಗುಣಗಳೆಂದೂ ಕರೆಯುತ್ತಾನೆ. ಒಂದು ವಸ್ತುವಿನ ಘನರೂಪ, ಚಲನೆ ಮತ್ತು ಸಂಖ್ಯೆಗಳನ್ನು ಪ್ರಾಥಮಿಕ ಗುಣಗಳೆಂದು ಪರಿಗಣಿಸಿ ಅವುಗಳನ್ನು ವಸ್ತುವಿನಿಂದ ಬೇರ್ಪಡಿಸಲು ಸಾಧ್ಯವಿಲ್ಲ ಎನ್ನುತ್ತಾನೆ. ವಸ್ತುವಿನ ದೃಷ್ಟಿಯಿಂದ ಈ ಪ್ರಾಥಮಿಕ ಗುಣಗಳು ಅತ್ಯಂತ ಪ್ರಾಮುಖ್ಯಗುಣಗಳಾಗಿವೆ. ವಸ್ತುವಿನ ದ್ವಿತೀಯ ಗುಣಗಳು ಪ್ರಾಥಮಿಕ ಗುಣದ ಪರಿಣಾಮದ ರೂಪದಲ್ಲಿ ನಮ್ಮ ಮನಸ್ಸಿನಲ್ಲಿ ಇರುವಂತಹವುಗಳಾಗಿವೆ. ಬಣ್ಣ, ರುಚಿ, ಗಂಧ ಮುಂತಾದುವು ದ್ವಿತೀಯ ರೀತಿಯ ಗುಣಗಳಾಗಿವೆ.

ಈ ಗುಣಗಳು ಅವುಗಳನ್ನು ವೀಕ್ಷಿಸುವ ಮನಸ್ಸನ್ನು ಅವಲಂಬಿಸಿವೆ. ಒಬ್ಬ ವ್ಯಕ್ತಿಯು ನೀಲಿಬಣ್ಣದ ಗಾಜಿನ ಮೂಲಕ ವಸ್ತುಗಳನ್ನು ನೋಡಿದಾಗ ಅವು ನೀಲಿಯಾಗಿಯೇ ಕಾಣಿಸುತ್ತವೆ. ಆದರೆ ಈ ನೀಲಿಬಣ್ಣವು ವಸ್ತುವಿನ ನಿಜಸ್ವರೂಪವಲ್ಲ. ಈ ಜ್ಞಾನವು ಬಹಳಷ್ಟುಮಟ್ಟಿಗೆ ನಮ್ಮ ವೀಕ್ಷಣೆಯ ಮಾಧ್ಯಮದ ಮೇಲೆ ಮತ್ತು ನಮ್ಮ ಮೂಲ ನಂಬಿಕೆಯ ಮೇಲೆ ಅವಲಂಬಿತವಾಗಿವೆ. ಪ್ರಾಥಮಿಕ ಗುಣಗಳು ನಮ್ಮ ಮನಸ್ಸಿನಿಂದ ಬೇರೆಯಾಗಿದ್ದು ಅವನ್ನು ಅವಲಂಬಿಸದೇ ಇರುವುದರಿಂದ ಅವು ವಸ್ತುವಿನಲ್ಲಿಯೇ ಇರಬೇಕಾಗಿದ್ದು ವಸ್ತುಗಳ ಸಹಜ ಅಸ್ತಿತ್ವವನ್ನು ಸೂಚಿಸುತ್ತವೆ.

ಇದೇ ವಿವರಣೆಯನ್ನು ಲಾಕ್ ಮತ್ತೊಂದು ರೀತಿಯಲ್ಲಿ ಕೊಡುತ್ತಾನೆ. ಅದರ ಪ್ರಕಾರ ನಾವು ಅರಿಯುವ ಗುಣಗಳೆಲ್ಲವೂ ಯಾವುದಾದರೊಂದು ದ್ರವ್ಯದಲ್ಲಿರಲೇಬೇಕು. ದ್ರವ್ಯಗಳಿಂದ ಗುಣಗಳನ್ನು ಬೇರ್ಪಡಿಸಿದರೆ ದ್ರವ್ಯದಲ್ಲಿ ಏನೂ ಉಳಿಯದೇ ಅದನ್ನು ತಿಳಿಯಲು ಸಾಧ್ಯವಾಗುವುದಿಲ್ಲ. ಅಂದರೆ ಗುಣಗಳಿದ್ದರೆ ಮಾತ್ರ ದ್ರವ್ಯವನ್ನು ಅರಿಯಬಹುದಾಗಿದೆ. ಗುಣಗಳಿಗೆ ಆಧಾರವಾಗಿ ದ್ರವ್ಯವೊಂದಿಲ್ಲದಿದ್ದರೆ ಆ ಗುಣಗಳಿಗೆ ಆಶ್ರಯ ಇಲ್ಲದೆ ಅವು ಅರ್ಥಹೀನವಾಗುತ್ತವೆ. ಆದುದರಿಂದ ದ್ರವ್ಯ (ವಸ್ತು) ವಿರಲೇಬೇಕು. ಕೊನೆಯದಾಗಿ ನಮ್ಮ ಜ್ಞಾನದ ಮಿತಿಯನ್ನು ಅಂಗೀಕರಿಸಿದ ಲಾಕ್ ಸತ್ಯದ ಎಲ್ಲಾ ಅಂಶಗಳನ್ನು ತಿಳಿಯುವುದು ಅಸಾಧ್ಯವೆಂದು ವಾದಿಸುತ್ತಾನೆ. ಸತ್ಯ ಎನ್ನುವುದು ಬಹುಮುಖವಾಗಿದ್ದು ನಮ್ಮ ಜ್ಞಾನವು ಅವುಗಳೆಲ್ಲವನ್ನೂ ಗ್ರಹಿಸುವುದು ಅಸಾಧ್ಯವೆಂದು ತೀರ್ಮಾನಿಸುತ್ತಾನೆ.

ಆರ್. ರಾಮಕೃಷ್ಣ

'ಹೋಗುವೆನು ನಾ' ಕವನದ ಭಾಷಾವೈಜ್ಞಾನಿಕ ವಿಶ್ಲೇಷಣೆ

1. ಮಹಾಕವಿ ಕುವೆಂಪು ಅವರ ಅತ್ಯುತ್ತಮ ಭಾವಗೀತೆಗಳ ಪೈಕಿ 'ಹೋಗುವೆನು ನಾ'[1] ಎಂಬ ಕವನವೂ ಒಂದಾಗಿದೆ. ಈ ಕವನದಲ್ಲಿ ಕವಿ ಮಲೆನಾಡಿನ ಪ್ರಕೃತಿ ಸೌಂದರ್ಯವನ್ನು ಸಮರ್ಥವಾಗಿ ಸೆರೆಹಿಡಿದಿಟ್ಟಿದ್ದಾರೆ. ಭಾಷಾನಿರ್ವಹಣೆಯಲ್ಲಿ ಕವಿ ಇಲ್ಲಿ ನೂತನತೆಯನ್ನು ತಂದಿದ್ದಾರೆ. ಭಾಷಾವೈಜ್ಞಾನಿಕ ದೃಷ್ಟಿಯಿಂದ ಈ ಕವನವನ್ನು ವಿಶ್ಲೇಷಣೆಗೆ ಒಳಪಡಿಸಿದಾಗ, ಅನೇಕ ಹೊಸ ವಿಚಾರಗಳು ತಿಳಿದು ಬರುತ್ತವೆ. ಹೀಗಾಗಿ ಭಾಷಾಭ್ಯಾಸಿಗಳ ಕುತೂಹಲಕ್ಕೆ ಇದು ಹೆಚ್ಚಿನ ಇಂಬು ಕೊಡುತ್ತದೆ. ಆದುದರಿಂದ ಸಂಖ್ಯಾಶಾಸ್ತ್ರೀಯ ವಿಧಾನದಿಂದ ಪ್ರಕೃತ ಕವನದ ಭಾಷೆಯನ್ನು ವಿವೇಚಿಸುವುದರ ಜೊತೆಗೆ ಕವನದ ಪದರಚನೆ ಮತ್ತು ಅರ್ಥರಚನೆಯನ್ನು ಪರಿಶೀಲಿಸುವುದು ಇಲ್ಲಿನ ಮುಖ್ಯ ಉದ್ದೇಶವಾಗಿದೆ.

2.0. ಕುವೆಂಪುರವರ 'ಹೋಗುವೆನು ನಾ' 104 ಪಂಕ್ತಿಗಳನ್ನೊಳಗೊಂಡ ಒಂದು ದೀರ್ಘ ಕವನ. ಬಯಲು ಸೀಮೆಯ ಬೋಳು ಬಯಲಿನ ಬಾಳಿನ ಗೋಳಿಗೆ ಬೇಸರಗೊಂಡ ಕವಿ, ತನ್ನ ಒಲುಮೆಯ ಗೂಡಾದ ಮಲೆನಾಡಿಗೆ ಹೋಗಲು ಹಾತೊರೆಯುತ್ತಿದ್ದಾರೆ. ಅಲ್ಲಿನ ಪ್ರಕೃತಿ ಚಿತ್ರಗಳು ಕವಿಯನ್ನು ಭಾವಸಮಾಧಿಗೆ ಕೊಂಡೊಯ್ದುವೆ.

2.1. ಕವನದ ಛಂದೋರಚನೆಯಲ್ಲಿ ಮಾತ್ರಗಣದ ಲಯವಿದ್ದು, ಭಾಮಿನೀ ಲಯದ (3+4+3+4) ನಡೆಯನ್ನು ಕಾಣಬಹುದಾಗಿದೆ.

ಉದಾ : ಬೇಸರಾಗಿದೆ ಬಯಲು ಸೀಮೆಯ ಬೋಳು ಬಯಲಿನ ಬಾಳಿದು !
ಬಿಸಿಲು, ಬೇಸಗೆ, ಬೀಸುವುರಿಸೆಕೆ ; ತಾಳಲಾರದ ಗೋಳಿದು !
ಹೋಗುವೆನು ನಾ ಹೋಗುವೆನು ನಾ ನನ್ನ ಒಲುಮೆಯ ಗೂಡಿಗೆ ;
ಬಿಳಿಯ ತಿಂಗಳ ಸಿರಿಬನಂಗಳ ಮಲೆಯ ಮಂಗಳ ನಾಡಿಗೆ !

---

1 ಕುವೆಂಪು—ಹೋಗುವೆನು ನಾ — ಪಕ್ಷಿಕಾಶಿ, ಪು 44—48

ಮೇಲಿನ ಚರಣಗಳನ್ನು ಲಯಕ್ಕನುಸಾರವಾಗಿ ವಿಭಾಗಿಸಿದಾಗ ಜಲ ಷಟ್ಪದಿಯ ರೂಪವು ದೊರೆಯುತ್ತದೆ.

ಬೇಸರಾಗಿದೆ
ಬಯಲು ಸೀಮೆಯ
ಬೋಳು ಬಯಲಿನ ಬಾಳಿದು
ಬಿಸಿಲುಬೇಸಗೆ
ಬೀಸುವುರಿಸೆಕೆ
ತಾಳಲಾರದ ಗೋಳಿದು
ಹೋಗುವೆನು ನಾ
ಹೋಗುವೆನು ನಾ
ನನ್ನ ಒಲುಮೆಯ ಗೂಡಿಗೆ
ಬಿಳಿಯ ತಿಂಗಳ
ಸಿರಿ ಬನಂಗಳ
ಮಳೆಯ ಮಂಗಳ ನಾಡಿಗೆ

ಕವನದಲ್ಲಿ ಲಯದ ಏಕತಾನತೆಯನ್ನು ತಪ್ಪಿಸಲು 3+4 ಲಯದ ಸ್ಥಾನದಲ್ಲಿ ಬೇರೆ ಬೇರೆ ಲಯಗಳ ಗಣಗಳನ್ನು ಮಿಶ್ರಗೊಳಿಸಿ ಕವನಕ್ಕೆ ವೈವಿಧ್ಯತೆಯನ್ನು ತಂದು ಕೊಟ್ಟಿದ್ದಾರೆ ಕವಿ.

ಕವನದ ಪ್ರತಿ ಪಂಕ್ತಿಯಲ್ಲೂ ಯತಿ ಸಹಜವಾಗಿ ಮೂಡಿಬಂದಿದ್ದು, ಪಂಕ್ತಿಗಳ ಸಮನೆ ವಿರಾಮವಿದೆ. ಇಲ್ಲಿನ ಪಂಕ್ತಿಗಳನ್ನು ಗಣವಿಭಜನೆ ಮಾಡಿದಾಗ 728 ಗಣಗಳು ಹಾಗೂ 2600 ಮಾತ್ರೆಗಳಿರುವುದು ಕಂಡುಬರುತ್ತದೆ. ಮಾತ್ರಾನಿಯಮದಲ್ಲಿಕೆಲವೆಡೆ ಸ್ವಾತಂತ್ರ್ಯ ಬಳಸಿರುವುದು ಉಂಟು.

ಉದಾ : ಕೊಳಲನೂದುವನಾಹ ಗೋಪನು ನಲಿಯಲಾ ಮೃಗ ಮನಗಳೂ !

2·2. ಕವನದಲ್ಲಿನ ಧ್ವನಿಗಳು ಹಾಗೂ ಅವು ಆವೃತವಾಗುವ ಸಂಖ್ಯೆ ಪಟ್ಟಿಯು ಈ ಕೆಳಗಿನಂತಿದೆ.

ಧ್ವನಿ	ಆವೃತಸಂಖ್ಯೆ	ವರ್ಣ
ಅ	16	ಅ, ಅ, ಅ, ಅ, ಅ, ಅ, ಅ, ಅ, ಅ, ಅ, ಅ, ಅ, ಅ, ಅ, ಅ, ಅ,
ಆ	3	ಆ, ಆ, ಆ,
ಇ	4	ಇಂ, ಇಂ, ಇಂ, ಇಂ
ಉ	3	ಉ, ಉ, ಉ
ಎ	9	ಎ, ಎ, ಎ, ಎ, ಎ, ಎ, ಎ, ಎಂ, ಎಂ

ಧ್ವನಿ	ಆವೃತಸಂಖ್ಯೆ	ವರ್ಣ
ಏ	1	ಏ
ಒ	8	ಒ, ಒ, ಒಂ, ಒಂ, ಒ, ಒ, ಒ, ಒ
ಕ	123	ಕ, ಕಾ, ಕೂ, ಕೆ, ಕು, ಕ, ಕ, ಕೆ, ಕ್ತ, ಕಾ, ಕ್ತ ಕೆ, ಕೆ, ಕೆ, ಕೆ, ಕಾ, ಕೋ, ಕಾ, ಕಂ, ಕೇ, ಕು, ಕಂ ಕಾ, ಕೋ, ಕ, ಕೋ, ರ್ಕ, ಕ, ಕು, ಕು, ರ್ಕ, ಕಿ, ಕಂ ಕೇ, ಕ, ಕೆ, ಕ, ಕೆ, ಕೆ, ಕು, ಕೆ, ಕೌ, ಕು, ಕ್ಕ ಕ್ಕ, ಕು, ಕ್ಕ, ಕ, ಕೂ, ಕೆ, ಕ, ಕ, ಕೆ, ಕಾ, ಕ್ಕ ಕಾ, ಕ, ಕ್ಕ, ಕಾ, ಕ, ಕೆ, ಕೂ, ಕ, ಕ, ಕ್ಕ, ಕಾ ಕಾ, ಕು, ಕ, ಕ, ಕಾ, ಕಾ, ಕಾ, ಕ, ಕಾ, ಕೆ, ಕು ಕೆ, ಕಾಂ, ಕು, ಕೆ, ಕ, ಕ, ಕ, ಕುಂ, ಕು, ಕು, ಕ್ಕ, ಕೀ ಕಾ, ಕ, ಕೇ, ಕೆ, ಕೇ, ಕಾ, ಕಿ, ಕ, ಕ, ಕೊ, ಕಿ ಕಿ, ಕ್ರ ಕಾ, ಕ, ಕ, ಕೋ, ಕಾ, ಕ, ಕಾ, ಕಿ, ಕೂ ಕಿ, ಕ್ಕ, ಕ್ಕ, ಕೆ, ಕಾ, ಕಾ, ಕ, ಕಂ, ಕೆ, ಕ, ಕ, ಕಾ, ಕೂ
ಖ	2	ಖ, ಖ
ಗ	185	ಗು, ಗು, ಗೂ, ಗೆ, ಗೆ, ಗೆ, ಗೆ, ಗಿ, ಗು ಗೆ, ಗಾ, ಗಾ, ಗೆ, ಗಿ, ಗೆ, ಗೋ, ಗು, ಗು ಗೂ, ಗೆ, ಗ, ಗ, ಗ, ಗೆ, ಗ, ಗೀ, ಗ ಗಿ, ಗ, ಗಿ, ಗ್ಗೆ, ಗ, ಗ, ಗ, ಗ, ಗಿ ಗ, ಗ, ಗಿ, ಗು, ಗ, ಗಿ, ಗಿ, ಗೆ, ಗೆ ಗ, ಗ್ಗ, ಗಿ, ಗ, ಗ, ಗ, ಗ, ಗ, ಗು ಗ, ಗಿ, ಗ, ಗ, ಗಾಂ, ಗ, ಗು, ಗಾ, ಗ ಗೆ. ಗ, ಗ್ಗೆ, ಗ, ಗೆ, ಗೆ, ಗೆ, ಗ, ಗೆ ಗಿ, ಗ, ಗೋ, ಗ, ಗ, ಗ, ಗ, ಗ, ಗಿ ಗ, ಗ, ಗ, ಗೆ, ಗ, ಗ್ಗಿ, ಗಾ, ಗೆ, ಗೆ ಗ, ಗೆ, ಗಿ, ಗೆ, ಗೆ, ಗ, ಗೆ, ಗಾ, ಗೆ ಗೆ, ಗ, ಗೆ, ಗ, ಗಿ, ಗೆ, ಗ್ಗಿ, ಗಾ, ಗ ಗಿ, ಗ, ಗ, ಗ, ಗೆ, ಗಿ, ಗ, ಗು, ಗು ಗೂ, ಗೆ, ಗ, ಗ, ಗ, ಗೆ, ಗ, ಗೆ ಗಂ, ಗಾ, ಗೆ, ಗೊರ್, ಗಿ, ಗೂ, ಗೋ, ಗೊ, ಗ, ಗೆ ಗೆ, ಗೆ, ಗಾ, ಗ, ಗು, ಗಾ. ಗೆ, ಗಿ, ಗ

ಧ್ವನಿ	ಆವೃತಸಂಖ್ಯೆ	ವರ್ಣ
		ಗ, ಗ, ಗೆ, ಗ, ಗ, ಗಿ, ಗೆ, ಗ, ಗು
		ಗೆ, ಗ, ಗ, ಗ್ಯ, ಗ್ಯ, ಗಿ, ಗ, ಗಿ, ಗು
		ಗು, ಗು, ಗೆ, ಗಾ, ಗೆ, ಗೆ, ಗೆ, ಗೆ, ಗ
		ಗ, ಗ, ಗಾ, ಗು, ಗೂ, ಗೆ, ಗೆ, ಗೆ, ಗೆ
		ಗಿ, ಗು, ಗೆ, ಗಾ, ಗೆ
ಜ್ಞ	1	ಜ್ಞೆ
ಚ	22	ಚೆ, ಚುಂ, ಚೀ, ಚಿ, ಚಿ, ಚೆ, ಚಾ, ಚ್ಯ, ಚಿ
		ಚು, ಚ, ಚು, ಚಿ, ಚ್ಚೆ, ಚ್ಚಿ, ಚ್ಚ, ಚು, ಚೆ
		ಚೆ, ಚಿಂ, ಚೆ, ಚೆ
ಜ	16	ಜಾ, ಜಿ, ಜರ್, ಜಾ, ಜರ್, ಜ, ಜೋಂ, ಜಂ, ಜ್ಬ
		ಜ, ಜೆ, ಜೆ, ಜಿ, ಜೊ, ಜೀ, ಜಾ
ಝ	2	ಝೂ, ಝು
ಟ	13	ಟ್ಟ, ಟ್ಟ, ಟ, ಟಿ, ಟ, ಟ, ಟ, ಟ್ಟ, ಟ್ಟ
		ಟ್ಟ, ಟಿ, ಟಿ, ಟ್ಟ
ಠ	1	ಠ
ಡ	62	ಡಿ, ಡಿ, ಡಿ, ಡಿ, ಡಿ, ಡಿ, ಡಿ, ಡ, ಡಿ
		ಡ, ಡ, ಡೆ, ಡ, ಡು, ಡ್ಡ, ಡ, ಡ, ಡ
		ಡಿ, ಡು, ಡ, ಡಿ, ಡ್ಡಿ, ಡ, ಡೆ, ಡು, ಡ
		ಡು, ಡ, ಡಿ, ಡು, ಡ, ಡಿ, ಡ, ಡಿ, ಡಿ
		ಡೆ, ಡಿ, ಡ, ಡೆ, ಡಿ, ಡಿ, ಡಿ, ಡು, ಡಿ
		ಡು, ಡ, ಡ, ಡ, ಡ, ಡ, ಡು, ಡಿ, ಡು
		ಡಿ, ಡಿ, ಡೆ, ಡಿ, ಡಿ, ಡಿ, ಡಿ, ಡಿ
ಢ	2	ಢಿ, ಢಿ,
ಣ	32.	ಣಿ, ಣಿ, ಣ, ಣೆ, ಣ, ಣಿ, ಣಿ, ಣ್ಣ, ಣ್ಣ
		ಣ್ಣ, ಣ್ಣ, ಣು, ಣಿ, ಣ್ಣ, ಣ್ಣ, ಣ್ಯ, ಣ್ಣ ಣಿ
		ಣೆ, ಣು, ಣಿ, ಣ, ಣಿ, ಣಿ, ಣ್ಣ, ಣ್ಣ, ಣ್ಣ
		ಣಿ, ಣಿ, ಣ್ಮ, ಣಿ, ಣಿ
ತ	109	ತಂ, ತಾ, ತಿಂ, ತಿ, ತಿ, ತಿ, ತಿ, ತಿ, ತಿ,
		ತಿ, ತೆ, ತೆ, ತ್ತ, ತ, ತುಂ, ತ್ತ, ತಿ, ತ,
		ತ, ತ, ತಾಂ, ತೇ, ತಾ, ತ್ತ, ತೀ ತ, ತ್ರ,
		ತ, ತಿ, ತೊ, ತೀ, ತಿ, ತು, ತ, ತ, ತ್ತ,

ಧ್ವನಿ	ಆವೃತಸಂಖ್ಯೆ	ವರ್ಣ
		ತ್ರಿ, ತೇ, ತಿ, ತಿ, ತಿ, ತೆ, ತ, ತಾ, ತ, ತ, ತಿ, ತ, ತಿ, ತುಂ, ತ್ರ, ತ, ತುಂ, ತ್ರ, ತು, ತ್ರ, ತ್ರು, ತೆ, ತು, ತಿ, ತೊ, ತೋ, ತ, ತ್ರಿ, ತೆ, ತೆ, ತ, ತ, ತ್ರಿ, ತೊ, ತಿ, ತ, ತಿ, ತ್ಯ, ತಿಂ, ತಾ, ತುಂ, ತು, ತ, ತ್ರ, ತಿ, ತ್ರೆ, ತ, ತ, ತಾ, ತು, ತಿಂ, ತೇ, ತಾ, ತ್ರ, ತಿ, ತೆ, ತೆ, ತೇ, ತಿ, ತ್ರೆ, ತೆಂ, ತಾ, ತೆ, ತ್ಯ, ತಿ, ತ್ರೆ, ತಿ, ತಿ, ತಿ, ತಿ, ತಿ, ತಿ, ತಂ
ಥ	1	ಥೆ
ದ	166	ದೆ, ದಿಂ, , ದು, ದ, ದು, ದಂ, ದಿ, ದದೆ ದ, ದ, ದ, ದ್ವೈ, ದ್ವೈ, ದ್ರಿ, ದೆ, ದೆ, ದಿ ದಿ, ದ, ದ, ದ, ದ, ದ, ದೇ, ದ, ದ ದ, ದಿ, ದೊ, ದಿ, ದಿ, ದ, ದಿಂ, ದಿಂ, ದು ದು, ದೆ, ದು, ದ, ದು, ದ, ದೆ, ದು, ದ ದೆ, ದು, ದಿ, ದ್ದೆ, ದಿ, ದ, ದಿ, ದ, ದು ದೆ, ದೆ, ದ್ದಿ, ದಾ, ದ, ದ, ದಿ, ದ, ದ ದಾ, ದ, ದ, ದ್ರ, ದ, ದ, ದೊ, ದಿ, ದಿ ದ್ರಿ, ದೆ, ದು, ದೊ, ದ, ದ, ದ, ದ, ದ ದ, ದ್ರ, ದ, ದ, ದ, ದೊ, ದ, ದ, ದ, ದ, ದು, ದಿ, ದ, ದಿ, ದು, ದು, ದೆ, ದೆ ದ, ದಿ, ದೆ, ದಿ, ದೆ, ದಿ, ದಿ, ದ, ದೊ ದ, ದಿ, ದ, ದಿ, ದ, ದ, ದಿ, ದ, ದೊ ದಿ, ದಿ, ದ್ಯ, ದೋ, ದೋ, ದ್ದಿಂ, ದೋ, ದೋ, ದೋ ದ್ದೆ, ದೋ, ದಿ, ದೆ, ದೋ, ದ, ದಂ, ದೋ, ದು ದು, ದೆ, ದ, ದಿ, ದೆ, ದಿಂ, ದ, ದಿ, ದಾ ದೇ, ದಾ, ದೊ, ದು, ದು, ದೇ, ದೇ, ದ, ದ್ಧ ದ, ದ್ದಿ, ದಾ, ದು, ದಿ, ದೆ, ದು, ದಿ, ದೆ, ದು, ದೆ, ದಿಂ
ಧ	12	ಧಿ, ಧ, ಧ, ಧೀ, ಧು, ಧಿ, ಧ್ಯಾ, ಧ್ಯೆ, ಧ್ಯೆ ಧೂ, ಧೂ, ಧ
ನ	221	ನು, ನಾ, ನು, ನಾ, ನ, ನ್ನ, ನಾ, ನ, ನ

ಧ್ವನಿ	ಆವೃತಸಂಖ್ಯೆ	ವರ್ಣ
		ನ, ನ, ನ, ನ, ನು, ನಾ, ನು, ನಾ, ನ ನ್ನ, ನಂ, ನಾ, ನಿ, ನಿ, ನೀ, ನಿ, ನ, ನ ನ, ನ, ನ, ನೆ, ನ, ನಿ, ನ, ನಂ, ನಿಂ ನ, ನ, ನ, ನ, ನು, ನಾ, ನೆ, ನೆ, ನೀ ನ, ನೆ, ನೆ, ನಂ, ನ, ನಾ, ನೆ, ನ, ನೆ ನ, ನ, ನ, ನೊ, ನು, ನ, ನ, ನು, ನೂ ನೆ, ನಿಂ, ನ, ನೆ, ನೆ, ನ, ನ್ನೆ, ನೆ, ನ ನ, ನಿ, ನ, ನೆ, ನ, ನೆ, ನ, ನೂ, ನಾ ನು, ನ, ನ, ನ, ನೆ, ನೆ, ನ, ನ, ನು ನು, ನಿ, ನ, ನೀ, ನೀ, ನಿ, ನು, ನೆ, ನು ನು, ನ, ನ, ನ, ನ, ನು, ನಿ, ನ, ನ ನಿ, ನು, ನ, ನಿ. ನೋ, ನು, ನು, ನು, ನ ನು, ನು, ನ, ನಿ, ನ, ನು, ನಂ, ನ, ನೀ ನೋ, ನೆ, ನ, ನಿ, ನಿಂ, ನ, ನ, ನ, ನ ನ, ನ, ನೆ, ನೆ, ನ, ನ, ನ, ನಾ, ನು ನಾ, ನು, ನಾ, ನ, ನ್ನ, ನಂ, ನಾ, ನಿ, ನ ನ, ನ, ನ, ನು, ನಾ, ನ, ನೇ, ನಿ, ನೋ ನ, ನೆ, ನಾ, ನ, ನ, ನ, ನೆ, ನೆ, ನೆ ನ, ನ, ನ, ನೆ, ನೋ, ಸ್ನ, ನೆ, ಸ್ಮ, ನಿ ನೆ, ನು, ನ, ನ, ನ, ನಿ, ನ, ನ, ನು ನಾ, ನು, ನಾ, ನ, ನ್ನಂ ನ, ನ, ನ, ನ ನೇ, ನ, ನೀ, ನೇ, ನ್ಯಾ, ನ, ನಾ, ನ, ನ್ನಿ ನೋ, ನು, ನಾ, ನು, ನಾ, ನ, ನಾ, ನ, ನ, ನ, ನ, ನ
ಪ	37	ಪಿ, ಪಿ, ಪಿ, ಪ್ರೀ, ಪಂ, ಪ್ಪಿ, ಪ್ರ, ಪಿ, ಪ ಪ, ಪಾ, ಪೆ, ಪ್ಪಿ, ಪಿ, ಪ, ಪ, ಪಿ, ಪ, ಪೆ ಪೆಂ, ಪಿ, ಪ್ಪ, ಪ, ಪು, ಪು, ಪ, ಪಾ, ಪ ಪ್ಪೆ, ಪ, ಪ, ಪಿ, ಪಿ, ಪಿ, ಪಿ, ಪಿ, ಪಿ
ಫ	3	ಫಿ, ಫಿ, ಫಿ
ಬ	79	ಬೀ, ಬೇ, ಬ, ಬಿ, ಬೇ, ಬ, ಬೋ, ಬ, ಬಾ

ಧ್ವನಿ	ಆವೃತಸಂಖ್ಯೆ	ವರ್ಣ
		ಬಿ, ಬೇ, ಬೀ, ಬಿ, ಬ' ಬೇ, ಬಾ, ಬು, ಬೇ ಬ್ಬಿ, ಬಿ, ಬ್ಬಿ, ಬ, ಬ, ಬ, ಬ, ಬಾ, ಬ ಬ, ಬ, ಬ, ಬ, ಬ, ಬೆ, ಬ, ಬಿ, ಬೇ ಬ್ಬಿ, ಬೀ, ಬ, ಬ್ಬಿ, ಬಾ, ಬಂ, ಬ್ಬ, ಬಿ, ಬೀ ಬಿ, ಬಿ, ಬಾ, ಬ, ಬೆ, ಬೆ, ಬೆ, ಬೆ, ಬಂ ಬಿ, ಬಂ, ಬಿ, ಬ, ಬಾ, ಬಿ, ಬೀ, ಬ, ಬ್ಬಿ ಬೀ, ಬಾ, ಬೇ, ಬೆ, ಬೆ, ಬಿಂ, ಬೇ, ಬಿ, ಬೆಂ ಬಿ, ಬು, ಬ, ಬೀ, ಬೇ, ಬ, ಬಿ
ಭ	12	ಭೇ, ಭೀ, ಭರ್, ಭ, ಭೀ, ಭೂರ್, ಭ, ಭ್ರ, ಭ್ರ ಭೃಂ, ಭಾ, ಭೂ
ಮ	98	ಮೆ, ಮ, ಮ, ಮ, ಮೆ, ಮೆ, ಮಂ, ಮಂ, ಮರ್ ಮು, ಮು, ಮ, ಮ, ಮ, ಮಿ, ಮು, ಮುಂ, ಮಂ ಮ, ಮಿಾ, ಮೊ, ಮೊ, ಮೊ, ಮೇ, ಮೆ, ಮ್ಮೆ, ಮ ಮೌ, ಮ, ಮ, ಮ್ಮ, ಮ, ಮ, ಮೋ, ಮುಂ, ಮಾ ಮಂ, ಮೌ, ಮ, ಮು, ಮು, ಮ, ಮು, ಮೆ, ಮ ಮ, ಮೊ, ಮೆ, ಮು, ಮ, ಮು, ಮಿಂ, ಮುಂ, ಮಿ ಮೊ, ಮ, ಮಿಂ, ಮ, ಮ., ಮ, ಮ್ಮೆ, ಮೇ, ಮು ಮ, ಮ, ಮ, ಮೆ, ಮ, ಮಂ, ಮಾ, ಮೊ, ಮ ಮ, ಮ, ಮ, ಮ, 'ಮೇ' ಮ, ಮ್ಮೆ, ಮ್ಮೆ, ಮ ಮ, ಮೂ, ಮ, ಮೇ, ಮಿಂ, ಮ್ಮಿ, ಮ, ಮ, ಮೆ ಮಿಂ, ಮ, ಮಿ, ಮಿಾ, ಮೆ, ಮ, ಮ, ಮ
ಯ	130	ಯ, ಯ, ಯ, ಯ, ಯ, ಯ, ಯ, ಯ, ಯ ಯ, ಯ, ಯ, ಯ, ಯಿ, ಯ, ಯೆ, ಯೀ, ಯ ಯ, ಯ್ದಿ, ಯ, ಯ, ಯಿ, ಯು, ಯು, ಯು, ಯ ಯ, ಯಾ, ಯ, ಯ, ಯ, ಯ, ಯ, ಯ, ಯ ಯ, ಯ, ಯ, ಯ್ದು, ಯ, ಯ, ಯ, ಯ, ಯ ಯ, ಯು, ಯ, ಯು, ಯ, ಯು, ಯ, ಯೆ, ಯ ಯ, ಯಿಂ, ಯ, ಯ, ಯ, ಯ, ಯ್ಯ, ಯ, ಯು ಯು, ಯ, ಯೊ, ಯು, ಯ, ಯ, ಯು, ಯು, ಯ ಯ, ಯ, ಯ, ಯು, ಯ, ಯ, ಯ. ಯ, ಯ ಯ, ಯು, ಯ, ಯೆ, ಯಿಂ, ಯ್ಯ, ಯ, ಯೆ, ಯ

ಧ್ವನಿ	ಆವೃತಸಂಖ್ಯೆ	ವರ್ಣ
		ಯ್ಯ, ಯ್ಯ, ಯಾ, ಯ, ಯ, ಯಿಂ, ಯು, ಯಾ, ಯ ಯು, ಯ, ಯೊ, ಯ, ಯ, ಯ, ಯ, ಯ, ಯ ಯ, ಯ, ಯ, ಯ, ಯಾ, ಯ, ಯ, ಯ, ಯು ಯೊಂ, ಯ, ಯ, ಯ, ಯ, ಯ, ಯ, ಯ, ಯ ಯ, ಯ, ಯ, ಯ
ರ	151	ರಿ, ರೂ, ರಾ, ರು, ರಾ, ರಿ, ರಿ, ರಿ, ರ ರ, ರ, ರಸಿ, ರೆ, ರೆಸಿ, ರೆ, ರಾ, ರಿ, ರ ರ, ರಂ, ರ, ರಂ, ರ, ರ, ರು, ರ, ರೆಸಿ ರಾ, ರ, ರು, ರ, ರ, ರಿ, ರು, ರೇ, ರಿ ರು, ರಿ, ರೆ, ರಿ, ರು, ರು, ರೆ, ರ, ರ ರು, ರೆ, ರ, ರೆ, ರೆ, ರೆ, ರೆ, ರಿ, ರೆ ರಿ, ರ, ರಿ, ರಿ, ರು, ರು, ರ, ರಿ, ರ ರಿ, ರು, ರು, ರ, ರಿ, ರ, ರು, ರು, ರ ರಿ, ರ, ರು, ರಿ, ರಿ, ರೆ, ರ, ರಿ, ರ ರ್ವ, ರೆ, ರು, ರು, ರಿ, ರೆ, ರ, ರ, ರೆ ರಿ, ರ, ರೂ, ರೆ, ರಿ, ರ, ರಿ, ರಿ, ರ ರಿ, ರು, ರೆ, ರಿ, ರಿ, ರು, ರು, ರಾ, ರ ರಿ, ರ, ರೆ, ರು, ರು, ರ, ರ, ರಿ, ರು ರಿ, ರೆ, ರಾ, ರಿ, ರಿ, ರು, ರಿ, ರ, ರು ರೆ, ರೆ, ರ, ರೇ, ರು, ರೆ, ರು, ರ, ರೆ ರಿ, ರು, ರು, ರು, ರ, ರಿ, ರ, ರು, ರೆ ರು, ರಿ, ರಿ, ರೂ, ರಾ, ರು
ಲ	156	ಲು, ಲೆ, ಲು, ಲು, ಲೆ, ಲು, ಲು, ಲಿ, ಲು ಲಾ, ಲು, ಲೆ, ಲ್ಲಿ, ಲ್ಲ' ಲ್ಲಿ, ಲ್ಲ, ಲ್ಲ, ಲ್ಲ ಲ್ಲಿ, ಲ್ಲ, ಲ್ಲಿ, ಲ್ಲೆ, ಲು, ಲ, ಲಿ, ಲ, ಲ್ಲಿ ಲ್ಲಿ, ಲ, ಲ್ಲ, ಲ, ಲೆ, ಲ. ಲ, ಲಿ, ಲ್ಲಿ ಲೆ, ಲ್ಲಿ, ಲಿ, ಲಿ, ಲ, ಲಿ, ಲ್ಲ, ಲ್ಲಿ, ಲ್ಲ ಲು, ಲೆ, ಲ, ಲಿ, ಲಿ, ಲಿ, ಲ್ಲ. ಲೊ, ಲ ಲ್ಪ, ಲ, ಲ್ಲಿ, ಲಿ, ಲ, ಲಿ, ಲ್ಲಿ, ಲ, ಲ್ಲಿ ಲ, ಲ, ಲಿ, ಲ, ಲ, ಲಿ, ಲಾ, ಲಿ, ಲ ಲ್ಲಿ, ಲ, ಲ, ಲಿ, ಲ್ಲಿ, ಲ, ಲ್ಲಿ, ಲ, ಲೆ

ಧ್ವನಿ	ಆವೃತಸಂಖ್ಯೆ	ವರ್ಣ
		ಲು, ಲ, ಲ, ಲೊ, ಲ, ಲ, ಲು, ಲು, ಲ್ಲಿ
		ಲ್ಲಿ, ಲ್ಲ, ಲು, ಲಿ, ಲಿ, ಲ, ಲಿ, ಲು, ೀ, ಲ
		ಲು, ಲೆ, ಲು, ಲ್ಲಿ, ಲಿ, ಲಿ, ಲಿ, ಲ, ಲ
		ಲೆ, ಲು, ಲ, ಲಿ, ಲಿ, ಲಿ, ಲು, ಲು, ಲು
		ಲ್ಲಿ, ಲೆ, ಲೆ, ಲ್ಟ, ಲ್ಲಿ, ಲ್ಲಿ, ಲಿ, ಲಿ, ಲೆ
		ಲ್ಲಿ, ಲ್ಲಿ, ಲೆ, ೆ, ಲ್ಲೆ, ಲ್ಲಿ, ಲ, ಲಿ, ಲಿ
		ಲ್ಲಿ, ಲ್ಲಿ, ಲ್ಲಿ, ಲೆ, ಲೆ, ಲು, ಲು; ಲ್ಲಿ, ಲ
		ಲಿ, ಲಿ, ಲ್ಲಿ, ಲು, ಲೆ, ಲು, ಲು, ಲೆ, ಲು
ವ	129	ವೆ, ವೆ, ವಿ, ವೆ, ವೆ, ವು, ವೆ, ವೆಸಿ, ವು
		ವೈ, ವಿ, ವೈ. ವೇ, ವೆ, ವೆ, ವ, ವೆ, ವೆ
		ವೆ, ವಿ, ವಿ, ವರ್, ವ, ವಿ, ವ, ವ, ವ
		ವ, ವೆ, ವ, ವು, ವೆ, ವೆ, ವು, ವಿ, ವಿ
		ವಿ, ವು, ವು, ವು, ವು, ವು, ವ, ವ, ವು
		ವು, ವು, ವ, ವೆ, ವ, ವು. ವೆ. ವ, ವಾ
		ವಿ, ವು, ವ, ವೆ, ವ, ವ, ವಿ, ವ, ವು
		ವುಂ, ವು, ವು, ವೆ, ವು, ವೆ, ವು, ವು, ವು
		ವಿ, ವೊ, ವೊ, ವೆ, ವೆ, ವ, ವರ್, ವೆ, ವಿ
		ವ, ವ, ವ, ವಿ, ವೆ, ವಿ, ವ, ವೆ, ವ್ಯ
		ವ, ವು, ವಿ, ವು, ವು, ವು, ವು, ವ, ವು
		ವು, ವು, ವು, ವೆ, ವೆ, ವಾ, ವ, ವೆ, ವೆ
		ವ, ವೆ, ವೆ, ವೆ, ವ್ಯ, ವ್ಯ, ವೆ, ವೈ, ವು
		ವ, ವು, ವಿ, ವು, ವು, ವು, ವೆ, ವೆ
		ವಿ, ವೆ, ವೆ
ಶ	17	ಶಾ, ಶೃಂ, ಶ್ಮಿ, ಶೃಂ, ಶೈ, ಶಿ, ಶು, ಶ್ಯ, ಶ್ರೀ
		ಶೃ, ಶೈ, ಶೃಂ, ಶ್ಯ, ಶ, ಶ್ರಾ, ಶ, ಶ
ಷ	3	ಷೇ, ಷ್ಟು, ಷೆ
ಸ	86	ಸಿ, ಸ, ಸು. ಸೊಂ, ಸಿ, ಸ, ಸೀ, ಸಿ, ಸ
		ಸು, ಸೆ, ಸಿ, ಸ್ತ್ರ, ಸ, ಸು, ಸೆ, ಸ, ಸೊಂ
		ಸ್ವ, ಸಂ, ಸುಂ, ಸೆ, ಸೀ, ಸು, ಸ, ಸೂ, ಸ
		ಸಿ, ಸಾ, ಸಿ, ಸ, ಸಾ, ಸಂ, ಸ, ಸೇ, ಸಾ
		ಸು, ಸ, ಸಾ, ಸಿ, ಸೇ, ಸೆ, ಸಿ, ಸು, ಸು

ಧ್ವನಿ	ಆವೃತಸಂಖ್ಯೆ	ವರ್ಣ
		ಸ, ಸಂ, ಸಿ, ಸಿ, ಸಿ, ಸಿ, ಸಿ, ಸು, ಸ
		ಸಿ, ಸುಂ, ಸ್ನಾ, ಸು, ಸಿ, ಸು, ಸು, ಸಿ, ಸ
		ಸಂ, ಸಿ, ಸು, ಸಿ, ಸಂ, ಸು, ಸೇ, ಸು, ಸ
		ಸು, ಸ, ಸು, ಸೊಂ, ಸಿ, ಸಾ, ಸೋಂ, ಸು, ಸು
		ಸಿ, ಸ, ಸು, ಸೊಂ, ಸಿ
ಹ	80	ಹೋ, ಹೋ, ಹೋ, ಹ, ಹೋ, ಹೋ, ಹೊ, ಹೊ, ಹ
		ಹಿ, ಹೋ, ಹ, ಹಂ, ಹೋ, ಹ, ಹೋ, ಹೊ, ಹ
		ಹ್ಯ, ಹಃ, ಹಾ, ಹಂ, ಹಂ, ಹ, ಹ, ಹೆ, ಹ
		ಹ, ಹ. ಹ, ಹ, ಹ, ಹೊಂ, ಹ, ಹ, ಹ
		ಹು, ಹೂ, ಹ, ಹ, ಹ, ಹೊ, ಹ, ಹ, ಹ
		ಹೋ, ಹೆ, ಹೂ, ಹಾ, ಹೂ, ಹೊ, ಹಾ, ಹಿ, ಹಿ
		ಹೊ, ಹೋ, ಹೋ, ಹೊಂ, ಹ, ಹಾ, ಹೊಂ, ಹ, ಹಾ
		ಹ್ವೆ, ಹು, ಹ, ಹ, ಹೆ, ಹು, ಹ್ಯ, ಹೋ, ಹೂ
		ಹ, ಹ, ಹಾ, ಹಾ, ಹೋ, ಹೋ, ಹೋ, ಹ
ಳ	105	ಳಿ, ಳು, ಳಿ, ಳ, ಳಿ, ಳಿ, ಳ, ಳ, ಳ
		ಳಿ, ಳಿ, ಳಿ, ಳ, ಳ, ಳಿ, ಳ್ಳಿ, ಳಿ, ಳ
		ಳ್ಳಿ, ಳಿ, ಳ, ಳು, ಳಿ, ಳಿ, ಳ, ಳ, ಳು
		ಳಿ, ಳ, ಳು, ಳಿ, ಳಿ, ಳಿ, ಳ್ಳ, ಳು, ಳು
		ಳಿ, ಳ, ಳು, ಳ, ಳೊ, ಳು, ಳು, ಳ, ಳ
		ಳ್ಳಿ, ಳ, ಳು, ಳಿ, ಳಿ, ಳ, ಳಿ, ಳು, ಳಿ
		ಳ, ಳಿ, ಳಿ, ಳಿ, ಳಿ, ಳ್ಳ, ಳಿ, ಳಿ, ಳಿ
		ಳಿ, ಳ, ಳ, ಳ, ಳು. ಳಿ, ಳಿ, ಳ್ತ, ಳಿ
		ಳಿ, ಳಿ, ಳಿ, ಳ್ಳೆ, ಳಿ, ಳ, ಳಿ, ಳ್ಳಿ, ಳು
		ಳ, ಳಿ, ಳಿ, ಳ, ಳ, ಳು, ಳ, ಳಿ, ಳಿ
		ಳ, ಳಿ, ಳಿ, ಳಿ, ಳ, ಳಾ, ಳಿ, ಳಿ, ಳಿ
		ಳಿ, ಳಿ, ಳ, ಳಿ, ಳಿ, ಳಿ

ಒಟ್ಟು — 2099

2·3· ಪ್ರಸ್ತುತ ಕವನದಲ್ಲಿ ಸಂಯುಕ್ತ ವ್ಯಂಜನಗಳ ಸಂಖ್ಯೆಯು 201· ಮೇಲೆ ಹೇಳಿರುವ ಧ್ವನಿಗಳ ಎಣಿಕೆಯಿಂದ ನಮ್ಮ ಗಮನಕ್ಕೆ ಬರುವ ಮುಖ್ಯ 18 ಧ್ವನಿಗಳು ಯಾವುವೆಂದರೆ :

ನ	221	ಳ	105
ಗ	185	ಮ	98
ದ	166	ಸ	86
ಲ	156	ಹ	80
ರ	151	ಬ	79
ಯ	130	ಡ	62
ವ	129	ಪ	37
ಕ	123	ಣ	32
ತ	109	ಚ	22

2.4. ಈ ಕವನದ ಪಂಕ್ತಿಗಳಲ್ಲಿ ಧ್ವನಿಸಂಯೋಜನೆಯ ನಿಟ್ಟಿನಿಂದ ಒಂದೇ ತರಹದ ವ್ಯಂಜನಗಳ ಅವೃತಿ ಕಂಡು ಬರುತ್ತದೆ. ಆದರೆ ಮುಖ್ಯವಾಗಿ ಇಲ್ಲಿ ಗಮನಿಸ ಬೇಕಾದ ವ್ಯಂಜನಾವೃತಿಗಳೆಂದರೆ :

ದನಗಳು–ಮನಗಳೂ	39-40	(ಳು–ಳೂ)
ಭೀಮಾಕಾರದಿ–ನೀರಧಿ	43-44	(ದಿ–ಧಿ)
ಕಳ್ತಲೆ–ಇದಿರ್ಗೊಳೆ	71-72	(ಲೆ–ಳೆ)

ಉಳಿದವು ಯಾವುದೇ ವ್ಯತ್ಯಾಸವಿಲ್ಲದೆ ಬಂದಿರುವುದನ್ನು ಈ ಕೆಳಗೆ ಕಾಣ ಬಹುದು.

ಧ್ವನಿ	ಧ್ವನಿ ಸಂಯೋಜನೆ	ಪಂಕ್ತಿ ಸಂಖ್ಯೆ
ಕ	ರಂಗಕೆ–ಶೃಂಗಕೆ	17–18
	ಸಂಗಕೆ–ಲಲಿತಾಂಗಕೆ	19–20
	ಚೀಲಕೆ–ಸಾಲಕೆ	31–32
ಗ	ಗೂಡಿಗೆ–ರೂಢಿಗೆ	1–2
	ಕಾಡಿಗೆ–ಕೂಡಿಗೆ	3–4
	ಗೂಡಿಗೆ–ನಾಡಿಗೆ	7–8
	ಕಣ್ಣಿಗೆ–ತಣ್ಣಗೆ	49–50
	ನುಣ್ಣಗೆ–ಸಣ್ಣಗೆ	51–52
	ಗೂಡಿಗೆ–ನಾಡಿಗೆ	67–68
	ಹಟ್ಟಿಗೆ–ನೆಟ್ಟಗೆ	75–76
	ಗೂಡಿಗೆ–ಕೂಡಿಗೆ	91–92
	ಗೂಡಿಗೆ–ರೂಢಿಗೆ	101–102
	ಕಾಡಿಗೆ–ಕೂಡಿಗೆ	103–104

೪ ಕಿಡಿಗಳು–ನುಡಿಗಳು 29–30
ಬನಗಳು–ಜನಗಳು 37–38
ಗಿರಿಗಳು–ಕರಿಗಳು 41–42

2·5 ಕವನದ ಕೆಲವು ಪಂಕ್ತಿಗಳಲ್ಲಿ ಅನುಪ್ರಾಸವನ್ನು ಕಾಣಬಹುದು.
ಉದಾಹರಣೆ :

ಹಸುರು ಸೊಂಪಿನ ಬಿಸಿಲು ತಂಪಿನ ಗಾನದಿಂಪಿನ ಕೂಡಿಗೆ
ಬೇಸರಾಗಿದೆ ಒಯಲು ಸೀಮೆಯು ಬೋಳು ಬಯಲಿನ ಬಾಳದು
ಬಿಳಿಯ ತಿಂಗಳ ಸಿರಿಬನಂಗಳ ಮಲೆಯ ಮಂಗಳ ನಾಡಿಗೆ
ಕಣ್ಣು ತಣಿವುದು ; ಮನವು ಮಣಿವುದು ; ಹಾಲುಹೂವಿನ ಹೊಳೆಯಲಿ
ಕೈಲಿ ಕೈಲಿಯ ಮೈಲಿ ಮೈಲಿಯ ದೂರ ದಿನಮಣಿ ಬಾಡಲು,
ಅಲ್ಲಿಗೈದುವೆ ನಲ್ಲಿಗೈದುವೆ ನಿಲ್ಲಿ ಬೇಸರವಾಗಿದೆ ;
ಕಾಲದಾಚೆಗೆ, ದೇಶದಾಚೆಗೆ, ಚಿಂತೆಯಾಚೆಗೆ, ಹಾರುವೆ ;
ಹೋಗುವೆನು ನಾ ಹೋಗುವೆನು ನಾ ನನ್ನ ಬಲುಮೆಯ ಗೂಡಿಗೆ ;
ಮಲೆಯ ನಾಡಿಗೆ, ಮಳೆಯ ಬೀಡಿಗೆ ಸಿರಿಯ ಚೆಲುವಿನ ರೂಢಿಗೆ.

3·0. ಕವನದ ಪದಬಂಧದ ರಚನೆಯನ್ನು ತಿಳಿಯಲು, ಕವನದಲ್ಲಿ ಬಳಕೆಗೊಂಡಿರುವ ನಾಮಪದ, ವಿಶೇಷಣ, ಕ್ರಿಯಾಪದ ಮುಂತಾದವುಗಳ ಕಡೆ ಗಮನ ಹರಿಸಬೇಕಾಗುವುದು. ಈ ನಿಟ್ಟಿನಿಂದ ಪ್ರಕೃತ ಕವನದ ಪದರಚನೆಯ ವೈಶಿಷ್ಟ್ಯವನ್ನು ನೋಡಬಹುದು.

3·1. ನಾಮಪದಗಳು : ಕವನದುದ್ದಕ್ಕೂ ಬರುವ ನಾಮಪದಗಳು ಪ್ರಕೃತಿಯ ಸುಂದರ ಚರಾಚರ ವಸ್ತುಗಳನ್ನು ಸೂಚಿಸುವಂತವಾಗಿವೆ.

ಕಾಜಾಣ, ಕೋಗಿಲೆ, ತೇನೆ, ಗಿಳಿ, ಕಾಮಳ್ಳಿ, ಹುಲಿ, ಹಂದಿ, ಕಾಡುಕೋಳಿ, ಮೊಡ್ಡು, ಕಡ, ಮಿಗ, ಮುನಿಯ, ಕೋಡಗ, ಎರಳೆ, ಸಾರಗ, ಒರ್ಕ, ಹಾವು, ಉಡ, ಕಣೆಹಂದಿ, ಚಿಪ್ಪಿನಹಂದಿ, ಮುಂಗುಸಿ, ಕುರ್ಕ, ಮೊಲ, ಕುಕ್ಕನಹಕ್ಕಿ, ಭೃಂಗ, ಮಿಂಚುಹುಳು, ಬಸವ, ಗೋವು, ಸೀತಾಳಿ, ಕೇದಗೆ, ಬಕುಳ, ಮಲ್ಲಿಗೆ, ಹೊಂಗೆ, ತಾವರೆ, ಬಿದಿರುಮಳೆ, ಬಳ್ಳಿ, ಹೂವು, ಮುಳ್ಳು, ಪುಷ್ಪ, ತೋಟ, ಗದ್ದೆ, ಕೋಗು, ಗರುಕೆ, ಮರ, ಬನ, ಬಯಲು, ಪರ್ವತ, ವನ, ಗಿರಿ, ತಿರೆ, ಕಣಿವೆ, ಶಿಖರ, ಕಾನನ, ತಪ್ಪಲು, ಧರಣಿ, ಮಲೆ, ಅಡವಿ, ತೊರೆ.
ದಿನಮಣಿ, ತಿಂಗಳು, ಜೊನ್ನಣಿ, ತಾರೆ, ಸೀಹಾರಿಕೆ, ಮುಗಿಲು, ಬಾನು, ನಾಕ, ಸಗ್ಗ, ಗಗನ, ದಿಗಂತ, ಅರುಣ, ಗಾಳಿ, ಪವನ, ಅನಿಲ, ಕಿಚ್ಚು, ಆರತಿ.
ಬಿಸಿಲು, ಬೇಸಗೆ, ಕತ್ತಲೆ.
ಬೇಟೆಗಾರ, ನಾ, ಪಂಡಿತ, ರಕ್ಕಸಿ, ಮೊಗ, ಕಿವಿ, ಚಿಹ್ನೆ, ಕಣ್ಣು, ಎದೆ, ಹೃದಯ, ಪೆಭೂರ್ತ, ಮಗು, ಹೆಣ್ಣು, ಹಿಣಿಲು.

ಹಕ್ಕಿ, ನಗರ, ನಾಡು, ಗೂಡು, ದಡ, ಕೆಸರು, ಬೆಣ್ಣೆ, ಬೆಳ್ಳಿ.
ಬೆಂಕಿಹಕ್ಕಿ, ಮಿಂಚುರೆಕ್ಕೆ, ಚುಂಬನ, ಹಸರು, ನೀಲಿ, ಮಿಂಚು, ಕರಿ, ಕೋಕಿಲ,
ಚೇಲ, ಕುಂಕುಮ, ಕವಿಸ್ಥಿಲಿ, ನವಿಲುಕಲ್ಲು.

3.2. ವಿಶೇಷಣಗಳು : ಕವನದಲ್ಲಿನ ವಿಶೇಷಣಗಳು, ಕವನ ಸೃಷ್ಟಿಗೊಳ್ಳುವ ಸಂದರ್ಭಕ್ಕೆ ಅನುಸಾರವಾಗಿ ಬಹು ಸುಂದರವಾಗಿ ಮೂಡಿಬಂದು, ಕವನದ ಸೌಂದರ್ಯವನ್ನು ಹೆಚ್ಚಿಸಲು ಕಾರಣವಾಗಿವೆ.

ಬಿಳಿಯ ತಿಂಗಳು, ಸಿರಿಜನಂಗಳು, ಕರಿಯ ನೆಳಲು, ನೀಲದ ನೀರಧಿ ; ಮಂದಾನಿಲ, ಹಸುರು ಚಾಮರ, ಚಿತ್ರಸಂಜೆ, ಮುಗಿಲ ಕೋಪಲಮುಸಿ, ಕರಿರಕ್ಕಸಿ, ಹಸುರಿನ ಸಸಿ, ಇಂದ್ರ ನಂದನದ ಮರ, ಹಾಲು ಹೂವಿನ ಹೊಳೆ, ಅವ್ಯಕ್ತ ಸ್ವಾನ, ಬಿಳಿಯ ಮುತ್ತಿನ ಮಳೆ, ನಸುನಗೆ, ಕುಸುಮಧೂಳಿ, ಕೆದರ್ವಗಾಳಿ, ಹಾಲ್ಗಳೆ, ಜೇನ್ಮಳೆ, ಹುಚ್ಚಿನ ಕಿಚ್ಚು, ಬೆಂಕಿಹಕ್ಕಿ, ಮಿಂಚು ರೆಕ್ಕೆ, ಕಾವ್ಯಕನ್ಯೆ — ಇತ್ಯಾದಿ.

3.3. ಕ್ರಿಯಾಪದಗಳು : ಕವನದಲ್ಲಿ ಬಳಕೆಯಾಗಿರುವ ಕ್ರಿಯಾಪದಗಳು, ಅರ್ಥರಚನೆಯ ದೃಷ್ಟಿಯಿಂದ ಇಲ್ಲಿ ವಿಶೇಷ ಸ್ಥಾನವನ್ನು ಪಡೆದಿವೆ. ಭೂತಕಾಲದ ಭವಿಷ್ಯತ್‌ಕಾಲದ ಕ್ರಿಯಾಪದಗಳು ಹಾಗೂ ವಿಧ್ಯರ್ಥಕ ಕ್ರಿಯಾಪದಗಳು ಸಂಖ್ಯೆಯಲ್ಲಿ ಹೆಚ್ಚು ಇವೆ.

ಹೋಗುವೆನು, ಹೋಗುವೆ, ಹಬ್ಬಿವೆ, ತಬ್ಬಿವೆ, ಗೈದಿವೆ, ನೆಯ್ದಿವೆ, ಹೋಲಿವೆ ಆಪ್ಪಿ, ಬರುತಿಹ, ಮೇದು, ನಿಂತು, ಮಲಗಿ, ಊದು, ಎತ್ತಿ, ಬೀಸಿ, ತೇಲಿ, ನುಗ್ಗಿ, ಉಬ್ಬಿ, ಇರಿ, ಇಡು, ಮೆತ್ತು ತೆ, ತೋರ್, ನಿಂದಿವೆ, ಹಿಡಿದಿವೆ, ಕುಡಿದಿವೆ. ತುಳುಕೆ, ಪರಿದಿರೆ, ಏರುವೆನು, ಎರಚು, ನೆಯ್ಯೆ, ಎಬ್ಬಿಸಿ, ಚಿಮ್ಮಿ, ರೇಗಿದೆ, ವಿಸಾರುವೆ, ಹಾರುವೆ, ಸಾರುವೆ, ಸುಳಿಯುದು, ತಿಳಿಯದು ಇತ್ಯಾದಿ.

3.4. ಪ್ರತಿಧ್ವನಿ ಪದಗಳು : ಮುಕ್ತರೂಪದ ಪ್ರತಿಧ್ವನಿ ಪದಗಳು ಕವನದಲ್ಲಿ ಅಲ್ಲಲ್ಲಿ ಬಂದಿವೆ :

ಜಾತಿಗೀತಿ (11) ವೇದ—ಭೇದ (11) ಕಟ್ಟು—ಕಟ್ಟಳೆ (11) ಪೈರು—ಪಚ್ಚೆ (85)

3.5. ಪುನರುಕ್ತಿ ಪದಗಳು : ಕವನದ ಪಂಕ್ತಿಗಳಲ್ಲಿನ ಕೆಲವು ಪದಗಳು ಪುನರಾವರ್ತನೆಗೊಂಡು ಕವನಕ್ಕೆ ಇಂಪನ್ನು ತಂದಿವೆ.

ತೆರೆತೆರೆಯ (13), ಮೊರೆ ಮೊರೆಮ (33), ತಿರುತಿರುಗುಬ್ಬಿ (43), ಮೈಲಿ ಮೆಲಿಯ (78), ಅಲ್ಲಗೈದುವೆನಲ್ಲಿಗೈದುವೆನಿಲ್ಲಿ (89), ದೇಶದೇಶದ (98)

4.0 ಕವನದ ವಾಕ್ಯ ಮತ್ತು ಉಪವಾಕ್ಯಗಳು : ಪಂಕ್ತಿಯ ಪೂರ್ವಾರ್ಧದಲ್ಲಿ ಕ್ರಿಯಾಪದಗಳು ಕಡಿಮೆ ಸಂಖ್ಯೆಯಲ್ಲಿದ್ದು, ನಾಮಪದಗಳೇ ಆ ಸ್ಥಾನವನ್ನು ಹೆಚ್ಚು ಆಕ್ರಮಿಸಿಕೊಂಡಿವೆ.

ಉದಾ : ಹೋಗುವೆನು ನಾ ಹೋಗುವೆನು ನಾ ನನ್ನ ಒಲುಮೆಯ ಗೂಡಿಗೆ,
ಹೋಗುವೆನು ನಾ ಮಧುರ ಸುಂದರ ಶೈಲವನ ಲಲಿತಾಂಗಕೆ
ಅಲ್ಲಿ ಮೊರೆಮೊರೆದುರುಳಿ ಬರುತಿಹ ತೊರೆಯ ತೀರದ ಹಸುರಲಿ
ತೇಲಿ ಮುಂದಕೆ ಸುಗ್ಗಿ ತಿರುತಿರುಗುಬ್ಬಿ ಭೀಮಾಕಾರದಿ
ತುಂಬಿ ತುಳುಕೆ ದಿಗಂತ ದಕ್ಷಿಣೆನರುಣ ಕಾಂತಿಯ ಹೊಂದೊರೆ,
ಏರುವೆನು ನಾ ನವಿಲುಕಲ್ಲಿಗೆ ನೇಸರುದಯವನಿದಿರ್ಗೊಳೆ।

5.0 ಅರ್ಥರಚನೆಯ ದೃಷ್ಟಿಯಿಂದ ಕವನದಲ್ಲಿ ಬಳಕೆಯಾಗಿರುವ ಭಾಷೆಯನ್ನು ಕುರಿತು ನೋಡಿದಾಗ, ಇಲ್ಲಿನ ಕೆಲವು ಪಂಕ್ತಿಗಳಲ್ಲಿ ವಿಶೇಷ ಅಂಶಗಳನ್ನು ನಾವು ಗುರುತಿಸಬಹುದಾಗಿದೆ. ಉತ್ಪ್ರೇಕ್ಷಾಲಂಕಾರ ಕವನಕ್ಕೆ ಹೆಚ್ಚು ಅರ್ಥವನ್ನು ತಂದುಕೊಟ್ಟಿದೆ. ಭಾಷಾವೃಷ್ಟಿಯಿಂದ ಇವು ಕವನದಲ್ಲಿ ಬೇರೆ ಬೇರೆ ಅರ್ಥಗಳನ್ನು ಉಂಟುಮಾಡುತ್ತವೆ.

ಉದಾ : ಅಲ್ಲಿ ತೆರೆತೆರೆಯದ್ರಿಪಂಕ್ತಿಗಳೆಲ್ಲಿ ಕಾಣವೆ ಹಬ್ಬಿವೆ ;
ನಿಬಿಡ ಕಾನನರಾಜಿ ಗಿರಿಗಳನಪ್ಪಿ ಸುತ್ತಲು ತಬ್ಬಿವೆ ;
ದೆಸೆಯ ಬಸವನ ಹಿಣಿಲ ಹೋಲಿವೆ ; ಮುಗಿಲ ಚುಂಬನ ಗೈದಿವೆ
ತುಂಗ ಶೃಂಗಗಳಲ್ಲಿ ; ದಿಕ್ತಟದಲ್ಲಿ ಸೊಂಡಿಲ ನೆಯ್ದಿವೆ.
ಅಲ್ಲಿ ಭಾವದ ಬೆಂಕಿಹಕ್ಕಿಯ ಮಿಂಚುರೆಕ್ಕೆಯನೇರುವೆ ;
ಧರಣಿ, ದಿನಮಣಿ, ತಾರೆ ನೀಹಾರಿಕೆಯ ನೇಮಿಯ ಮೀರುವೆ ;
ಕಾಲದಾಚೆಗೆ, ದೇಶದಾಚೆಗೆ, ಚಿಂತೆಯಾಚೆಗೆ ಹಾರುವೆ ;
ಕಾವ್ಯಕನ್ಯಾಶ್ರಾವ್ಯಕಂಠದೊಳಾತ್ಮಭೂತಿಯ ಸಾರುವೆ।

'ಅಲ್ಲಿ ಭಾವದ ಬೆಂಕಿಹಕ್ಕಿಯ ಮಿಂಚುರೆಕ್ಕೆಯನೇರುವೆ' ಎನ್ನುವ ಸಾಲನ್ನು ನಾವು ಪರಿಭಾವಿಸಿದಾಗ, ಕವಿಯ ಕಲ್ಪನೆಯ ಭವ್ಯತೆ, ನಮ್ಮಲ್ಲಿ ಅಚ್ಚರಿಯನ್ನುಂಟು ಮಾಡುತ್ತದೆ. ವ್ಯಾವಹಾರಿಕ ಭಾಷೆಯಲ್ಲಿ ಇಂತಹ ಸಾಲುಗಳಿಗೆ ಅರ್ಥವಿಲ್ಲದಿದ್ದರೂ ಕಾವ್ಯಭಾಷೆಯಲ್ಲಿ ಕವಿ ಕಲ್ಪನೆಯ ಮೂಲಕವಾಗಿ ವಿವಿಧ ಅರ್ಥ ಪರಂಪರೆಯನ್ನು ಪಡೆದಿವೆ. ಹೀಗೆ ಕವನದ ಭಾಷೆ ನಮಗೆ ಹೊಸ ಅರ್ಥವನ್ನು ತಂದುಕೊಡುವುದಲ್ಲದೆ ಅಲೌಕಿಕ ಭಾವನೆಯನ್ನು ಮೂಡಿಸುತ್ತದೆ.

5.1 ಮಲೆನಾಡಿನ ಸೌಂದರ್ಯಕ್ಕೆ ಮರುಳಾದ ಕವಿ ಅಲ್ಲಿನ ಸೌಂದರ್ಯವನ್ನು ವಿಶಿಷ್ಟರೀತಿಯಲ್ಲಿ ಅಭಿವ್ಯಕ್ತಿಸಿರುವುದರಿಂದ, ಕವನದ ಕೆಲವು ಪಂಕ್ತಿಗಳು ವ್ಯಾವಹಾರಿಕ ಸತ್ಯವ ಚಿತ್ರಣಕ್ಕಿಂತ ಬೇರೆ ತೆರನಾದ ಅರ್ಥವನ್ನು ಪಡೆದುಕೊಂಡಿವೆ. 'ಚೇತನ

ಮೂರ್ತಿಯು ಆ ಕಲ್ಲು ; ತೆಗೆ ! ಜಡವೆಂಬುದು ಬರಿ ಸುಳ್ಳು'[1] ಎನ್ನುವ ಕವಿ ಪ್ರಕೃತಿ ವಸ್ತುಗಳಲ್ಲಿ ಚೈತನ್ಯವನ್ನು ಕಾಣುತ್ತಾರೆ. ಮಾನವ ಕಾರ್ಯಗಳನ್ನು ಪ್ರಕೃತಿಯ ವಸ್ತುಗಳಿಗೆ ತಂದುಕೊಟ್ಟಿದ್ದಾರೆ.

ಉದಾ : ನಿಬಿಡ ಕಾನನರಾಜಿ ಗಿರಿಗಳನಪ್ಪಿ, ಸುತ್ತಲು ತಬ್ಬಿವೆ
ಮುಗಿಲ ಚುಂಬನಗೈದಿವೆ
ಅಲ್ಲಿ ನಮುಹನಲಲ್ಲಿ ಮೌನದ ನಿಷ್ಟೆಗೈದಿರೆ ಬನಗಳು
ಅಲ್ಲಿ ಕಾನನ ಮಧ್ಯೆ ತುಂಗೆಯು ಮುತ್ತನಿಡುವಳು ಕಣ್ಣಿಗೆ ;
ಮೂಡು ಬಾನಿನ ಮೊಗದಿ ಕಲಕಲು ಉಷೆಯ ನಸುನಗೆ ತಾವರೆ,
ಸಂಜೆ ಕುಂಕುಮರಂಗಿನೋಕುಳಿಯೆರಚುತಿರೆ ಬನದಲಿ
ಗಾಳಿ ಸುಯ್ಯನೆಬೀಸಿ ಮರಗಳ ತೂಗುತುಯ್ಯಲೆಯಾಡಲು
ಕ್ಷಿಲಿ ಕ್ಷಿಲಿಯ ಪ್ಪಿಲಿ ಪ್ಪಿಲಿಯ ದೂರ ದಿನಮಣಿ ಬಾಡಲು,

ವ್ಯಾವಹಾರಿಕ ಭಾಷೆಯಲ್ಲಿ ಅರ್ಥದ ದೃಷ್ಟಿಯಿಂದ ಮೇಲಿನ ಸಾಲುಗಳು ಗೌಣವೆನಿಸಿಕೊಳ್ಳುತ್ತವೆಯಾದರೂ ಕಾವ್ಯಭಾಷೆಯಲ್ಲಿ ಹೊಸ ಭಾವನೆಗಳನ್ನು, ಹೊಸ ಅನುಭವಗಳನ್ನು ಹೊಳೆಯಿಸುತ್ತವೆ. ಇಲ್ಲಿಯ ಅಭಿವ್ಯಕ್ತಿಯು ತನ್ನ ಸಾರ್ಥಕತೆಯನ್ನು ಕಂಡುಕೊಳ್ಳುತ್ತದೆ. ಹೀಗೆ 'ಹೋಗುವೆನು ನಾ' ಕವನದ ಭಾಷೆ, ಅರ್ಥ ರಚನೆಯ ದೃಷ್ಟಿಯಿಂದ ಬದಲಾವಣೆ ಹೊಂದಿದೆ. ನಾಮಪದಗಳ ವಿಪುಲತೆಯಿಂದ ಇದಕ್ಕೆ ಹೊಸ ತಿರುವು ದೊರೆತಿದೆ. ಇಲ್ಲಿನ ಭಾಷಾಸ್ವರೂಪ ಸಂಕೀರ್ಣತೆಯನ್ನು ಪಡೆದು ಭಾಷಾಭ್ಯಾಸಿಗಳ ಕುತೂಹಲಕ್ಕೆ ಕಾರಣವಾಗಿದೆ. ಕವಿ ಕಲ್ಪನೆಯು ಈ ಕವನದಲ್ಲಿ ಮೈದೋರಿರುವ ರೀತಿ ಹಾಗೂ ಅರ್ಥರಚನೆಯ ದೃಷ್ಟಿಯಿಂದ ಅವು ಬೇರೆಯಾಗುವ ಸ್ವರೂಪ ಸ್ವಾರಸ್ಯಕರವಾಗಿದೆ. ಈ ದೃಷ್ಟಿಯಿಂದ ಶ್ರೀ ಕುವೆಂಪು ಅವರ ಇತರ ಕವನಗಳನ್ನು ಅಧ್ಯಯನ ಮಾಡುವುದು ಅತ್ಯಗತ್ಯ.

---

1 ಕುವೆಂಪು : 'ಶರತ್ಕಾಲದ ಸೂರ್ಯೋದಯದಲಿ' ಪಕ್ಷಿಕಾಶಿ, ಪುಟ 6–7.

ಕೆ. ಯಶೋಧರ

ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಕನ್ನಡ ವ್ಯಾಕರಣ ಸ್ವಯಂಕಲಿಕಾ ಸಾಮಗ್ರಿಯ ಪರಿಣಾಮ

ವ್ಯಾಕರಣವು ಭಾಷೆಯ ಸ್ವರೂಪ ಹಾಗೂ ರಚನಾಕ್ರಮವನ್ನು ಸ್ಪಷ್ಟಪಡಿಸುವುದರಿಂದ ಯಾವುದೇ ಭಾಷೆಯನ್ನು ಕ್ರಮಬದ್ಧವಾಗಿ ಹಾಗೂ ಅರ್ಥಪೂರ್ಣವಾಗಿ ಅಧ್ಯಯನ ಮಾಡಲು ವ್ಯಾಕರಣ ಜ್ಞಾನ ಅವಶ್ಯಕವಾಗಿದೆ. ಅಂತೆಯೇ ಕನ್ನಡ ನುಡಿಯ ಕ್ರಮಬದ್ಧ ಅಧ್ಯಯನಕ್ಕೆ ಕನ್ನಡ ವ್ಯಾಕರಣ ಜ್ಞಾನ ಅತ್ಯಗತ್ಯ ಎಂಬುದರಲ್ಲಿ ಸಂದೇಹವಿಲ್ಲ. ಕನ್ನಡವನ್ನು ಪ್ರಥಮ ಭಾಷೆಯನ್ನಾಗಿ ಅಧ್ಯಯನ ಮಾಡಬೇಕೆಂದಿರುವಾಗ ಪ್ರೌಢಶಾಲಾಮಟ್ಟದಲ್ಲಿ ಕೇವಲ ಪ್ರಾಯೋಗಿಕ ವ್ಯಾಕರಣವಷ್ಟೇ ಅಲ್ಲದೆ ಸಾಂಪ್ರದಾಯಕ ವ್ಯಾಕರಣ ಅಧ್ಯಯನಕ್ಕೂ ನಾಂದಿ ಹಾಡಲಾಗುತ್ತದೆ. ಅದ್ದರಿಂದ ವ್ಯಾಕರಣ ಜ್ಞಾನ ಕನ್ನಡ ಭಾಷಾ ಅಧ್ಯಯನದ ಅವಿಭಾಜ್ಯ ಅಂಗವಾಗಿದೆ; ವಿದ್ಯಾರ್ಥಿಗಳಲ್ಲಿ ವ್ಯಾಕರಣಾಂಶಗಳ ಬಗೆಗೆ ಸ್ಪಷ್ಟ ಪರಿಕಲ್ಪನೆ ಬೆಳಸಬೇಕಾದುದು ಗಮನಾರ್ಹ ವಿಷಯವಾಗಿದೆ. ಆದರೆ ಪ್ರಸ್ತುತ ಪ್ರೌಢಶಾಲೆಗಳಲ್ಲಿ ವ್ಯಾಕರಣ ಬೋಧನೆ ಅವ್ಯಾಹತವಾಗಿ ಸಾಗಿದ್ದರೂ ವಿದ್ಯಾರ್ಥಿಗಳಲ್ಲಿ ಸ್ಪಷ್ಟ ಪರಿಕಲ್ಪನೆಯನ್ನುಂಟುಮಾಡುವಷ್ಟು ಪರಿಣಾಮಕಾರಿಯಾಗಿದೆಯೇ ಎಂಬುದನ್ನು ಶಂಕಿಸಬಹುದಾಗಿದೆ.

ಆಧುನಿಕ ಶಿಕ್ಷಣ ಕ್ಷೇತ್ರದಲ್ಲಿ ಅಸಂಖ್ಯಾತ ಸುಧಾರಣೆಗಳಾಗಿದ್ದು ವಿದ್ಯಾರ್ಥಿಗಳ ವೈಯಕ್ತಿಕ ಭಿನ್ನತೆಯನ್ನು ಗುರುತಿಸಿ, ಅವರಲ್ಲಿ ಪರಿಣಾಮಕಾರೀ ಕಲಿಕೆಯನ್ನುಂಟು ಮಾಡಲು ನಡೆಸಿರುವ ಅನೇಕ ಪ್ರಯತ್ನಗಳಲ್ಲಿ ಸ್ವಯಂಕಲಿಕಾ ಸಾಮಗ್ರಿಯೂ ಒಂದು ಯಶಸ್ವಿಪೂರ್ಣ ಸಾಧನವಾಗಿದೆ ಎಂಬುದು ಕೆಲವಾರು ಸಂಶೋಧನಾ ಅಧ್ಯಯನಗಳಿಂದ ಸ್ಪಷ್ಟವಾಗಿದೆ. ಪೋರ್ಟರ್ (1959), ಡೇವಿಸ್ (1961), ಹಾಲ್ಯಾಂಡ್ (1961) ಬ್ಲೈತ್ (1960), ಹಾರ್ಟ್‌ನಸ್ಸ್ (1962) – ಈ ಅಧ್ಯಯನಗಳಲ್ಲಿ ಸಂಯೋಜಿತ ಕಲಿಕಾ ಸಾಮಗ್ರಿ (programmed learning material) ಯನ್ನು ಉಪಯೋಗಿಸಿದ ಗುಂಪಿನಿಂದಲೇ ಉತ್ತಮ ಫಲಿತಾಂಶಗಳನ್ನು ಪಡೆಯಲಾಗಿದೆ. ಲಿಂಡವಾಲ್ ಮತ್ತು ಜೋಲ್ವಿನ್ (1967), ಥಾಮಸ್ ಮತ್ತು ಥಾಮಸ್ (1965) ರವರು

ಸಂಯೋಜಿತ ಕಲಿಕಾ ಸಾಮಗ್ರಿಯನ್ನು ಮೂಲ ಪಠ್ಯಪುಸ್ತಕಗಳಾಗಿಯಾಗಲೀ (basic texts), ಸಮೃದ್ಧ ಕಾರ್ಯಕ್ರಮದಂತೆಯಾಗಲೀ (enrichment work) ನಿವಾರಣೋಪಾಯಕ ಕಾರ್ಯದಂತೆಯಾಗಲೀ (remedial work), ಬಾಹ್ಯ ನಿಯೋಜಿತ ಕಾರ್ಯಗಳಂತೆಯಾಗಲೀ (outside assignments) ಉಪಯೋಗಿಸ ಬಹುದೆಂದು ತಿಳಿಯಪಡಿಸಿದ್ದಾರೆ.

ಬರೋಡ ಎಂ. ಎಸ್. ವಿಶ್ವವಿದ್ಯಾನಿಲಯ, ದೆಹಲಿ ಮತ್ತು ಮೀರತ್ ವಿಶ್ವವಿದ್ಯಾ ನಿಲಯಗಳು, ಎನ್. ಸಿ. ಇ. ಆರ್. ಟಿ ಮತ್ತು ಕೆಲವು ರಾಜ್ಯಗಳ ಶಿಕ್ಷಣ ಸಂಸ್ಥೆಗಳು ಇತ್ಯಾದಿ ಸ್ಥಳಗಳಲ್ಲಿ ಸಂಯೋಜಿತ ಕಲಿಕಾ ಸಾಮಗ್ರಿಯ ಬಗೆಗೆ ಬಹಳಷ್ಟು ಸಂಶೋಧನಾ ಕಾರ್ಯವನ್ನು ಕೈಗೊಳ್ಳಲಾಗಿದೆ. ಸಾಂಪ್ರದಾಯಿಕ ಬೋಧನಾ ಪದ್ಧತಿ ಮತ್ತು ಸಂಯೋಜಿತ ಸಾಮಗ್ರಿ ಪದ್ಧತಿಗಳಲ್ಲಿ (programmed approach) ಯಾವುದು ಉತ್ತಮವಾಗಿದೆ ಎಂಬುದನ್ನು ದೃಢಪಡಿಸಲು ಅನೇಕ ತೌಲನಿಕ ಅಧ್ಯಯನಗಳನ್ನು ನಡೆಸಲಾಗಿದ್ದು—ಷಾ (1964, 1969), ಶರ್ಮಾ (1966), ದೇಸಾಯಿ (1966) —ಇವರ ಅಧ್ಯಯನಗಳಿಂದ ಸಂಯೋಜಿತ ಕಲಿಕಾ ಸಾಮಗ್ರಿಯನ್ನು ಉಪಯೋಗಿಸಿದ ವಿದ್ಯಾರ್ಥಿಗಳ ಕಲಿಕಾ ಮಟ್ಟವೇ ಉತ್ತಮವಾಗಿದೆ ಎಂಬುವನ್ನು ತಿಳಿಯಪಡಿಸಲಾಗಿದೆ. SIE (1970) ಕೈಗೊಂಡ ಅಧ್ಯಯನದಲ್ಲಿಯೂ ಮೇಲಿನ ಫಲಿತಾಂಶವನ್ನೇ ದೃಢ ಪಡಿಸಲಾಗಿದೆ. ಜೋಷಿ (1972) ಸಂಯೋಜಿತ ಸಾಮಗ್ರಿಯನ್ನುಪಯೋಗಿಸಿ ಕೊಂಡು ಇಂಗ್ಲೀಷ್ ಭಾಷೆಯನ್ನು ಪರಿಣಾಮಕಾರಿಯಾಗಿ, ಆಸಕ್ತಿಪೂರ್ವಕವಾಗಿ ಕಲಿಯಲು ಸಾಧ್ಯ ಮತ್ತು ಈ ಕ್ರಮವನ್ನು ಸ್ವಯಂ ಅಧ್ಯಯನಕ್ಕೆ ಸಾಧನವನ್ನಾಗಿ ಉಪಯೋಗಿಸಿಕೊಳ್ಳಬಹುದೆಂಬುದನ್ನು ಸ್ಥಿರಪಡಿಸಿದ್ದಾರೆ. ಈ ಅಂಶಗಳನ್ನು ಆಧರಿಸಿ ಪ್ರೌಢಶಾಲಾ ಮಟ್ಟದಲ್ಲಿ ವ್ಯಾಕರಣವನ್ನು ಪರಿಣಾಮಕಾರಿಯಾಗಿ ಕಲಿಯಲು ಸ್ವಯಂ ಕಲಿಕಾ ಸಾಮಗ್ರಿಯು ಪ್ರಯೋಜನವನ್ನು ಪಡೆಯುವ ಸಾಧ್ಯತೆಯಿದೆ ಎಂಬುದನ್ನು ಕಂಡುಕೊಳ್ಳಲಾಯಿತು.

ಕೆಲವಾರು ಪ್ರೌಢಶಾಲಾ ಕನ್ನಡ ಬೋಧಕರ ಹಾಗೂ ಕನ್ನಡ ವಿದ್ಯಾರ್ಥಿಗಳ ಅಭಿಪ್ರಾಯದ ಜೊತೆಗೆ ಸಂಶೋಧಕರ ಸ್ವತಃ ವೀಕ್ಷಣೆ ಮತ್ತು ಅನುಭವದ ಮೇರೆಗೆ ವ್ಯಾಕರಣ ಕಲಿಕೆಯಲ್ಲಿ 'ಸಮಾಸ ಪ್ರಕರಣ'ವನ್ನು ಅಧ್ಯಾಹಾರಮಾಡಿಕೊಳ್ಳುವುದು ಬಹುತೇಕ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಕಷ್ಟಸಾಧ್ಯವಾಗಿರುವ ವಿಷಯವೆಂದು ತಿಳಿಯ ಲಾಯಿತು. ಅಂತೆಯೇ ಈ ಕ್ಲಿಷ್ಟವಾದ 'ಸಮಾಸ ಪ್ರಕರಣ'ದ ಪರಿಣಾಮಕಾರೀ ಕಲಿಕೆಗೆ 'ಸ್ವಯಂ ಕಲಿಕಾ ಸಾಮಗ್ರಿ' ಸಹಾಯಕವಾಗಬಹುದೆಂಬ ಅಂಶವನ್ನೂ ಮನ ಗಾಣಲಾಯಿತು. ಆದ್ದರಿಂದ ವಿದ್ಯಾರ್ಥಿಗಳಿಗೆ ಅವಶ್ಯಕವಾದ ಸ್ವಯಂಕಲಿಕಾ ಸಾಮಗ್ರಿ ಯನ್ನು ತಯಾರಿಸಿ, ಅದು ಎಷ್ಟರಮಟ್ಟಿಗೆ ಪರಿಣಾಮಕಾರಿಯಾಗಬಲ್ಲದು ಎಂಬುವನ್ನು ಅರಿಯುವ ಸಲುವಾಗಿ ಪ್ರಸಕ್ತ ಅಧ್ಯಯನವನ್ನು ಕೈಗೊಳ್ಳಲಾಯಿತು.

ಗುರಿಗಳು : (i) ಕನ್ನಡ ವ್ಯಾಕರಣ 'ಸಮಾಸ ಪ್ರಕರಣ'ದಲ್ಲಿ ಸ್ವಯಂ

ಕಲಿಕಾ ಸಾಮಗ್ರಿಯನ್ನು ತಯಾರಿಸುವುದು (ಲಂಬೀಯ ಸಂಯೋಜಿತ ಸಾಮಗ್ರಿ— linear programmed material)

(ii) ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಸಮಾಸ ಪ್ರಕರಣದ ಸ್ವಯಂಕಲಿಕಾ ಸಾಮಗ್ರಿಯು ಎಷ್ಟರಮಟ್ಟಿಗೆ ಪರಿಣಾಮಕಾರಿಯಾಗಿದೆ ಎಂಬುದನ್ನು ಅಧ್ಯಯನ ಮಾಡುವುದು.

(iii) ಸಮಾಸ ಪ್ರಕರಣವನ್ನು (a) ಕೇವಲ ಸ್ವಯಂಕಲಿಕಾ ಸಾಮಗ್ರಿಯಿಂದ ಕಲಿತ ವಿದ್ಯಾರ್ಥಿಗಳ (b) ಸಾಂಪ್ರದಾಯಕ ಬೋಧನೆಯ ಜೊತೆಗೆ ಸ್ವಯಂಕಲಿಕಾ ಸಾಮಗ್ರಿಯನ್ನು ಉಪಯೋಗಿಸಿಕೊಂಡು ಕಲಿತ ವಿದ್ಯಾರ್ಥಿಗಳ ಹಾಗೂ (c) ಕೇವಲ ಸಾಂಪ್ರದಾಯಕ ಬೋಧನೆಯಿಂದ ಕಲಿತ ವಿದ್ಯಾರ್ಥಿಗಳ ಸಾಧನಾ ಮಟ್ಟದಲ್ಲಿ ವ್ಯತ್ಯಾಸವನ್ನು ಗುರುತಿಸುವುದು.

ಪ್ರಾಕ್ಕಲ್ಪನೆಗಳು (Hypotheses)

(ಅ) ಸಾಂಪ್ರದಾಯಕ ಬೋಧನೆಯ ಜೊತೆಗೆ ಸ್ವಯಂಕಲಿಕಾ ಸಾಮಗ್ರಿಯನ್ನು ಉಪಯೋಗಿಸಿಕೊಂಡು ಕಲಿತ ವಿದ್ಯಾರ್ಥಿಗಳ ಸಾಧನಾ ಮಟ್ಟವು ಕೇವಲ ಸಾಂಪ್ರದಾಯಕ ಬೋಧನೆಯಿಂದ ಮಾತ್ರ ಕಲಿತ ವಿದ್ಯಾರ್ಥಿಗಳ ಸಾಧನಾ ಮಟ್ಟಕ್ಕಿಂತ ಉನ್ನತವಾಗಿರುತ್ತದೆ.

(ಆ) ಕೇವಲ ಸ್ವಯಂಕಲಿಕಾ ಸಾಮಗ್ರಿಯನ್ನು ಮಾತ್ರ ಉಪಯೋಗಿಸಿಕೊಂಡು ಕಲಿತ ವಿದ್ಯಾರ್ಥಿಗಳ ಸಾಧನಾ ಮಟ್ಟವು ಸಾಂಪ್ರದಾಯಕ ಬೋಧನೆಯ ಜೊತೆಗೆ ಸ್ವಯಂಕಲಿಕಾ ಸಾಮಗ್ರಿಯನ್ನು ಉಪಯೋಗಿಸಿಕೊಂಡು ಕಲಿತ ವಿದ್ಯಾರ್ಥಿಗಳ ಸಾಧನಾ ಮಟ್ಟಕ್ಕಿಂತ ಕಡಿಮೆಯಾಗಿದ್ದು, ಕೇವಲ ಸಾಂಪ್ರದಾಯಕ ಬೋಧನೆಯಿಂದ ಕಲಿತ ವಿದ್ಯಾರ್ಥಿಗಳ ಸಾಧನಾ ಮಟ್ಟಕ್ಕಿಂತ ಉನ್ನತವಾಗಿರುತ್ತದೆ.

ಅಧ್ಯಯನದ ಇತಿಮಿತಿಗಳು

(ಅ) ಸ್ವಯಂಕಲಿಕಾ ಸಾಮಗ್ರಿಯ ತಯಾರಿಕೆಗೆ ಕನ್ನಡ ವ್ಯಾಕರಣದಲ್ಲಿ 'ಸಮಾಸ ಪ್ರಕರಣ'ವನ್ನು ಮಾತ್ರ ಆಯ್ಕೆಮಾಡಿಕೊಳ್ಳಲಾಗಿದೆ.

(ಆ) ಮಂಡ್ಯ ನಗರದ ಕಾಳೇಗೌಡ ಪ್ರೌಢಶಾಲೆಯ 9ನೆಯ ತರಗತಿಯ ವಿದ್ಯಾರ್ಥಿಗಳನ್ನು ಮಾತ್ರ ಅಯ್ಕೆ ಮಾಡಿಕೊಳ್ಳಲಾಗಿದೆ.

ಸಂಶೋಧನಾ ಕ್ರಮ

(ಅ) ಸ್ವಯಂಕಲಿಕಾ ಸಾಮಗ್ರಿಯ ರಚನೆ : ಸಮಾಸ ಪ್ರಕರಣದ ವಸ್ತು ವಿಶ್ಲೇಷಣೆ ಮಾಡಿ, ಬೋಧನಾ ಗುರಿಗಳನ್ನು ವಿದ್ಯಾರ್ಥಿಗಳ ವರ್ತನೆಗಳಿಗೆ ಅನುಗುಣವಾಗಿ ನಿರ್ದಿಷ್ಟವಾಗಿ ರೂಪಿಸಿಕೊಳ್ಳಲಾಯಿತು. ಕಲಿಕೆಯ ನಂತರ ವಿದ್ಯಾರ್ಥಿಗಳ

ವರ್ತನೆಯಲ್ಲಿ ಉಂಟಾಗುವ ನಿರ್ದಿಷ್ಟ ಬದಲಾವಣೆಗಳನ್ನು ಸ್ಪಷ್ಟಪಡಿಸುವಂತೆಯೂ, ಅವನ್ನು ಪರೀಕ್ಷಣದ ಮೂಲಕ ಮೌಲ್ಯಮಾಪನ ಮಾಡುವಂತೆಯೂ ಗುರಿಗಳನ್ನು ನಿರೂಪಿಸಲಾಯಿತು. ಸಮಾಸ ಪ್ರಕರಣಕ್ಕೆ ಸಂಬಂಧಪಟ್ಟ ಪ್ರಮುಖವಾದ ಕನ್ನಡ ವ್ಯಾಕರಣ ಗ್ರಂಥಗಳನ್ನು ಪೂರ್ವಭಾವಿಯಾಗಿ ಅಧ್ಯಯನ ಮಾಡಿ ವಸ್ತುವಿಷಯವನ್ನು ಗ್ರಹಿಸಿಕೊಂಡು, ಪ್ರೌಢಶಾಲೆಯ ಮೂರೂ ತರಗತಿಗಳ (8, 9, 10) ಪ್ರಚಲಿತ ಕನ್ನಡ ಪಠ್ಯ ಹಾಗೂ ಉಪಪಠ್ಯ ಪುಸ್ತಕಗಳನ್ನು ಪರಿಶೀಲಿಸಿ ಪ್ರಯೋಗದಲ್ಲಿರುವ ಸಮಾಸ ಪದಗಳನ್ನು ಗುರುತಿಸಿಕೊಳ್ಳಲಾಯಿತು. ವಿದ್ಯಾರ್ಥಿಗಳಲ್ಲಿ ನಿರೀಕ್ಷಿತ ಬದಲಾವಣೆಯನ್ನುಂಟುಮಾಡಲು ಸಹಾಯಕವಾಗುವ ರೀತಿಯಲ್ಲಿ ಕಲಿಕಾ ವಿಷಯವನ್ನು ಸೂಕ್ತವಾದ ಉಪಭಾಗಗಳನ್ನಾಗಿಸಿಕೊಂಡು, ಒಂದೊಂದು ವಿಭಾಗದಲ್ಲಿಯೂ ವಿದ್ಯಾರ್ಥಿಗಳೇ ಸ್ವತಃ ಓದಿಕೊಂಡು ವಿಷಯ ಗ್ರಹಿಸಲು ಅನುಕೂಲವಾಗುವಂತೆ ಅನುಗಮನಾತ್ಮಕವಾಗಿ ಕಲಿಕಾ ಬಂಧಗಳನ್ನು ರಚಿಸಲಾಯಿತು. ಕಲಿಕಾ ಸಾಮಗ್ರಿಯ ತಯಾರಿಕೆಗೆ ಸಮಾಸ ಪ್ರಕರಣವನ್ನು ಕೆಳಕಂಡಂತೆ ವಿಭಾಗಿಸಿಕೊಳ್ಳಲಾಯಿತು.

1. ಸಮಾಸ ಎಂದರೇನು ಮತ್ತು ಸಮಾಸ ಪ್ರಭೇದಗಳು
2. ಉತ್ತರಪದಪ್ರಧಾನ ಸಮಾಸಗಳು ; (ಅ) ತತ್ಪುರುಷ ಸಮಾಸ (ಆ) ಕರ್ಮಧಾರಯ ಸಮಾಸ (ಇ) ದ್ವಿಗು ಸಮಾಸ (ಈ) ಕ್ರಿಯಾ ಸಮಾಸ (ಉ) ಗಮಕ ಸಮಾಸ
3. ಪೂರ್ವಪದ ಪ್ರಧಾನ ಸಮಾಸ (ಅಂಶಿ ಸಮಾಸ)
4. ಉಭಯಪದಪ್ರಧಾನ ಸಮಾಸ (ದ್ವಂದ್ವ ಸಮಾಸ)
5. ಅನ್ಯಪದ ಪ್ರಧಾನಸಮಾಸ (ಬಹುವ್ರೀಹಿ ಸಮಾಸ)

ಬಂಧಗಳು ಚಟುವಟಿಕಾರೂಪದಲ್ಲಿದ್ದು ಒಂದೊಂದು ಕಲಿಕಾ ಬಂಧದ ಕೊನೆಯಲ್ಲಿಯೂ ಕಲಿಕೆಯನ್ನು ದೃಢಪಡಿಸಿಕೊಳ್ಳಲೂ, ಪ್ರೋತ್ಸಾಹಿಸಲೂ ಉತ್ತರಬಂಧಗಳನ್ನು ಸೇರಿಸಿ ಲಂಬೀಯ ಸಂಯೋಜಿತ ಕಾರ್ಯರೂಪದಲ್ಲಿ (linear programme) ಕಲಿಕಾ ಸಾಮಗ್ರಿಯನ್ನು ತಯಾರಿಸಲಾಯಿತು. ಈ ಬಗ್ಗೆ ಪೂರ್ವಭಾವಿಯಾಗಿ ಕೆಲವು ಶಿಕ್ಷಣ ಕಾಲೇಜಿನ ಹಾಗೂ ಪ್ರೌಢಶಾಲಾ ಕನ್ನಡ ಬೋಧಕರೊಡನೆ ಸುದೀರ್ಘವಾಗಿ ಚರ್ಚಿಸಿ ಸೂಕ್ತ ಸಲಹೆಯನ್ನು ಪಡೆಯಲಾಗಿತ್ತು.

ರಚಿಸಿದ ಸ್ವಯಂಕಲಿಕಾ ಸಾಮಗ್ರಿಯ ಬಗೆಗೆ ಪ್ರೌಢಶಾಲೆಯ ನಾಲ್ಕೈದು ವಿದ್ಯಾರ್ಥಿಗಳ ಪ್ರತಿಕ್ರಿಯೆ ಪಡೆದು ಅವರ ಶಿಕ್ಷಣ ಮಟ್ಟಕ್ಕೆ ಅನುಗುಣವಾಗಿದೆ ಎಂಬುದನ್ನು ದೃಢಪಡಿಸಿಕೊಂಡು, ಆ ಮೂಲಪ್ರತಿಯನ್ನು ಶಿಕ್ಷಣ ಕಾಲೇಜಿನ ಹಾಗೂ ಪ್ರೌಢಶಾಲೆಯ ಅನುಭವೀ ಕನ್ನಡ ಬೋಧಕರ ಪರಿಶೀಲನೆಗೆ ಒಳಪಡಿಸಿ ಅವಶ್ಯಕವೆನಿಸಿದಲ್ಲಿ ಕೆಲವು ಮಾರ್ಪಾಟುಗಳನ್ನು ಮಾಡಿ ಪರಿಷ್ಕೃತಗೊಳಿಸಿ ಅಂತಿಮವಾಗಿ ಸ್ವಯಂಕಲಿಕಾ ಸಾಮಗ್ರಿಯನ್ನು ಪೂರ್ಣಗೊಳಿಸಲಾಯಿತು.

ಸಮಾಸ ಪ್ರಕರಣದಲ್ಲಿ ವಿದ್ಯಾರ್ಥಿಗಳ ಕಲಿಕೆಯ/ ಸಾಧನಾ ಮಟ್ಟವನ್ನು ಅಳೆ

ಯುಳ್ಳ 50 ಅಂಕಗಳಿಗೆ 1 ಗಂಟೆ ಅವಧಿಯ ಸಾಧನಾ ಪರೀಕ್ಷೆಯನ್ನು ರಚಿಸಲಾಯಿತು. ಪರೀಕ್ಷೆಯು ವಸ್ತುನಿಷ್ಠವೂ, ಆದಷ್ಟು ಮಟ್ಟಿಗೆ ವಿಶ್ವಸನೀಯವೂ, ಸಿಂಧುವಾದುದೂ ಆಗಿರುವಂತೆ ಎಚ್ಚರ ವಹಿಸಲಾಗಿತ್ತು. ಪ್ರಾರಂಭದಲ್ಲಿ ನಿರೂಪಿಸಿದ ನಿರ್ದಿಷ್ಟಗುರಿಗಳೆಲ್ಲಕ್ಕೂ, ಸಮಾಸ ಪ್ರಕರಣದ ವಿವಿಧ ವಿಭಾಗಗಳಲ್ಲಿರುವ ಪಠ್ಯ ವಿಷಯಕ್ಕೂ ಸೂಕ್ತವಾಗಿ ಪ್ರಾತಿನಿಧ್ಯತೆ ಕೊಡುವುದರಿಂದಲೂ, ಪ್ರಾಯೋಗಿಕ ಗುಂಪಿನ ವಿದ್ಯಾರ್ಥಿಗಳೇ ಅಲ್ಲದೆ ಉಳಿದವರೂ ಉತ್ತರಿಸುವಂತಹ ಸಾಮಾನ್ಯ ರೀತಿಯ ಪ್ರಶ್ನೆಗಳನ್ನೇ ಒಳಗೊಂಡಿರುವುದರಿಂದಲೂ ಪರೀಕ್ಷೆಯ ಆಂತರಿಕ ಸಿಂಧುತ್ವವನ್ನು (internal validity) ಕಾಪಾಡಿಕೊಳ್ಳಲಾಯಿತು. ಸುಲಭಗ್ರಾಹ್ಯವಾಗಿದ್ದು ಸ್ಪಷ್ಟತೆ ಮತ್ತು ನಿರ್ದಿಷ್ಟತೆ ಪಡೆದಿರುವ ಲಘು ಉತ್ತರ ಹಾಗೂ ವಸ್ತುನಿಷ್ಠ ಮಾದರಿ ಪ್ರಶ್ನೆಗಳನ್ನೊಳಗೊಂಡಿರುವುದರಿಂದ ವಸ್ತುನಿಷ್ಠತೆ ಹಾಗೂ ವಿಶ್ವಸನೀಯತೆಗೆ ಅನುವು ಮಾಡಿಕೊಡಲಾಯಿತು. ಬೋಧಕರ ಕಲ್ಪನೆಯ ಮೇರೆಗೆ ಬಹುತೇಕ ಪ್ರಶ್ನೆಗಳು ಸಾಧಾರಣ ಕ್ಲಿಷ್ಟತೆಯ ಮಟ್ಟದಲ್ಲಿದ್ದು, ಕೆಲವು ಅತಿಸರಳವೂ ಕೆಲವು ಅತಿ ಕ್ಲಿಷ್ಟವೂ ಆಗಿದ್ದು, ಪ್ರಶ್ನೆಗಳನ್ನು ಸರಳತೆಯಿಂದ ಕ್ಲಿಷ್ಟತೆಯೆಡೆಗೆ ಜೋಡಿಸಲಾಯಿತು. ಪ್ರಾಯೋಗಿಕವಾಗಿ ಸಿಂಧುತ್ವ ಹಾಗೂ ವಿಶ್ವಸನೀಯತೆಗಳನ್ನು ಕಂಡುಹಿಡಿಯದಿದ್ದರೂ ಪರೀಕ್ಷೆ ಉತ್ತಮವಾಗಿರುವಂತೆ ಗಮನ ನೀಡಲಾಯಿತು.

(ಆ) ಪ್ರತಿದರ್ಶೀಕರಣ (Sampling) – ಕನ್ನಡ ಪಠ್ಯ ಸೂಚಿಯ ಪ್ರಕಾರ ಸಮಾಸ ಪ್ರಕರಣವನ್ನು 9ನೇ ತರಗತಿಯಲ್ಲಿ ಬೋಧಿಸಲ್ಪಡಬೇಕಾಗಿರುವುದರಿಂದ 9ನೇ ತರಗತಿಯ ವಿದ್ಯಾರ್ಥಿಗಳನ್ನೇ ಆಯ್ಕೆ ಮಾಡಿಕೊಳ್ಳಲಾಯಿತು. ಮಂಡ್ಯ ನಗರದ ಕಾಳೇಗೌಡ ಪ್ರೌಢಶಾಲೆಯ 9ನೆಯ ತರಗತಿಯ ವಿದ್ಯಾರ್ಥಿಗಳನ್ನು ಕ್ರಮಬದ್ಧವಾಗಿ ಆಯ್ಕೆ ಮಾಡಿಕೊಳ್ಳುವ ಮೂಲಕ ಮೂರು ಗುಂಪುಗಳಾಗಿ ವಿಭಾಗಿಸಲಾಯಿತು. ($ಗ^1$, $ಗ^2$, $ಗ^3$). ಒಂದೊಂದು ಗುಂಪುಗಳಲ್ಲಿಯೂ 20 ವಿದ್ಯಾರ್ಥಿಗಳಿದ್ದು, ಆ ಮೂರೂ ಗುಂಪುಗಳನ್ನು ಕಳೆದ ವಾರ್ಷಿಕ ಪರೀಕ್ಷೆಯಲ್ಲಿ ಕನ್ನಡ ವಿಷಯದಲ್ಲಿ ಗಳಿಸಿದ್ದ ಅಂಕಗಳ ಮಧ್ಯಮಾಂಕ ಹಾಗೂ ಮಾನಕ ವಿಚಲನೆಗಳಿಂದ ಸರಿಹೊಂದಿಸಿ ಸಮಾನ ಗುಣಮಟ್ಟದ ವಿದ್ಯಾರ್ಥಿಗಳಿಂದ ಕೂಡಿರುವಂತೆ ಎಚ್ಚರವಹಿಸಲಾಯಿತು. ಮೂರು ಗುಂಪುಗಳ ಮಧ್ಯಮಾಂಕ ಮತ್ತು ಮಾನಕ ವಿಚಲನೆಗಳು ಕೆಳಕಂಡಂತಿವೆ.

ಪಟ್ಟಿ 1

ಗುಂಪು	ಒಟ್ಟು ವಿದ್ಯಾರ್ಥಿಗಳು (N)	ಮಧ್ಯಮಾಂಕ(M)	ಮಾನಕ ವಿಚಲನೆ (SD)
$ಗ^1$	20	74.4	26.11
$ಗ^2$	20	74.25	25.37
$ಗ^3$	20	74.05	26.64

ಇದರಿಂದ ಮೂರೂ ಗುಂಪುಗಳ ಪ್ರಸರಣದಲ್ಲಿ ಹೆಚ್ಚಿನ ವ್ಯತ್ಯಾಸವಿಲ್ಲ ಎಂಬುದನ್ನು ದೃಢ ಪಡಿಸಲಾಯಿತು.

ಗುಂಪು ಗ1 ಮತ್ತು ಗ2 ನ್ನು ಪ್ರಯೋಗಾತ್ಮಕ ಗುಂಪುಗಳೆಂದೂ (experimental groups) ಗುಂಪು ಗ3 ನ್ನು ನಿರ್ಬಂಧಿತ ಗುಂಪೆಂದೂ (control group) ಪರಿಗಣಿಸಲಾಯಿತು.

(ಇ) ಕೈಗೊಂಡ ಕ್ರಮ : ನಿರ್ಬಂಧಿತ ಗುಂಪು ಗ3 ಕ್ಕೆ ಸಾಂಪ್ರದಾಯಿಕ ಕ್ರಮದಲ್ಲಿ ಸಮಾಸ ಪ್ರಕರಣವನ್ನು ಬೋಧಿಸಿದರೆ, ಪ್ರಯೋಗಾತ್ಮಕ ಗುಂಪು ಗ1 ಕ್ಕೆ ರಚಿಸಿದ ಸ್ವಯಂ ಕಲಿಕಾ ಸಾಮಗ್ರಿಯಿಂದ ಮಾತ್ರವೇ ಸ್ವತಃ ಓದಿ ಕಲಿಯುವಂತೆ ಮಾರ್ಗದರ್ಶನ ನೀಡಲಾಯಿತು. ಗುಂಪು ಗ2 ಕ್ಕೆ ಗ3 ರೊಡನೆ ಬೋಧಿಸಲ್ಪಟ್ಟನಂತರ ಕಲಿಕೆಯ ಮುಂದುವರಿಕೆಗಾಗಿ ಸ್ವಯಂ ಕಲಿಕಾ ಸಾಮಗ್ರಿಯನ್ನು ಒದಗಿಸಲಾಯಿತು. ಗ1 ಮತ್ತು ಗ2 ಗುಂಪುಗಳಿಗೆ ನೀಡಿದ್ದ ಸ್ವಯಂಕಲಿಕಾ ಸಾಮಗ್ರಿಯ ಲಾಭ ಯಾವುದೇ ರೀತಿಯಿಂದಲೂ ಗ3 ಕ್ಕೆ ದೊರೆಯದಂತೆ ಎಚ್ಚರ ವಹಿಸಲಾಯಿತು. ಪ್ರಯೋಗಾವಧಿಯ ಕೊನೆಯಲ್ಲಿ (2 ತಿಂಗಳ ನಂತರ) ಒಟ್ಟಾರೆ ಮೂರು ಗುಂಪುಗಳಿಗೂ 50 ಅಂಕದ 1 ಗಂಟೆ ಅವಧಿಯ ವಸ್ತುನಿಷ್ಠ ಪರೀಕ್ಷೆಯನ್ನು ಪ್ರಯೋಗಿಸಲಾಯಿತು.

ಫಲಿತಾಂಶ ವಿಶ್ಲೇಷಣೆ ಮತ್ತು ಚರ್ಚೆ (Results and Discussion)

ಸಾಧನಾ ಪರೀಕ್ಷೆಯ ಅಂಕಗಳನ್ನು ಮೂರು ಗುಂಪುಗಳಿಗೂ (ಗ1, ಗ2, ಮತ್ತು ಗ3) ಪ್ರತ್ಯೇಕವಾಗಿ ಪಟ್ಟಿಮಾಡಿಕೊಂಡು, ಅದನ್ನು ವಿಶ್ಲೇಷಿಸಲು ಸೂಕ್ತವಾದ ಸಂಖ್ಯಾ ಶಾಸ್ತ್ರೀಯ ಕ್ರಮವನ್ನು ಕೈಗೊಳ್ಳಲಾಯಿತು. ಎರಡು ಪ್ರಾಯೋಗಿಕ ಗುಂಪುಗಳು ಹಾಗೂ ಒಂದು ನಿಯಂತ್ರಿತ ಗುಂಪು ಅಂದರೆ ಒಟ್ಟಾರೆ 3 ಗುಂಪುಗಳು ಸ್ವತಂತ್ರವಾಗಿದ್ದು ಅವುಗಳಿಗೆ ಒಂದೇ ಪರೀಕ್ಷೆಯನ್ನು ಪ್ರಯೋಗಿಸಿರುವುದರಿಂದ ಮೂರು ಮಧ್ಯಮಾಂಕ ಗಳನ್ನು ಹೋಲಿಸಬೇಕಾಯಿತು. ಆದ್ದರಿಂದ ಸ್ವತಂತ್ರವಾದ ಬಹುಸಂಖ್ಯಾ ಸಮೂಹ ಗಳ ಮಧ್ಯಮಾಂಕ ವ್ಯತ್ಯಾಸವನ್ನು ಕಂಡುಹಿಡಿಯಲು ಸಹಾಯಕಾರಿಯಾದ ಏಕಮುಖ ಪ್ರಸರಣ ವಿಶ್ಲೇಷಣಾ ಕ್ರಮದ (one way ANOVA) F ಪರೀಕ್ಷೆಯನ್ನು ಅಳ ವಡಿಸಿಕೊಳ್ಳಲಾಯಿತು. [Cohen & Holiday p 201]. F ಪರೀಕ್ಷೆಯ ಸಂಗ್ರಹಾತ್ಮಕ ವಿವರವನ್ನು ಪಟ್ಟಿ 2 ರಲ್ಲಿ ಕೊಡಲಾಗಿದೆ.

ಪಟ್ಟಿ 2ರ ಪ್ರಕಾರ df (ಸ್ವಾತಂತ್ರ್ಯದ ಪ್ರಮಾಣ) 2 ಮತ್ತು 57ಕ್ಕೆ 0·05 ಹಂತದಲ್ಲಿ $F=3{\cdot}15$ ಎಂದೂ, 0·01 ಹಂತದಲ್ಲಿ $F=4{\cdot}98$ ಎಂದೂ ಕಂಡು ಬಂದಿತು. ದತ್ತಾಂಶಕ್ಕೆ ಲೆಕ್ಕಾಚಾರ ಮಾಡಿರುವ F ಬೆಲೆ (4·60) 0·05 ಹಂತ ದಲ್ಲಿಯ F ಬೆಲೆ (3.15) ಗಿಂತ ಹೆಚ್ಚಾಗಿರುವುದರಿಂದ 0·05 ಹಂತದಲ್ಲಿ ಮಹತ್ವ ಪೂರ್ಣವಾಗಿದೆ. ಆದ್ದರಿಂದ ಶೂನ್ಯ ಪ್ರಾಕ್ಕಲ್ಪನೆಯನ್ನು (null hypothesis)

ಕ್ಕೆ ಬಿಟ್ಟು ಮಧ್ಯಮಾಂಕಗಳ ನಡುವೆ ವ್ಯತ್ಯಾಸವಿದೆ ಎಂಬುದನ್ನು ಒಪ್ಪಿಕೊಳ್ಳಲಾಯಿತು. ಅಂದರೆ ಮೂರು ರೀತಿಯ ಉಪಚಾರಗಳು ವಿದ್ಯಾರ್ಥಿಗಳ ಸಾಧನೆಯಲ್ಲಿ ಮಹತ್ವಪೂರ್ಣ ವ್ಯತ್ಯಾಸವನ್ನುಂಟುಮಾಡಿವೆ ಎಂಬುದನ್ನು ತೀರ್ಮಾನಿಸಲಾಯಿತು.

ಪಟ್ಟಿ 2 — F ಪರೀಕ್ಷೆಯ ಸಂಗ್ರಹಾತ್ಮಕ ವಿವರ

ಪ್ರಸರಣದ ಮೂಲಾಧಾರ Source of Variation	ವರ್ಗಗಳ ಮೊತ್ತ Sum of squares	ಸ್ವಾತಂತ್ರ್ಯದ ಪ್ರಮಾಣ df	ಪ್ರಸರಣ Variance	F ಬೆಲೆ
ವರ್ಗಗಳ ನಡುವೆ Between groups	396.63	2	$\frac{396.63}{2}$ = 198.32	4.60*
ವರ್ಗಗಳೊಳಗೆ Within groups	2460.10	57	$\frac{2460.10}{57}$ = 43.16	
ಮೊತ್ತ Total	2856.73	59		

*0.05 ಹಂತದಲ್ಲಿ ಮಹತ್ವಪೂರ್ಣವಾಗಿದೆ.

F ಪರೀಕ್ಷೆಯಿಂದ ಮೂರೂ ಗುಂಪುಗಳ ನಡುವಿನ ಪ್ರಸರಣ ಮಹತ್ವಪೂರ್ಣವಾಗಿದೆ ಎಂಬುದು ಸ್ಪಷ್ಟವಾಯಿತು. ಅಂತೆಯೇ ಈ ಮೂರರಲ್ಲಿ ಯಾವ ಎರಡು ಮಧ್ಯಮಾಂಕಗಳಲ್ಲಿ ಮಹತ್ವಪೂರ್ಣ ವ್ಯತ್ಯಾಸವಿದೆ ಎಂಬುದನ್ನು ಗುರುತಿಸಲು ಮಧ್ಯಮಾಂಕಗಳ ವ್ಯತ್ಯಾಸದ ಮಹತ್ವವನ್ನು ಲೆಕ್ಕಾಚಾರ ಮಾಡುವ 't' ಪರೀಕ್ಷೆಯನ್ನು ಅಳವಡಿಸಿಕೊಳ್ಳಲಾಯಿತು. 't' ಪರೀಕ್ಷೆಯ ವಿವರವನ್ನು ಕೆಳಕಂಡ ಪಟ್ಟಿಯಲ್ಲಿ ಕೊಡಲಾಗಿದೆ.

ಪಟ್ಟಿ 3 – ಎರಡು ಮಧ್ಯಮಾಂಕಗಳ ವ್ಯತ್ಯಾಸದ ಮಹತ್ವದ ಲೆಕ್ಕಾಚಾರಕ್ಕೆ 't' ಪರೀಕ್ಷೆಯ ವಿವರ

	ಮಧ್ಯಮಾಂಕಗಳ ವ್ಯತ್ಯಾಸ	ಲೆಕ್ಕಾಚಾರ ಮಾಡಿದ 't' ಬೆಲೆ*
M_1-M_3	24.35—20.10 = 4.25	2.14 (0.05 ಹಂತದಲ್ಲಿ ಮಹತ್ವಪೂರ್ಣವಾಗಿದೆ.)
M_1-M_2	24.35—26.25 = −1.90	0.84
M_2-M_3	26.25—20.10 = 6.15	3.42 (0.01 ಹಂತದಲ್ಲಿ ಮಹತ್ವಪೂರ್ಣವಾಗಿದೆ)

*ಪಟ್ಟಿಯ 't' ಬೆಲೆ df = 38ಕ್ಕೆ 2.03 (0.05 ಹಂತದಲ್ಲಿ) ಮತ್ತು 2.72 (0.01 ಹಂತದಲ್ಲಿ) ಆಗಿದೆ.

ಲೆಕ್ಕಾಚಾರ ಮಾಡಲಾದ 't' ಬೆಲೆಗಳು 2·14 (M_1–M_3ಗೆ) ಮತ್ತು 3·42 (M_2–M_3ಗೆ) ಕ್ರಮವಾಗಿ 0·05 ಹಂತದಲ್ಲಿಯೂ, 0·01 ಹಂತದಲ್ಲಿಯೂ ಮಹತ್ವಪೂರ್ಣವಾಗಿವೆ. ಆದ್ದರಿಂದ 1 ಮತ್ತು 3ನೆಯ ಗುಂಪುಗಳ ಮಧ್ಯಮಾಂಕ ಹಾಗೂ 2 ಮತ್ತು 3ನೆಯ ಗುಂಪುಗಳ ಮಧ್ಯಮಾಂಕಗಳಲ್ಲಿರುವ ವ್ಯತ್ಯಾಸ ಮಹತ್ವಪೂರ್ಣವಾಗಿದೆ. ಅಂದರೆ ಕೇವಲ ಸ್ವಯಂಕಲಿಕಾ ಸಾಮಗ್ರಿಯನ್ನು ಮಾತ್ರ ಉಪಯೋಗಿಸಿಕೊಂಡ ಗುಂಪಿನ ಹಾಗೂ ಬೋಧನೆಯ ಜೊತೆಗೆ ಸ್ವಯಂ-ಕಲಿಕಾ ಸಾಮಗ್ರಿಯನ್ನು ಉಪಯೋಗಿಸಿಕೊಂಡ ಗುಂಪಿನ ಸಾಧನೆಯ ಮಟ್ಟ ಸಾಂಪ್ರದಾಯಕವಾಗಿ ಬೋಧಿಸಲ್ಪಟ್ಟ ಗುಂಪಿನ ಸಾಧನೆಯ ಮಟ್ಟಕ್ಕಿಂತ ಉತ್ತಮತರವಾಗಿದೆ ಎಂಬುದನ್ನು ಒಪ್ಪಿಕೊಳ್ಳಲಾಯಿತು.

ಸಂಯೋಜಿತ ಸಾಮಗ್ರಿಯನ್ನುಪಯೋಗಿಸಿಕೊಳ್ಳುವುದರಿಂದ ಉನ್ನತ ಮಟ್ಟದ ಸಾಧನೆ ಸಾಧ್ಯವೆಂಬುದನ್ನು ತಿಳಿಯಪಡಿಸಿರುವ ಪೋರ್ಟರ್ (1959), ಡೇವಿಸ್ (1961), ಸ್ಮಿತ್ (1960), ಹಾಲ್ಯಾಂಡ್ (1961), ಪವಾರ್ (1966), ದೇಸಾಯಿ (1966), ಷಾ (1969), ಜೋಷಿ (1972) ಯವರ ಅಧ್ಯಯನಗಳಂತೆಯೇ ಪ್ರಸಕ್ತ ಅಧ್ಯಯನದಲ್ಲಿಯೂ ಸಂಯೋಜಿತ ಸಾಮಗ್ರಿಯನ್ನುಪಯೋಗಿಸಿದ ಗುಂಪುಗಳ ಸಾಧನಾ ಮಟ್ಟವೇ ಉನ್ನತವಾಗಿ ಕಂಡುಬಂದಿದೆ. ಷಾ (1964) ಅಧ್ಯಯನದ ಫಲಿತಾಂಶಗಳ ವಿಲಕ್ಷಣತೆ ಉಲ್ಲೇಖಾರ್ಹವಾಗಿದೆ. ಕೇವಲ ಸಂಯೋಜಿತ ಸಾಮಗ್ರಿಯನ್ನು ಮಾತ್ರ ಉಪಯೋಗಿಸಿದ ಗುಂಪಿನ ಸಾಧನಾಮಟ್ಟ ಉತ್ತಮವಾಗಿದ್ದು ಸಂಯೋಜಿತ ಸಾಮಗ್ರಿಯನ್ನು ಆಧರಿಸಿ ಬೋಧಕನಿಂದ ಬೋಧಿಸಲ್ಪಟ್ಟ ಗುಂಪಿನ ಸಾಧನೆ ಕೆಳಮಟ್ಟದ್ದಾಗಿದೆ. ವಿದ್ಯಾರ್ಥಿಗಳ ಸ್ವಯಂಕಲಿಕಾ ಪ್ರೇರಣಾಶಕ್ತಿಯನ್ನು ಗೌಣವಾಗಿಸಿ ಅತ್ಯಾಸಕ್ತಿಯಿಂದ ಅವರನ್ನು ತಮ್ಮ ದಾರಿಯಲ್ಲಿಯೇ ನಡೆಸಿಕೊಂಡು ಹೋಗುವ ಬೋಧಕರ ಪ್ರವೃತ್ತಿಯೇ ಇದಕ್ಕೆ ಕಾರಣವೆಂದು ತಿಳಿಸಲಾಗಿದೆ. ಇದಕ್ಕೆ ವಿರುದ್ಧವಾಗಿ ಪ್ರಸಕ್ತ ಅಧ್ಯಯನ, ಬೋಧನೆಯ ಜೊತೆಗೆ ಸ್ವಯಂಕಲಿಕಾ ಸಾಮಗ್ರಿಯನ್ನುಪಯೋಗಿಸಿಕೊಂಡ ಗುಂಪಿನ ಸಾಧನಾ ಮಟ್ಟ ಕೇವಲ ಸ್ವಯಂಕಲಿಕಾ ಸಾಮಗ್ರಿಯನ್ನು ಮಾತ್ರ ಉಪಯೋಗಿಸಿಕೊಂಡ ಗುಂಪಿನ ಸಾಧನಾ ಮಟ್ಟಕ್ಕಿಂತ ಉನ್ನತವಾಗಿದ್ದು, ಈ ಎರಡೂ ಗುಂಪುಗಳ ಸಾಧನೆ ಕೇವಲ ಸಾಂಪ್ರದಾಯಕ ಬೋಧನೆಯಿಂದ ಕಲಿತ ಗುಂಪಿನ ಸಾಧನೆಗಿಂತ ಉನ್ನತವಾಗಿದೆ ಎಂಬುದನ್ನು ತಿಳಿಯಪಡಿಸುತ್ತದೆ.

ಅನುಮಿತಿ (Conclusion) :— ಒಟ್ಟಿನಲ್ಲಿ ಈ ಅಧ್ಯಯನದಿಂದ ತಿಳಿದು ಬರುವ ಅಂಶ ಹೀಗಿದೆ – ಸಾಂಪ್ರದಾಯಕ ಬೋಧನೆಯ ಜೊತೆಗೆ ಸ್ವಯಂಕಲಿಕಾ ಸಾಮಗ್ರಿಯನ್ನುಪಯೋಗಿಸಿಕೊಳ್ಳುವುದು, ಕೇವಲ ಸ್ವಯಂಕಲಿಕಾ ಸಾಮಗ್ರಿಯನ್ನು ಮಾತ್ರ ಉಪಯೋಗಿಸಿಕೊಳ್ಳುವುದಕ್ಕಿಂತ ಸ್ವಲ್ಪಮಟ್ಟಿಗೆ ಉತ್ತಮವಾಗಿದ್ದು, ಇವೆರಡೂ ಕೇವಲ ಸಾಂಪ್ರದಾಯಕ ಬೋಧನೆಗಿಂತ ಉತ್ತಮತರವಾಗಿವೆ.

ಈ ಅಧ್ಯಯನಕ್ಕೆ ಮಾರ್ಗದರ್ಶನ ನೀಡಿದ ಡಾ|| ಪಿ. ಆರ್. ನಾಯರ್, ಪ್ರಾಧ್ಯಾಪಕ ಶಿಕ್ಷಣ ವಿಭಾಗ ಮತ್ತು ಮುಖ್ಯಸ್ಥರಿಗೆ ನನ್ನ ಧನ್ಯವಾದಗಳು.

ಆಧಾರ ಗ್ರಂಥಗಳು

1. Buch M.B. (Ed) : *A Survey of Research in Education*, CABE, M S. University of Baroda, Baroda 1974

2. Cohen & Holliday : *Statistics for Education and Physical Education*, Harper & Row Publishers, London 1979.

3. Chauhan S.S. : *A Text book of Programmed Instruction*

4. Garrett H E. : *Statistics in Psychology and Education*, Vakils Feffer and Simons Pvt. Ltd. Bombay 1966.

5. Jambunathan M.V. : *Sankhyashastra Parichaya*, Institute of Kannada Studies, University of Mysore.

6. Patel I.J. et. al (Ed) : *A Handbook of Programmed Learning*, IAPL, CASE, M.S. University of Baroda.

7. Roucek. Joseph S. : *Programmed Teaching, A Symposium on Automation in Education*, Peter owen Ltd., London 1968.

8. Saiyidain K.G (Ch.Ed) : *The Fourth Indian Year Book of Education*, (Sec. Edn) NCERT, 1973

9. Desai U.R. : *Programmed Learning v/sTraditional Approach in the Teaching of Gujarati in Standard IX*, School of Psychology, Philosophy of Education, Guj. Uni. 1966.

10. Joshi G.K. : *A Programmed Remedial Course in Modern English Usage for the B.A,, Pre-University Classes*, Central Institute of English and Foreign Languages, Hyderabad 1972.

11. Shah M.S. : *A Programme on Equation Solving*, Dept. of Psychological Foundations, NCERT, N. Delhi 1964.

12. Shah M.S. : *To Develop Auto-instructional Programmes in Algebra for Std. VIII and to find out their effectiveness in relation to different variables*, Ph.D Edn. Guj. Uni. 1969.

13. Sharma M.M. : *A Comparative Study of Outcomes of Teaching of Algebra by Conventional Classroom Method And Method of Programmed Instructions*, Govt. Johari Higher Sec. School, Ladnum, Rajasthan 1966.

14. Sharma R.A. : *A Study of Achievement in Geography Through Programmed Instruction*, Dept. of Psyl. Foundations, NCERT, N. Delhi 1966.

15. Blyth J. W. : *Teaching Machines And Human benigs*, Educational Record, XLI, April 1960. P P 116–125.

16. Davis N.H. : A *Second Teacher*, Audio-visual Instruction, Vol VI, 1961, P P 134–135.

ಮೂಲ : ಬಿ.ಪಿ. ಬರುವಾ
ಅನು : ಬಿ. ನಾಗಪ್ಪ ಮತ್ತು ಬಿ.ಎಸ್. ಮಹೇಶ್ವರಪ್ಪ

ರಾಜಾ ರಾಮ್‌ಮೋಹನ್‌ರಾಯ್ ಗ್ರಂಥಾಲಯ ಪ್ರತಿಷ್ಠಾನ

(ಭಾರತದಲ್ಲಿ ಸಾರ್ವಜನಿಕ ಗ್ರಂಥಪಾಲನೆಯ ಉತ್ತೇಜನಕ್ಕಾಗಿ ಇರುವ ಒಂದು ರಾಷ್ಟ್ರೀಯ ಸಂಸ್ಥೆ)

ಪೀಠಿಕೆ

ಅದರ ಹೆಸರೇ ಸೂಚಿಸುವಂತೆ ರಾಜಾ ರಾಮ್‌ಮೋಹನ್ ರಾಯ್ ಗ್ರಂಥಾಲಯ ಪ್ರತಿಷ್ಠಾನವು ಭಾರತದಲ್ಲಿ ಗ್ರಂಥಾಲಯ ಸೇವೆಯ ಉತ್ತೇಜನಕ್ಕಾಗಿ ಇರುವ ಒಂದು ಸಂಸ್ಥೆ. ಸಮಾಜ ಸುಧಾರಕರಲ್ಲಿ ಮೊದಲಿಗರೂ ಆಧುನೀಕತೆಯನ್ನು ಭಾರತೀಯ ಸಮಾಜದಲ್ಲಿ ಪ್ರಚುರಪಡಿಸಿದವರೂ ಆದ ರಾಜಾ ರಾಮ್‌ಮೋಹನ್ ರಾಯ್ ಅವರ ದ್ವಿತೀಯ ಜನ್ಮ ಶತಮಾನೋತ್ಸವದ ಜ್ಞಾಪಕಾರ್ಥವಾಗಿ 1972ರಲ್ಲಿ ಭಾರತ ಸರಕಾರದ ಶಿಕ್ಷಣ ಮತ್ತು ಸಂಸ್ಕೃತಿ ಸಚಿವ ಶಾಖೆಯಿಂದ ಒಂದು ಸ್ವಾಯತ್ತ ಸಂಸ್ಥೆಯಾಗಿ ಇದು ಸ್ಥಾಪಿಸಲ್ಪಟ್ಟಿತು.

ಉದ್ದೇಶಗಳು

ಸಂಘಸಂಸ್ಥೆಗಳ ನಿಯಮಾವಳಿಗೆ ಅನುಗುಣವಾಗಿ ಈ ಪ್ರತಿಷ್ಠಾನದ ಉದ್ದೇಶಗಳು ಸಾಕಷ್ಟು ವಿವರವಾಗಿವೆ. ಅವುಗಳಲ್ಲಿ ಹೆಚ್ಚು ಮುಖ್ಯವಾದುವುಗಳನ್ನು ಈ ಕೆಳಗೆ ಕೊಟ್ಟಿದೆ :

(ಅ) ರಾಷ್ಟ್ರದಲ್ಲಿ ಗ್ರಂಥಾಲಯ ಚಳುವಳಿಗೆ ಉತ್ತೇಜನವನ್ನೀಯುವುದು, (ಆ) ರಾಷ್ಟ್ರೀಯ ಗ್ರಂಥಾಲಯ ನೀತಿಯನ್ನು ನಿರೂಪಿಸುವುದು ಹಾಗೂ ಅದನ್ನು ಕೇಂದ್ರ ಮತ್ತು ರಾಜ್ಯ ಸರಕಾರಗಳು ಅನುಷ್ಠಾನಕ್ಕೆ ತರುವಂತೆ ಮಾಡುವುದು, (ಇ) ರಾಷ್ಟ್ರೀಯ ಗ್ರಂಥಾಲಯ ವ್ಯವಸ್ಥೆಯೊಂದನ್ನು ರಚಿಸಲು ಸಹಾಯ ಮಾಡುವುದು, (ಈ) ರಾಷ್ಟ್ರೀಯ ಗ್ರಂಥಾಲಯ ಶಾಸನವನ್ನು ಅಳವಡಿಸಲು ಪ್ರಚಾರ ಮಾಡುವುದು,

(ಉ) ಗ್ರಂಥಾಲಯಗಳಿಗೆ ಆರ್ಥಿಕ ಹಾಗೂ ತಾಂತ್ರಿಕ ಸಹಾಯವನ್ನು ನೀಡುವುದು, (ಊ) ರಾಷ್ಟ್ರೀಯ ಹಾಗೂ ಸ್ಥಳೀಯ ಗ್ರಂಥಾಲಯ ಸಂಘಗಳಿಗೆ ಅವು ತಮ್ಮ ಕಾರ್ಯಕ್ರಮಗಳನ್ನು ನಡೆಸಲು ಧನ ಸಹಾಯವನ್ನೀಯುವುದು, (ಋ) ಗ್ರಂಥಾಲಯ ಅಭಿವೃದ್ಧಿಯಲ್ಲಿ ಪಾಲ್ಗೊಂಡಿರುವ ಅಥವಾ ಆಸಕ್ತವಾಗಿರುವ ಸಂಸ್ಥೆಗೆ ಧನಸಹಾಯವನ್ನೊದಗಿಸುವುದು, (ೠ) ಪ್ರತಿಷ್ಠಾನದ ಉದ್ದೇಶಗಳನ್ನು ನೆರವೇರಿಸಲು ಅನುಕೂಲವಾಗುವಂತೆ ಕರಪತ್ರಗಳು, ಮಾಹಿತಿ ಪುಸ್ತಕಗಳು ಮತ್ತು ನಿಯತಕಾಲಿಕೆಗಳನ್ನು ಪ್ರಕಟಿಸಿ ಮಾರಾಟ ಮಾಡುವುದು, (ಎ) ಗ್ರಂಥಾಲಯ ಅಭಿವೃದ್ಧಿಯನ್ನು ಕುರಿತ ವಿಮರ್ಶೆಗಳನ್ನು ಕಾಲಕಾಲಕ್ಕೆ ಪ್ರಕಟಿಸುವುದು, (ಏ) ಗ್ರಂಥಾಲಯ ಅಭಿವೃದ್ಧಿಗೆ ಸಂಬಂಧಿಸಿದ ಅಭಿಪ್ರಾಯ ಹಾಗೂ ಮಾಹಿತಿಗಳ ಕೇಂದ್ರವಾಗಿ ಕಾರ್ಯ ನಿರ್ವಹಿಸುವುದು, (ಐ) ರಾಷ್ಟ್ರಮಟ್ಟದ ಪರಾಮರ್ಶನ ಗ್ರಂಥಗಳನ್ನು ಆಗಾಗ್ಗೆ ಸಂಕಲಿಸುವುದು ಇಲ್ಲವೇ ಅದಕ್ಕೆ ಸಹಾಯ ಮಾಡುವುದು, (ಒ) ರಾಷ್ಟ್ರದಲ್ಲಿ ಗ್ರಂಥಾಲಯಗಳ ಬೆಳವಣಿಗೆಗೆ ಸಂಬಂಧಿಸಿದ ಎಲ್ಲಾ ವಿಷಯಗಳ ಬಗ್ಗೆ ಭಾರತ ಸರಕಾರಕ್ಕೆ ಸಲಹೆ ನೀಡುವುದು, (ಓ) ಗ್ರಂಥಾಲಯ ಅಭಿವೃದ್ಧಿಗೆ ಸಂಬಂಧಪಟ್ಟ ಸಮಸ್ಯೆಗಳನ್ನು ಕುರಿತ ಸಂಶೋಧನೆಗಳಿಗೆ ಪ್ರಚೋದನೆ ನೀಡುವುದು, (ಔ) ಪ್ರತಿಷ್ಠಾನದ ಉದ್ದೇಶಗಳ ನಿರ್ವಹಣೆಗೆ ಅನುಕೂಲವಾಗುವಂತೆ ದೇಶೀಯ ಹಾಗೂ ವಿದೇಶೀಯ ಸಂಸ್ಥೆಗಳೊಡನೆ ಸಹಕರಿಸುವುದು, (ಅಂ) ಗ್ರಂಥಾಲಯ ಬೆಳವಣಿಗೆ ಮತ್ತು ಉಪಯೋಗಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳಲ್ಲಿ ಆಗಾಗ್ಗೆ ಕಾರ್ಯಕ್ರಮಗಳನ್ನು ನಿರೂಪಿಸುವುದು.

ಈ ರೀತಿಯಾಗಿ ರಾಜಾ ರಾಮ್‌ಮೋಹನ್ ರಾಯ್ ಗ್ರಂಥಾಲಯ ಪ್ರತಿಷ್ಠಾನವು ಧನಸಹಾಯ ಆಯೋಗವಾಗಿರುವುದರ ಜೊತೆಗೆ ಗ್ರಂಥಾಲಯ ಅಭಿವೃದ್ಧಿ ಹಾಗೂ ಸೇವೆಗಳಲ್ಲಿಯೂ ಆಸಕ್ತಿಯನ್ನೊದಗಿಸುವ ಒಂದು ಸಂಸ್ಥೆಯಾಗಿ ಜನ್ಮ ತಾಳಿತು. ಈಗಾಗಲೇ ಸ್ಥಾಪನೆಗೊಂಡಿರುವ ಗ್ರಂಥಾಲಯಗಳ ಜೊತೆಗೆ ಹೊಸ ಹೊಸ ಗ್ರಂಥಾಲಯಗಳನ್ನು ಸ್ಥಾಪಿಸಬೇಕೆಂಬುದು ಭಾರತ ಸರಕಾರದ ಸಲಹೆ. ಇಂತಹ ಸಲಹೆ ಬಂದದ್ದು ಪ್ರತಿಷ್ಠಾನವು ಸ್ಥಾಪನೆಗೊಂಡ ತರುಣದಲ್ಲೇ. ಸಣ್ಣ ಪಟ್ಟಣಗಳು ಮತ್ತು ಹಳ್ಳಿಗಳಿಗೆ ಗ್ರಂಥಾಲಯ ಸೇವಾ ಸೌಲಭ್ಯಗಳನ್ನು ಕೊಂಡೊಯ್ಯಬೇಕೆಂಬುದು ಇದರ ತತ್‌ಕ್ಷಣದ ಉದ್ದೇಶವಾಗಿದೆ. ಸಾರ್ವಜನಿಕ ಗ್ರಂಥಾಲಯ ಅದರಲ್ಲೂ ಗ್ರಾಮೀಣ ಗ್ರಂಥಾಲಯ ವಿಸ್ತರಣೆ ಕುರಿತ ಇದರ ಧ್ಯೇಯಧೋರಣೆಗಳಿಗೆ ಮಹತ್ವ ಬಂದದ್ದು ಹೀಗೆ.

ರಚನೆ

ರಾಜಾ ರಾಮ್‌ಮೋಹನ್ ರಾಯ್ ಗ್ರಂಥಾಲಯ ಪ್ರತಿಷ್ಠಾನವು ಒಂದು ಸ್ವಾಯತ್ತ ಸಂಸ್ಥೆ. ಇದು ಲೋಕಸಭೆಯ ಯಾವುದೊಂದು ಶಾಸನ ಅಥವ ನಿಬಂಧನೆಯಿಂದ ರಚಿತವಾದುದಲ್ಲ. ಇದೊಂದು ನೋಂದಾಯಿತ ಸಂಘವಾಗಿದ್ದು ಭಾರತ ಸರಕಾರದ ಶಿಕ್ಷಣ ಹಾಗೂ ಸಂಸ್ಕೃತಿ ಸಚಿವಾಲಯದಿಂದ ಘೋಷಿಸಲ್ಪಟ್ಟಿದೆ.

ಇದರ ಆಡಳಿತ ಮಂಡಳಿಯಲ್ಲಿ ಅಧಿಕಾರಿ ಸದಸ್ಯರು, ಶಿಕ್ಷಣ ತಜ್ಞರು, ಗ್ರಂಥಪಾಲಕರು ಮತ್ತು ಸೋದರ ಸಂಸ್ಥೆಯ ಪ್ರತಿನಿಧಿಗಳು ಇದ್ದಾರೆ. ಇವರು ಪುಸ್ತಕ, ಸಾಹಿತ್ಯ ಹಾಗು ಗ್ರಂಥಾಲಯ ಅಭಿವೃದ್ಧಿಯಲ್ಲಿ ವಿಶೇಷ ಆಸಕ್ತಿಯುಳ್ಳವರಾಗಿರುತ್ತಾರೆ. ಶಿಕ್ಷಣ ಸಚಿವರು ಇಲ್ಲಿನ ಅವರಿಂದ ನಾಮಕರಣವಾದವರನ್ನೊಳಗೊಂಡು ಮಂಡಳಿಯಲ್ಲಿ 22 ಜನ ಸದಸ್ಯರಿರುತ್ತಾರೆ. ನಾಮಕರಣಗೊಂಡ ಸದಸ್ಯರಿಂದಲೇ ತುಂಬಿದ್ದರೂ ಇದಕ್ಕೆ ತನ್ನದೇ ಆದ ಸ್ವಾಯತ್ತತೆ ಇದೆ. ಸರಕಾರ ರೂಪಿಸುವ ಮಾರ್ಗದರ್ಶಕ ಚೌಕಟ್ಟಿನಲ್ಲಿ ತನ್ನದೇ ಆದ ಕಾರ್ಯಕ್ರಮಗಳನ್ನು ರೂಪಿಸಿ ಅವುಗಳನ್ನು ಅನುಷ್ಠಾನಕ್ಕೆ ತರುವ ಅಧಿಕಾರವಿದೆ.

ಪ್ರತಿಷ್ಠಾನದ ಆರ್ಥಿಕ ಹಾಗೂ ಆಡಳಿತ ವಿಷಯಗಳನ್ನು ಇದರ ಆಡಳಿತ ಮಂಡಳಿ ನೋಡಿಕೊಳ್ಳುತ್ತದೆ. ಅಧ್ಯಕ್ಷ, ಆರ್ಥಿಕ ಸಲಹೆಗಾರ, ಶಿಕ್ಷಣ ಸಚಿವಾಲಯದ ಪ್ರತಿನಿಧಿ ಹಾಗೂ ಸದಸ್ಯ ಕಾರ್ಯದರ್ಶಿ ಇವರು ಮಂಡಳಿಯ ಖಾಯಂ ಸದಸ್ಯರು.

ಸದಸ್ಯ–ಕಾರ್ಯದರ್ಶಿಯು ಪ್ರತಿಷ್ಠಾನದ ಕಾರ್ಯನಿರ್ವಾಹಕ ಮುಖ್ಯಸ್ಥರಾಗಿರುತ್ತಾರೆ. ಅಧ್ಯಕ್ಷರ ನೇತೃತ್ವದಲ್ಲಿ ಇವರು ಯೋಜನೆ ಮತ್ತು ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವ ಹೊಣೆಯನ್ನು ಹೊಂದಿರುತ್ತಾರೆ.

ಕಾರ್ಯವಿಧಾನ

ಭಾರತವು ಒಂದು ಒಕ್ಕೂಟ ರಾಷ್ಟ್ರ. ಇಲ್ಲಿ ಗ್ರಂಥಾಲಯ ಸೇವೆಯು ರಾಜ್ಯಕ್ಕೆ ಸಂಬಂಧಿಸಿದ್ದು. ರಾಷ್ಟ್ರೀಯ ಮಹತ್ವವಿರುವ ಸಂಸ್ಥೆಗಳು, ಪುರಾತನ ದಾಖಲೆಗಳು ಹಾಗೂ ಹಸ್ತಪ್ರತಿಗಳನ್ನೊ ಹೊಂದಿರುವ ಗ್ರಂಥಾಲಯಗಳು ಕೇಂದ್ರ ಸರಕಾರದ ವ್ಯಾಪ್ತಿಯಲ್ಲಿರುತ್ತವೆ. ರಾಷ್ಟ್ರೀಯ ಗ್ರಂಥಾಲಯ ಮತು ಕೇಂದ್ರ ಪರಾಮರ್ಶನ ಗ್ರಂಥಾಲಯಗಳಲ್ಲದೆ ಇತರ ಮೂರು ಸಂಸ್ಥೆಗಳು ಕೇಂದ್ರ ಸಂಸ್ಕೃತಿ ಇಲಾಖೆಯ ವ್ಯಾಪ್ತಿಯಲ್ಲಿವೆ. ಇಲಾಖಾ ಗ್ರಂಥಾಲಯಗಳು ಹಾಗೂ ಹಲವಾರು ವಿಶಿಷ್ಟ ಗ್ರಂಥಾಲಯಗಳು ಆಯಾಯಾ ಸಂಸ್ಥೆಯ ಆಡಳಿತಕ್ಕೊಳಪಟ್ಟಿವೆ. ಭಾರತದ ರಾಷ್ಟ್ರೀಯ ವೈಜ್ಞಾನಿಕ ಪ್ರಲೇಖನ ಕೇಂದ್ರ (INSDOC)ವು ಭಾರತ ಸರಕಾರದ ವಿಜ್ಞಾನ ಮತ್ತು ತಾಂತ್ರಿಕ ಇಲಾಖೆಯ ಆಧೀನದಲ್ಲಿದ್ದು ವಿಶೇಷ ಗ್ರಂಥಾಲಯಗಳು ಹಾಗೂ ಅವುಗಳ ಸದಸ್ಯರಿಗೆ ವಿಶಿಷ್ಟ ಸೇವಾ ಸೌಲಭ್ಯಗಳನ್ನು ನೀಡುತ್ತಿದೆ. ಹಾಗೆಯೇ ವಿಶ್ವವಿದ್ಯಾನಿಲಯ ಹಾಗೂ ಕಾಲೇಜು ಗ್ರಂಥಾಲಯಗಳು "ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದಿಂದ ಆರ್ಥಿಕ ನೆರವು ಪಡೆಯುತ್ತಿವೆ. ಶಿಕ್ಷಣವು ರಾಜ್ಯಗಳ ವ್ಯಾಪ್ತಿಗೆ ಬರುವುದರಿಂದ ಗ್ರಂಥಾಲಯಗಳು, ಅದರಲ್ಲೂ ಸಾರ್ವಜನಿಕ ಗ್ರಂಥಾಲಯಗಳು ಆಯಾಯಾ ರಾಜ್ಯಗಳ ವ್ಯಾಪ್ತಿಗೆ ಬರುತ್ತವೆ. ಆದಾಗ್ಯೂ ಇವುಗಳ ಅಭಿವೃದ್ಧಿಗೆ ನೆರವಾಗಲು ರಾಜಾ ರಾಮ್‌ಮೋಹನ್ ರಾಯ್ ಗ್ರಂಥಾಲಯ ಪ್ರತಿಷ್ಠಾನವನ್ನು 1972ರಲ್ಲಿ ಕೇಂದ್ರ ಸರ್ಕಾರವು ನಿರ್ಮಿಸಿತು. ರಾಜ್ಯ ಸರಕಾರಗಳ ಕಾರ್ಯಕ್ರಮಗಳಲ್ಲಿ ಪ್ರತಿಷ್ಠಾನವು ಸಕ್ರಿಯ ಪಾತ್ರ ವಹಿಸುತ್ತಿದೆ.

ಸಾರ್ವಜನಿಕ ಗ್ರಂಥಾಲಯ ನಿರ್ವಹಣೆಯು ರಾಜ್ಯಗಳ ಜವಾಬ್ದಾರಿಯಾಗಿರುವುದರಿಂದ ಪ್ರತಿಷ್ಠಾನವು ಅವುಗಳೊಡನೆ ಸಹಕರಿಸಿ ಕೆಲಸ ಮಾಡಬೇಕಾಗಿದೆ. ಈ ಸಹಕಾರವು ನಡೆಯಬೇಕಾಗಿರುವುದು ರಾಜ್ಯದ ಕೇಂದ್ರ ಗ್ರಂಥಾಲಯ ಯೋಜನಾ ಮಂಡಳಿಯ ಮೂಲಕ. ಇಂತಹದೊಂದು ಮಂಡಳಿಯು ಅಸ್ತಿತ್ವಕ್ಕೆ ಬಂದುದೇ ಪ್ರತಿಷ್ಠಾನದ ಸಲಹೆಯಿಂದ. ಈ ಮಂಡಳಿಗೆ ಶಿಕ್ಷಣ ಇಲಾಖೆಯ ಕಾರ್ಯದರ್ಶಿ ಮುಖ್ಯಸ್ಥರಾಗಿಯೂ ರಾಜ್ಯದ ಗ್ರಂಥಪಾಲಕನು ಕಾರ್ಯದರ್ಶಿಯಾಗಿಯೂ ಇರುತ್ತಾರೆ. ಪ್ರತಿಷ್ಠಾನದ ಸದಸ್ಯ–ಕಾರ್ಯದರ್ಶಿಯು ಈ ಯೋಜನಾ ಮಂಡಳಿಯ ಅಧಿಕಾರೀ–ಪ್ರಯುಕ್ತ ಸದಸ್ಯರಾಗಿರುತ್ತಾರೆ. ಮಂಡಳಿಯಲ್ಲಿ ಒಬ್ಬ ಗ್ರಂಥಕರ್ತ, ಒಬ್ಬ ಗ್ರಂಥಪಾಲಕ ಮತ್ತು ವಯಸ್ಕರ ಶಿಕ್ಷಣ ಇಲಾಖೆಯ ಪ್ರತಿನಿಧಿಯು ಇರಬೇಕೆಂಬುದು ಪ್ರತಿಷ್ಠಾನದ ಸಲಹೆ. ಈ ಮಂಡಳಿಯ ಪ್ರಮುಖ ಕಾರ್ಯಗಳೆಂದರೆ :

ಅ) ರಾಜ್ಯದಲ್ಲಿ ಗ್ರಂಥಾಲಯ ವಿಸ್ತರಣೆಯ ರೂಪರೇಷೆಗಳನ್ನು ತಯಾರಿಸುವುದು, ಆ) ರಾಜ್ಯದ ಧನಸಹಾಯವು ಸಮರ್ಪಕವಾಗಿರುವಂತೆಯೂ, ಪ್ರತಿಷ್ಠಾನದಿಂದ ಸಮ ಪ್ರಮಾಣದ ಸಹಾಯಧನವು ದೊರೆಯುವಂತೆಯೂ ನೋಡಿಕೊಳ್ಳುವುದು, (ಇ) ಸಹಾಯದ ಪರಿಶೀಲನೆ ಮತ್ತು ಶಿಫಾರಸುಗಳನ್ನು ಪ್ರಸ್ತಾಪಿಸುವುದು, (ಈ) ಸಹಾಯಧನದ ಸಮರ್ಪಕ ಉಪಯೋಗವಾಗುವಂತೆ ನೋಡಿಕೊಳ್ಳುವುದು ಮತ್ತು (ಉ) ಜನತೆಯಲ್ಲಿ ಗ್ರಂಥಾಲಯ ಪ್ರಜ್ಞೆ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

ಪ್ರತಿಷ್ಠಾನ ಮತ್ತು ರಾಜ್ಯ ಸರಕಾರಗಳ ಸಹಕಾರವು ಕೇವಲ ಯೋಜನಾ ಸಮಿತಿಗೆ ಸೀಮಿತವಾಗಿರದೆ ಇತರೇ ಮಟ್ಟದಲ್ಲಿಯೂ ಇರುತ್ತದೆ. ಈ ಜಂಟಿ ಸಹಕಾರ ವ್ಯವಸ್ಥೆಯು ಇವೆರಡರ ಆರ್ಥಿಕ ಕಾರ್ಯಕ್ರಮಗಳಲ್ಲಿಯೂ ಇರುತ್ತದೆ. ಪ್ರತಿಷ್ಠಾನವು ನೀಡುವ ಧನಸಹಾಯವು ಹೊಂದಾಣಿಕೆ ರೂಪದಲ್ಲಿರುತ್ತದೆ. ರಾಜ್ಯ ಸರಕಾರದ ಹಲವಾರು ಕಾರ್ಯಕ್ರಮಗಳಲ್ಲಿ ವಿನಿಯೋಗವಾಗುವ ಹಣದಲ್ಲಿ ರಾಜ್ಯದ ವಂತಿಗೆಯನ್ನು ತಾನು ಪಡೆದು ಅಷ್ಟೇ ಪ್ರಮಾಣದ ಮೊತ್ತವನ್ನು ಅದಕ್ಕೆ ಸೇರಿಸಿ ರಾಜ್ಯಕ್ಕೆ ನೀಡುತ್ತದೆ. ಈ ಮೊತ್ತದ ಬಹುಪಾಲು ಹಣವು ಪುಸ್ತಕಗಳ ಖರೀದಿಗೆ ಮೀಸಲಾಗಿರುತ್ತದೆ. ದೇಶದ ಗ್ರಂಥಾಲಯ ಸಂಪನ್ಮೂಲಗಳ ಸುಧಾರಣೆ ಹಾಗೂ ವಿನಿಮಯಕ್ಕೆ ಇದೊಂದು ಉತ್ತಮ ಉದಾಹರಣೆಯಾಗಿದೆ.

ಯುವಕರು ಮತ್ತು ಮಕ್ಕಳ ಕ್ಷೇಮಾಭಿವೃದ್ಧಿಗೆ ರಾಜ್ಯ ಸರಕಾರಗಳು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ. ಈ ಬಗ್ಗೆ ಕೇಂದ್ರ ಸರಕಾರದ ಅಂಗಸಂಸ್ಥೆಗಳೂ ಸಹ ಆಸಕ್ತಿ ಹೊಂದಿವೆ. ಇವುಗಳಲ್ಲದೆ, ಹಲವಾರು ಹೆಸರಾಂತ ಸ್ವಯಂಸೇವಾ ಸಂಸ್ಥೆಗಳು ಸಮಾಜ ಕಲ್ಯಾಣ, ವಯಸ್ಕರ ಶಿಕ್ಷಣ ಹಾಗು ಸಂಸ್ಕೃತಿಯ ಅಭಿವೃದ್ಧಿಯ ಬಗ್ಗೆ ಶ್ರಮಿಸುತ್ತಿವೆ. ಇವು ತಮ್ಮ ತಮ್ಮ ಕ್ಷೇತ್ರದ—ಮಕ್ಕಳ, ಯುವಕರ, ನವಅಕ್ಷರಸ್ಥರ, ಕೊಳಚೆ ನಿವಾಸಿಗಳ, ಅಂಗವಿಕಲರ, ಇತ್ಯಾದಿ—ಪರಿಧಿಯಲ್ಲಿ ಗ್ರಂಥಾಲಯ ಸೇವೆಯನ್ನು

ನೀಡುತ್ತಿವೆ. ಈ ಎಲ್ಲಾ ಸಂಸ್ಥೆಗಳು ಪ್ರತಿಷ್ಠಾನದಿಂದ ನೇರವಾಗಿ ಸಹಾಯವನ್ನು ಪಡೆಯಲು ಅರ್ಹವಾಗಿವೆ.

ದೇಶದಲ್ಲಿರುವ ಗ್ರಂಥಾಲಯ ಸಂಘಗಳೊಡನೆಯೂ ಪ್ರತಿಷ್ಠಾನವು ಸಹಕರಿಸುತ್ತಿದೆ. ರಾಷ್ಟ್ರಮಟ್ಟದ ಎರಡು ಪ್ರಮುಖ ಸಂಘಗಳಾದ ಭಾರತೀಯ ಗ್ರಂಥಾಲಯ ಸಂಘ (I L A) ಮತ್ತು ಭಾರತೀಯ ವಿಶಿಷ್ಟ ಗ್ರಂಥಾಲಯ ಹಾಗೂ ಮಾಹಿತಿ ಕೇಂದ್ರಗಳ ಸಂಘ (IASLIC)ಗಳು ಕಾಲಕಾಲಕ್ಕೆ ಪ್ರತಿಷ್ಠಾನದಿಂದ ಸಮ್ಮೇಳನ ಮತ್ತು ವಿಚಾರ ಸಂಕೀರ್ಣಗಳನ್ನು ಏರ್ಪಡಿಸಲು ಧನಸಹಾಯ ಪಡೆಯುತ್ತಿವೆ. ರಾಜ್ಯಮಟ್ಟದ ಗ್ರಂಥಾಲಯ ಸಂಘಗಳಿಗೂ ರಾಜ್ಯ ಸರಕಾರಗಳ ಶಿಫಾರಸಿನ ಮೇರೆಗೆ ಸಮ್ಮೇಳನ, ವಿಚಾರ ಸಂಕೀರ್ಣ ಹಾಗು ತೆರಪಿನ ಶಿಕ್ಷಣ ಕಾರ್ಯಕ್ರಮಗಳಿಗೆ ಇದರಿಂದ ಸಹಾಯಧನವು ದೊರೆಯುತ್ತದೆ.

ಪ್ರಸ್ತುತ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳು

ಕೇಂದ್ರ ಸರಕಾರವು ನಿರೂಪಿಸಿದ ನೀತಿ ಸಂಹಿತೆಗೆ ಅನುಗುಣವಾಗಿ ಪ್ರತಿಷ್ಠಾನವು ಪ್ರಾರಂಭದಲ್ಲಿ ಗ್ರಂಥಾಲಯಗಳಿಗೆ ವಾಚನ ಸಾಮಗ್ರಿಗಳನ್ನು ಮಾತ್ರ ಕೊಳ್ಳಲು ಸಹಾಯಧನ ನೀಡುತ್ತಿತ್ತು. ಜಿಲ್ಲಾಮಟ್ಟದ ಗ್ರಂಥಾಲಯಗಳ ಸಂಗ್ರಹಗಳನ್ನು ವೃದ್ಧಿಸಲು ಈ ಸಹಾಯಧನ ಬಹುಪಾಲು ಮೀಸಲಾಗಿತ್ತು. ಜಿಲ್ಲಾಮಟ್ಟದ ಗ್ರಂಥಾಲಯಗಳಿಂದ ಕ್ರಮೇಣ ಗ್ರಾಮೀಣ ಹಾಗೂ ಸಂಗ್ರಹ ಕೇಂದ್ರಗಳಿಗೆ ಈ ಸಹಾಯ ಪದ್ಧತಿಯನ್ನು ವಿಸ್ತರಿಸಲಾಯಿತು. ವ್ಯವಸ್ಥಿತ ಗ್ರಂಥಾಲಯಗಳ ಬೈಂಡಿಂಗ್ ಹಾಗೂ ಗ್ರಂಥರಕ್ಷಣೆಗೆ ಒಂದು ಯೋಜನೆಯನ್ನು ಸಿದ್ಧಪಡಿಸಲಾಯಿತು. ಜಿಲ್ಲಾಮಟ್ಟಕ್ಕಿಂತ ಕೆಳಗಿನ ಗ್ರಂಥಾಲಯಗಳ ಅಭಿವೃದ್ಧಿ ಕುರಿತ ಒಂದು ಸಮಗ್ರ ಯೋಜನೆಯು ಪ್ರತಿಷ್ಠಾನದ ಬಳಿಯಲ್ಲಿದೆ. ಈ ಎಲ್ಲಾ ಗ್ರಂಥಾಲಯಗಳ ಸಮೂಹವನ್ನು ಗ್ರಾಮೀಣ ಗ್ರಂಥಾಲಯಗಳೆಂದು ಕರೆಯಲಾಯಿತು. ಗ್ರಾಮೀಣ ಗ್ರಂಥಾಲಯಗಳಿಗೆ ನೀಡುವ ಸಹಾಯ ಸೌಲಭ್ಯಗಳು ಶೇಖರಣ ವ್ಯವಸ್ಥೆಯ ಸಮಸ್ಯೆಗಳನ್ನು ತಂದೊಡ್ಡುತ್ತವೆ. ಆದ್ದರಿಂದ ಪ್ರತಿಷ್ಠಾನವು ಗ್ರಾಮೀಣ ಗ್ರಂಥಾಲಯಗಳ ಸಲುವಾಗಿ ಶೇಖರಣ ಸೌಲಭ್ಯಗಳನ್ನು ಉತ್ತಮಪಡಿಸಲು ಮತ್ತೊಂದು ಯೋಜನೆಯನ್ನು ಸಿದ್ಧಪಡಿಸಬೇಕಾಯಿತು. ಕೇವಲ ಗ್ರಂಥಸಂಗ್ರಹ ಹಾಗೂ ಅವುಗಳ ರಕ್ಷಣೆಗೆ ಸಹಾಯ ನೀಡಿದರೆ ಮಾತ್ರ ಸಾಲದೆಂಬುದು ಇದಕ್ಕೆ ಅರಿವಾಗಿದೆ. ಅವುಗಳನ್ನು ವ್ಯವಸ್ಥಿತವಾಗಿಟ್ಟುಕೊಂಡು ಸರಿಯಾದ ಸೇವೆಯನ್ನು ಒದಗಿಸಲು ಸಿಬ್ಬಂದಿಗೆ ತಕ್ಕ ಶಿಕ್ಷಣ ಮತ್ತು ತರಬೇತಿಯ ಅವಶ್ಯಕತೆ ಇದೆ. ಆದ್ದರಿಂದ ವಿಚಾರ ಸಂಕೀರ್ಣ, ತರಬೇತಿ ಶಿಬಿರ, ಪುಸ್ತಕ ಪ್ರದರ್ಶನ ಮೊದಲಾದುವುಗಳ ಮೂಲಕ ಸಿಬ್ಬಂದಿಗೆ ತರಬೇತಿ ನೀಡಲು ಪ್ರತಿಷ್ಠಾನವು ಆಲೋಚಿಸತೊಡಗಿತು. ಹೀಗೆ ಯೋಚಿಸಲಾದ ಐದು ಕಾರ್ಯಕ್ರಮಗಳು ಈ ಕೆಳಗಿನಂತೆ ಇವೆ :

(ಅ) ತೃಪ್ತಿಕರವಾದ ಪುಸ್ತಕ ಸಂಗ್ರಹಣೆಗೆ ಸಹಾಯ, (ಆ) ಸಂಚಾರೀ ಗ್ರಂಥಾಲಯ, ಗ್ರಾಮೀಣ ಪುಸ್ತಕ ಕೇಂದ್ರ ಮತ್ತು ಗ್ರಂಥ ವಿತರಣಾ ಘಟಕಗಳನ್ನು ಅಭಿವೃದ್ಧಿಪಡಿಸಲು ನೆರವು, (ಇ) ದುರ್ಲಭ ಗ್ರಂಥಗಳು, ನಿಯತಕಾಲಿಕೆಗಳು ಮತ್ತು ಹಸ್ತಪ್ರತಿಗಳ ಸಂರಕ್ಷಣೆಗೆ ಸಹಾಯ, (ಈ) ಗ್ರಂಥ ಜೋಡಣೆಗೆ ಬೇಕಾದ ಸಲಕರಣೆಗಳಿಗೆ ನೆರವು, (ಉ) ಸಮ್ಮೇಳನ, ಸಂಕಿರಣ, ತೆರಪಿನ ಶಿಕ್ಷಣ, ಕಾರ್ಯಾಗಾರ ಹಾಗೂ ಗ್ರಂಥ ಪ್ರದರ್ಶನಗಳನ್ನು ಏರ್ಪಡಿಸಲು ನೆರವು.

ಈ ಐದು ಯೋಜನೆಗಳಲ್ಲಿ ಪ್ರತಿಷ್ಠಾನವು ನೀಡುವ ಸಹಾಯಧನದ ಸಿಂಹಪಾಲು ಮೊದಲನೆಯದಕ್ಕೇ ಹೋಗುತ್ತದೆ. ನೆರವಿನ ಶೇಖಡ 90ರಷ್ಟು ಭಾಗ ಪುಸ್ತಕ ಸಂಗ್ರಹಣೆಗೆ ವ್ಯಯವಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಪುಸ್ತಕಗಳ ಬೆಲೆಗಳು ಹೆಚ್ಚುತ್ತಿರುವುದರಿಂದಲೂ ಮತ್ತು ಗ್ರಂಥಾಲಯಗಳಲ್ಲಿ ಹೆಚ್ಚು ಹೆಚ್ಚು ಪುಸ್ತಕಗಳಿಗೆ ಬೇಡಿಕೆಗಳು ಬರುತ್ತಿರುವುದರಿಂದಲೂ ನೆರವಿನ ಮೊತ್ತವನ್ನು ಹೆಚ್ಚಿಸುವುದು ಅನಿವಾರ್ಯವಾಯಿತು.

ಸಾರ್ವಜನಿಕ ಗ್ರಂಥಾಲಯಗಳಿಗೆ ಸಹಾಯಧನವನ್ನೊದಗಿಸುವ ತನ್ನ ಮುಖ್ಯ ಕಾರ್ಯಕ್ರಮದ ಜೊತೆಗೆ ಗ್ರಂಥಾಲಯ ಸೇವಾಸೌಲಭ್ಯಗಳನ್ನು ಸುಧಾರಿಸುವ ಅನೇಕ ಕಾರ್ಯಕ್ರಮಗಳನ್ನು ಪ್ರತಿಷ್ಠಾನವು ಪ್ರಾರಂಭಿಸಿದೆ. ಈಗಾಗಲೇ ಸಾರ್ವಜನಿಕ ಗ್ರಂಥಾಲಯ ಶಾಸನಗಳನ್ನು ಅಳವಡಿಸಿಕೊಳ್ಳದಿರುವ ರಾಜ್ಯಗಳಿಗೆ ಆ ಬಗ್ಗೆ ಅರಿವು ಮೂಡುವಂತೆ ಮಾಡುತ್ತಿದೆ. ಸಾರ್ವಜನಿಕ ಗ್ರಂಥಾಲಯಗಳ ಬಗ್ಗೆ ತಿಳುವಳಿಕೆ ಮೂಡಿಸಲು ರಾಷ್ಟ್ರದ ಬೇರೆ ಬೇರೆ ಭಾಗಗಳಲ್ಲಿ ವಿಚಾರ ಸಂಕಿರಣಗಳು ಮತ್ತು ಉಪನ್ಯಾಸಗಳನ್ನು ಏರ್ಪಡಿಸುತ್ತಿದೆ. ಒಳ್ಳೆಯ ಸಾಹಿತ್ಯ ಸೃಷ್ಟಿ ಹಾಗೂ ಪ್ರಕಟಣೆಗೆ ಸಹಾಯ ನೀಡುವುದರ ಜೊತೆಗೆ ಅವುಗಳ ಸಗಟು ಖರೀದಿಗೆ ಆಶ್ವಾಸನೆ ನೀಡುತ್ತಿದೆ. ಸಾರ್ವಜನಿಕ ಗ್ರಂಥಾಲಯಗಳ ಡೈರೆಕ್ಟರಿಯ ಸಂಕಲನ ಮತ್ತು ಪ್ರಕಟಣೆಯೂ ಇದರ ಯೋಜನೆಯಲ್ಲಿದೆ. ಸಾರ್ವಜನಿಕ ಗ್ರಂಥಾಲಯ ಸೇವೆಯಲ್ಲಿ ಮುಂದುವರಿದ ರಾಜ್ಯದಲ್ಲಿ ಅದರ ಬಗ್ಗೆ ಮಾರ್ಗದರ್ಶಕ ಸಮೀಕ್ಷೆ ನಡೆಸಲು ಯೋಜನೆಯನ್ನು ಮಂಜೂರು ಮಾಡಿದೆ. ಗ್ರಂಥಾಲಯ ವಿಜ್ಞಾನದ ರಾಷ್ಟ್ರೀಯ ಮಾಹಿತಿ ಕೇಂದ್ರವೊಂದನ್ನು ಸ್ಥಾಪಿಸಿ ಅದನ್ನು ಹಂತ ಹಂತವಾಗಿ ಅಭಿವೃದ್ಧಿಪಡಿಸುವ ಯೋಜನೆಯೂ ಇದರ ಕಾರ್ಯಕ್ರಮಗಳ ಪಟ್ಟಿಯಲ್ಲಿದೆ. ಇತ್ತೀಚೆಗೆ ತ್ರೈಮಾಸಿಕ ವಾರ್ತಾಪತ್ರಿಕೆಯೊಂದನ್ನು ಇದು ಪ್ರಾರಂಭಿಸಿದೆ. ಇವೆಲ್ಲಕ್ಕಿಂತ ಮಿಗಿಲಾಗಿ ಪ್ರತಿಷ್ಠಾನವು ರಾಷ್ಟ್ರೀಯ ಗ್ರಂಥಾಲಯ ನೀತಿಸಂಹಿತೆಯನ್ನು ರಚಿಸಲು ಕಾರ್ಯನಿರತ ಸಮಿತಿಯೊಂದನ್ನು ರಚಿಸಿದೆ.

ಭಾವೀಯೋಜನೆಗಳು

ಮುಂಬರುವ ವರ್ಷಗಳಲ್ಲಿ, ಹೆಚ್ಚು ಸಂಪನ್ಮೂಲಗಳು ದೊರೆತಲ್ಲಿ, ತನ್ನ ನಿಗದಿತ ಕಾರ್ಯಕ್ರಮಗಳ ಚೌಕಟ್ಟಿಗೆ ಹೊಸ ಆಯಾಮವನ್ನು ಕೊಡುವ ಉದ್ದೇಶಗಳು ಇದಕ್ಕೆ ಇವೆ. ಭಾರತ ಸರಕಾರಕ್ಕೆ ಪ್ರತಿಷ್ಠಾನವು 'ಗ್ರಂಥಾಲಯ ಸಲಹೆಗಾರ'ನ ಪಾತ್ರ ವಹಿಸು

ವಲ್ಲಿ ತನ್ನ ಸಂಶೋಧನೆ, ಅಂಕಿಅಂಶಗಳ ಸಂಗ್ರಹಣೆ ಮತ್ತು ನಿರ್ವಹಣಾ ಘಟಕವನ್ನು ಬಲಪಡಿಸಿಕೊಳ್ಳಬೇಕಾಗುತ್ತದೆ. ರಾಷ್ಟ್ರದಲ್ಲಿನ ಗ್ರಂಥಾಲಯಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ, ವಿಶ್ಲೇಷಿಸಿ, ಪ್ರಸಾರ ಮಾಡುವುದರಿಂದ ತನ್ನ ಗ್ರಂಥಾಲಯ ಸಲಹೆಗಾರನ ಪಾತ್ರವನ್ನು ಯಶಸ್ವಿಯಾಗಿ ನಿರ್ವಹಿಸಬಹುದು. ದೇಶವಿದೇಶಗಳ ಗ್ರಂಥಾಲಯ ಅಭಿವೃದ್ಧಿ ಮಾಹಿತಿ ಕೇಂದ್ರವೊಂದನ್ನು ಸ್ಥಾಪಿಸುವ ಮನಸ್ಸು ಇದಕ್ಕಿದೆ. ಗ್ರಂಥಾಲಯ ಅಭಿವೃದ್ಧಿಯ ಬಗ್ಗೆ ಸಂಶೋಧನೆಗೆ ಪ್ರೋತ್ಸಾಹ ಹಾಗೂ ನೆರವು ನೀಡುವುದು ಇದರ ಭಾವೀಯೋಜನೆಗಳಲ್ಲೊಂದಾಗಿದೆ. ಅಂತರರಾಷ್ಟ್ರೀಯ ಗ್ರಂಥಾಲಯಗಳ ಮಹಾ ಸಂಘ (IFLA), ಯುನೆಸ್ಕೊ ಹಾಗೂ ಇತರ ಅಂತರರಾಷ್ಟ್ರೀಯ ಸಂಘಸಂಸ್ಥೆಗಳ ನೆರವು ಮತ್ತು ಸಹಕಾರದಿಂದ ತನ್ನ ಧ್ಯೇಯೋದ್ದೇಶಗಳನ್ನು ಅನುಷ್ಠಾನಕ್ಕೆ ತರುವ ಆಶಯವನ್ನು ಪ್ರತಿಷ್ಠಾನವು ಹೊಂದಿದೆ.

ವಿ. ಸೂ.

ಇಂಗ್ಲೀಷಿನಲ್ಲಿರುವ ತಮ್ಮ ಲೇಖನವನ್ನು ಕನ್ನಡಕ್ಕೆ ಭಾಷಾಂತರಿಸಿ ಪ್ರಕಟಿಸಲು ಅನುಮತಿಯಿತ್ತ ರಾಜಾ ರಾಮ್‌ಮೋಹನ್‌ರಾಯ್ ಗ್ರಂಥಾಲಯ ಪ್ರತಿಷ್ಠಾನದ ಸದಸ್ಯ-ಕಾರ್ಯದರ್ಶಿ ಡಾ. ಬಿ. ಪಿ. ಬರುವಾ ಅವರಿಗೆ ಕೃತಜ್ಞತೆಗಳು. ಮೂಲ ಲೇಖನವು ಇಂಟರ್‌ನ್ಯಾಷನಲ್ ಲೈಬ್ರೆರಿ ರಿವ್ಯೂ. 15(2) 1983, 185-190ರಲ್ಲಿ ಪ್ರಕಟವಾಗಿದೆ.

ರಾಜಾ ರಾಮ್‌ಮೋಹನ್ ರಾಯರ ದ್ವಿಶತಮಾನೋತ್ಸವ ಸಂದರ್ಭದಲ್ಲಿ (1972) ಭಾರತ ಸರ್ಕಾರ ಕಲ್ಕತ್ತ ನಗರದಲ್ಲಿ ಪ್ರಾರಂಭ ಮಾಡಿದ ಒಂದು ಸಂಸ್ಥೆ (ಈ ಪ್ರತಿಷ್ಠಾನ). ಅದೇ ವರ್ಷ ಭಾರತ ತನ್ನ ಸ್ವಾತಂತ್ರ್ಯೋತ್ಸವದ ಬೆಳ್ಳಿಹಬ್ಬವನ್ನು ಆಚರಿಸಿತಲ್ಲದೆ ಪ್ರಪಂಚಾದ್ಯಂತ ಅಂತರರಾಷ್ಟ್ರೀಯ ಗ್ರಂಥೋತ್ಸವವೂ ನಡೆಯಿತು.

ದೇಶದ ಪ್ರತಿಹಳ್ಳಿಯ ಪ್ರತಿಯೊಬ್ಬನಿಗೂ ಓದುವ ಸೌಲಭ್ಯ ದೊರಕಿ ಜ್ಞಾನ ಪ್ರಸಾರವುಂಟಾಗಿ ಅಜ್ಞಾನದಿಂದ ಜ್ಞಾನದತ್ತ ದೇಶವು ಪ್ರಗತಿಪಥದಲ್ಲಿ ಮುನ್ನಡೆಯುವಂತಾಗಲಿಕ್ಕೆ ಅನಿರತ ಶ್ರಮಿಸುವ ಈ ಗ್ರಂಥಾಲಯ ಪ್ರತಿಷ್ಠಾನದ ಸ್ಥಾಪನೆ ನಿಜವಾಗಿಯೂ ಶ್ಲಾಘನೀಯವಾಗಿದೆಯಲ್ಲದೆ ನಾಡಿನ ಅಜ್ಞಾನವನ್ನು ತೊಲಗಿಸಲು ಸತತ ಪ್ರಯತ್ನ ನಡೆಸಿದ ದೇಶಭಕ್ತ ರಾಜಾ ರಾಮ್‌ಮೋಹನ್‌ರಾಯರಿಗೆ ಉಚಿತವಾದ ಸ್ಮಾರಕವೂ ಆಗಿದೆ.

(ಕನ್ನಡ ವಿಶ್ವಕೋಶ, ಸಂಪುಟ ಆರು, ಪು. ೬೫೭-೫೮)

ಡಿ. ಎಲ್. ಪಾಟೀಲ

ವೈಚಾರಿಕತೆಯ ನಾಲ್ಕನೆಯ ಮುಖ- ಪ್ರತ್ಯಕ್ಷವಾದ ಅಥವಾ ಇಂದ್ರಿಯಾನುಭವವಾದ

ವೈಚಾರಿಕತೆಯ ಪ್ರಗತಿಗೆ ಆಧುನಿಕ ಪಾಶ್ಚಾತ್ಯ ದಾರ್ಶನಿಕರಾದ ಲಾಕ್, ಬಾರ್ಕ್‌ಲಿ ಮತ್ತು ಹ್ಯೂಮ್‌ರು ಅಮೋಘವಾದ ಕೊಡುಗೆಗಳನ್ನು ನೀಡಿದ್ದಾರೆ. ಇಂದ್ರಿಯಾನುಭವವನ್ನು ಅಥವಾ ಪ್ರತ್ಯಕ್ಷವನ್ನು ವೈಜ್ಞಾನಿಕ ದೃಷ್ಟಿಕೋನದಿಂದ ವಿಶ್ಲೇಷಿಸಿ ಜ್ಞಾನದಲ್ಲಿ ಅದರ ಸ್ಥಾನವೇನೆಂಬುದನ್ನು ಹೆಚ್ಚು ಕಡಿಮೆ ಸ್ಪಷ್ಟಪಡಿಸಿದ್ದಾರೆ. ಡೇಕಾರ್ಟ್, ಸ್ಪಿನೋಜಾ ಮತ್ತು ಲೈಬ್ನಿಜ್‌ರು ತೀವ್ರವಾಗಿ ಬೋಧಿಸುತ್ತಿದ್ದ ಶುದ್ಧ ವೈಚಾರಿಕತೆಯನ್ನು ತೀವ್ರವಾಗಿ ವಿರೋಧಿಸಿ, ಇಂದ್ರಿಯಾನುಭವ ಅಥವಾ ಪ್ರತ್ಯಕ್ಷವು ಎಲ್ಲಾ ವ್ಯಾವಹಾರಿಕ (empirical) ಜ್ಞಾನಕ್ಕೆ ಹೇಗೆ ತಳಹದಿಯಾಗಿದೆ ಎನ್ನುವುದನ್ನು ತಾರ್ಕಿಕವಾದಗಳ ಮುಖಾಂತರ ಲಾಕ್, ಬಾರ್ಕ್‌ಲಿ ಮತ್ತು ಹ್ಯೂಮ್‌ರು ತೋರಿಸಿಕೊಟ್ಟಿದ್ದಾರೆ. ಈ ಮೂವರು ದಾರ್ಶನಿಕರು ಪಾಶ್ಚಾತ್ಯ ತತ್ವಶಾಸ್ತ್ರ ಸಂಪ್ರದಾಯದಲ್ಲಿ ಇಂದ್ರಿಯಾನುಭವವಾದಿಗಳೆಂದು (Empiricists) ಪ್ರಸಿದ್ಧಿ ಪಡೆದಿದ್ದಾರೆ. ಇಂದ್ರಿಯಾನುಭವವಾದವನ್ನು ವಿಶದವಾಗಿ ವಿವರಿಸುವುದು ಈ ಪ್ರಬಂಧದ ಗುರಿಯಲ್ಲ. ಆಧುನಿಕ ವೈಚಾರಿಕತೆಯ ಒಂದು ಮಹತ್ವದ ಮುಖವಾದ ಇಂದ್ರಿಯಾನುಭವವಾದ ಅಥವಾ ಪ್ರತ್ಯಕ್ಷವಾದದ ತಾತ್ವಿಕ ಆಯಾಮಗಳನ್ನು ಪರಿಶೀಲಿಸುವುದಷ್ಟೇ ಇದರ ಉದ್ದೇಶ. ಪ್ರತ್ಯಕ್ಷವಾದದ ತಾತ್ವಿಕ ಆಯಾಮಗಳ ಮತ್ತು ಅದರ ವೈಚಾರಿಕ ಅಂತರಾರ್ಥ (implications)ಗಳ ಒಂದು ವಿವರಣೆ ನೀಡುವುದಕ್ಕಿಂತ ಮೊದಲು ಪ್ರತ್ಯಕ್ಷವಾದದ ಸಾಮಾನ್ಯ ಪರಿಚಯ ಆವಶ್ಯವಾಗುತ್ತದೆ.

ಜ್ಞಾನಮೀಮಾಂಸೆಯು ಚರ್ಚಿಸುವ ಅನೇಕ ಸಮಸ್ಯೆಗಳಲ್ಲಿ ಜ್ಞಾನ ಸಂಪಾದನೆ ಹೇಗಾಗುತ್ತದೆ ಎಂಬುದು ಒಂದು. ದಾರ್ಶನಿಕರು ಈ ಸಮಸ್ಯೆಯನ್ನು ಆಳವಾಗಿ ಅಧ್ಯಯನ ಮಾಡಿ ಒಂದು ಸಮರ್ಪಕವಾದ, ಜ್ಞಾನ ಸಂಪಾದನೆಗೆ ಆವಶ್ಯವಾಗಿ ಬೇಕಾಗುವ, ಒಂದು ಸಮಗ್ರ ಸಾಧನಗಳ ಪಟ್ಟಿಯನ್ನು ಒದಗಿಸಿದ್ದಾರೆ. ಆದರೆ ಈ ಸಮಗ್ರ ಪಟ್ಟಿಯ ಸಂಬಂಧದಲ್ಲಿ ತೀವ್ರವಾದ ಭಿನ್ನಾಭಿಪ್ರಾಯವಿರುವುದು ನಮಗೆ ಕೂಡಲೆ ತಿಳಿಯುತ್ತದೆ. ಪಾಶ್ಚಾತ್ಯ ತತ್ವಶಾಸ್ತ್ರದಲ್ಲಿ ತತ್ವಜ್ಞಾನಿಗಳು ಜ್ಞಾನಮೀಮಾಂಸೆಯ

ಸಮಸ್ಯೆಗಳ ಬಗ್ಗೆ ಆಳವಾಗಿ ಆಲೋಚಿಸಿದ್ದರೂ ಜ್ಞಾನ ಸಂಪಾದನೆಯ ಸಾಧನಗಳ ಸ್ಪಷ್ಟವಾದ ಚಿತ್ರವನ್ನು ಕೊಡುವುದಿಲ್ಲ. ಜ್ಞಾನಸ್ವರೂಪಕ್ಕೆ ಸಂಬಂಧಿಸಿದ ಚರ್ಚೆಗೂ ಈ ಮಾತು ಅನ್ವಯಿಸುತ್ತದೆ. ಜ್ಞಾನದ ಸಾಧನಗಳ ಮತ್ತು ಅದರ ಸ್ವರೂಪದ ಬಗ್ಗೆಯ ಗೊಂದಲ ಇಂದಿಗೂ ಪಾಶ್ಚಾತ್ಯ ತತ್ವಶಾಸ್ತ್ರದಲ್ಲಿ ಸಂಪೂರ್ಣವಾಗಿ ಪರಿಹಾರವಾಗಿಲ್ಲ. ಆದರೆ ಪುರಾತನ ಕಾಲದಿಂದ ಅವ್ಯಾಹತವಾಗಿ ನಡೆದುಕೊಂಡು ಬಂದ ಜ್ಞಾನದ ಬಗ್ಗೆ ಮೀಮಾಂಸೆ, ಅನೇಕ ಸಂದರ್ಭಗಳಲ್ಲಿ ಕ್ರಾಂತಿಕಾರಿ ವೈಚಾರಿಕತೆಗೆ ನಾಂದಿಯಾಗಿದೆ.

ಭಾರತೀಯ ತತ್ವಶಾಸ್ತ್ರದಲ್ಲಿ ಜ್ಞಾನಮೀಮಾಂಸೆಯೋ ತತ್ವಜ್ಞಾನಿಗಳ ಮುಖ್ಯ ಕಾಳಜಿಯಾಗಿರುವುದು ಅಪರೂಪ. ಆದರೂ ಜ್ಞಾನದ ಸಾಧನಗಳ ಬಗ್ಗೆ ಭಾರತೀಯ ತತ್ವಶಾಸ್ತ್ರದ ಎಲ್ಲಾ ಶಾಖೆ (schools) ಗಳಲ್ಲಿ ಸ್ಪಷ್ಟವಾದ ನಿಲುವು ನಮಗೆ ದೊರಕುತ್ತದೆ. ಜ್ಞಾನದ ಸಾಧನಗಳು ಎಷ್ಟು ? ಎನ್ನುವ ಪ್ರಶ್ನೆಗೆ ತೀವ್ರ ಭಿನ್ನಾಭಿಪ್ರಾಯವಿರುವುದು ಗೊತ್ತಾಗುತ್ತದೆ. ಉದಾಹರಣೆಗೆ, ಲೋಕಾಯತ ಅಥವಾ ಚಾರ್ವಾಕ ದರ್ಶನವು ಜ್ಞಾನ ಸಂಪಾದನೆಗೆ ಇರುವುದು ಒಂದೇ ಸಾಧನ, ಅದೆಂದರೆ ಪ್ರತ್ಯಕ್ಷ ಎಂಬ ದೃಢ ನಿಲುವನ್ನು ವ್ಯಕ್ತಪಡಿಸಿದರೆ, ಅದ್ವೈತದರ್ಶನವು ಜ್ಞಾನದ ಸಾಧನಗಳು ಆರು ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತದೆ. ಜ್ಞಾನ ಸಂಪಾದನೆಯ ನಿಜವಾದ ಸಾಧನಗಳು ಎಷ್ಟು ಮತ್ತು ಅವು ಯಾವುವು ? ಎನ್ನುವ ಪ್ರಶ್ನೆಗಳು ಜ್ಞಾನಮೀಮಾಂಸೆಗೆ ಸಂಬಂಧಿಸಿದವುಗಳಾದರೂ, ಈ ಪ್ರಶ್ನೆಗಳ ಬಗೆಗೆ ಭಿನ್ನ ಭಿನ್ನ ಅಭಿಪ್ರಾಯಗಳು ಮತ್ತು ನಿಲುವುಗಳು ವೈಚಾರಿಕತೆಯ ಮೇಲೆ ಪರಿಣಾಮಕಾರಿ ಪ್ರಭಾವವನ್ನು ಬೀರುತ್ತವೆ. ಜ್ಞಾನಮೀಮಾಂಸೆಗೆ ನೇರವಾಗಿ ಸಂಬಂಧಿಸಿದ ಈ ಪ್ರಶ್ನೆಗಳನ್ನು ಕುರಿತು ಚರ್ಚಿಸುವುದು ಈ ಪ್ರಬಂಧದ ಉದ್ದೇಶವಲ್ಲ. ಆದರೆ ಜ್ಞಾನಮೀಮಾಂಸೆಗೂ ಮತ್ತು ವೈಚಾರಿಕತೆಗೂ ನಿಕಟ ಸಂಬಂಧವುಂಟು ಎಂಬುದನ್ನು ಅರಿತುಕೊಳ್ಳುವುದು ಆರೋಗ್ಯಕರವಾದ ವೈಚಾರಿಕತೆಯ ಬೆಳವಣಿಗೆಯ ದೃಷ್ಟಿಯಿಂದ ಒಳ್ಳೆಯದು.

ಆದ್ದರಿಂದ ವೈಚಾರಿಕತೆಗೆ ನೇರವಾಗಿ ಸಂಬಂಧಿಸಿದಂತೆ ಎರಡು ಪ್ರಶ್ನೆಗಳು ಅತ್ಯಂತ ಮುಖ್ಯವಾದವುಗಳು. ೧) ಜ್ಞಾನದ ಸ್ವರೂಪ ಯಾವುದು ? ೨) ಜ್ಞಾನ ಸಂಪಾದನೆಯ ಸಾಧನಗಳು ಯಾವುವು ಮತ್ತು ಎಷ್ಟು ? ಈ ನಾಲ್ಕನೆಯ ಪ್ರಬಂಧದಲ್ಲಿ ಇಂದ್ರಿಯಾನುಭವ ಅಥವಾ ಪ್ರತ್ಯಕ್ಷ (perception) ವಾದದ ದೃಷ್ಟಿಕೋನದಿಂದ ಈ ಎರಡೂ ಪ್ರಶ್ನೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ, ಪ್ರತ್ಯಕ್ಷವಾದವು ಹೇಗೆ ವೈಚಾರಿಕತೆಯ ಒಂದು ಮುಖ್ಯ ಮುಖವಾಗಿದೆಯೆಂಬುದನ್ನು ಇಲ್ಲಿ ಚರ್ಚಿಸಲಾಗಿದೆ.

ಪ್ರತ್ಯಕ್ಷವಾದದ ಮೂಲಭೂತ ಸಿದ್ಧಾಂತಗಳು ಮತ್ತು ಈ ವಾದದ ತಾತ್ವಿಕ ಮತ್ತು ವೈಚಾರಿಕ ಪರಿಣಾಮಗಳನ್ನು ಪ್ರದರ್ಶಿಸಿದ ಕೀರ್ತಿಗೆ ಪಾತ್ರರಾಗುವವರು ಭಾರತೀಯ ತತ್ವಶಾಸ್ತ್ರದ ಲೋಕಾಯುತ ದಾರ್ಶನಿಕರು ಮತ್ತು ಪಾಶ್ಚಾತ್ಯ ದರ್ಶನದ ಇಂದ್ರಿಯಾನುಭವ (empiricists) ವಾದಿಗಳಾದ ಲಾಕ್, ಬಾರ್ಕ್‌ಲಿ ಮತ್ತು ಹ್ಯೂಮ್‌ರು. ಪ್ರತ್ಯಕ್ಷವಾದದ ಅಥವಾ ಇಂದ್ರಿಯಾನುಭವವಾದದ ಮೂಲಭೂತ

ಸಿದ್ಧಾಂತಗಳಾವುವು ? ಆಧುನಿಕ ಪಾಶ್ಚಾತ್ಯ ದರ್ಶನದಲ್ಲಿ ಇಂದ್ರಿಯಾನುಭವವಾದವನ್ನು ತಾತ್ವಿಕವಾಗಿ ಮೊದಲು ಸ್ಥಾಪಿಸಿದ ಜಾನ್ ಲಾಕ್‌ನು ಇಂದ್ರಿಯಾನುಭವವಾದದ ಸಿದ್ಧಾಂತವನ್ನು ಹೀಗೆ ಸಂಗ್ರಹಿಸಿ ಹೇಳಿದ್ದಾನೆ :

"Let us then suppose the mind to be, as we say, white paper, void of all characters, without any ideas, how comes it to be furnished ? Whence comes it by that vast store, which the busy and boundless fancy of man has painted on it with an almost endless variety ? Whence has it all the materials of reason and knowledge ? To this I answer in one word, from experience. In that all our knowledge is founded, and from that it ultimately derives itself."

ಲಾಕನು ತನ್ನ 'Essay Concering Human Understanding Book II, Ch. I, Sec. 2. ಗ್ರಂಥದಲ್ಲಿ ಬರೆದ .ಮೇಲಿನ ವಾಕ್ಯಗಳು ಇಂದ್ರಿಯಾನುಭವವಾದದ ಕ್ರಾಂತಿಕಾರಿ ಬೆಳವಣಿಗೆಗೆ ಮಾರ್ಗವನ್ನು ಸೂಚಿಸಿದವು ; ಮತ್ತು ವಿಚಾರವಾದಿ (rationalists)ಗಳು ಪ್ರತಿಪಾದಿಸಿದ ಮುಖ್ಯ ಸಿದ್ಧಾಂತಗಳನ್ನೂ ಮೇಲಿನ ವಾಕ್ಯಗಳು ಸಂಪೂರ್ಣವಾಗಿ ತಳ್ಳಿ ಹಾಕುತ್ತವೆ. ಇಂದ್ರಿಯಾನುಭವವಾದಿಗಳ ಅಭಿಪ್ರಾಯದಲ್ಲಿ ಅನುಭವವೆಂದರೆ ಪಂಚೇಂದ್ರಿಯಗಳ ಮುಖಾಂತರ ಆಗುವ ಅನುಭವ. ಭೌತಪದಾರ್ಥಗಳಿಗೂ ಮತ್ತು ಪಂಚೇಂದ್ರಿಯಗಳಿಗೂ ಉಂಟಾಗುವ ಇಂದ್ರಿಯ ಸನ್ನಿಕರ್ಷ. ಆದರೆ ಕೇವಲ ಇಂದ್ರಿಯ ಸನ್ನಿಕರ್ಷವೇ ಜ್ಞಾನವಲ್ಲ. ಲಾಕನ ಪ್ರಕಾರ ಜ್ಞಾನವು ಆಲೋಚನೆಗಳ ರೂಪದಲ್ಲಿರುತ್ತದೆ. ಮತ್ತು ಆಲೋಚನೆಗಳು ನಮ್ಮ ಮನಸ್ಸಿನಲ್ಲಿ ಇರುತ್ತವೆ. ಭೌತಪದಾರ್ಥಗಳಿಗೂ ಮತ್ತು ಇಂದ್ರಿಯಗಳಿಗೂ ಉಂಟಾಗುವ ಸನ್ನಿಕರ್ಷ (contact) ದಿಂದ ನಮ್ಮ ಮನಸ್ಸಿನಲ್ಲಿ ಆಲೋಚನೆಗಳು ಹುಟ್ಟುತ್ತವೆ ಅಥವಾ ಮನಸ್ಸಿಗೆ ಆಲೋಚನೆಗಳು ಬಂದು ಸೇರಿಕೊಳ್ಳುತ್ತವೆ. ಇಂತಹ ಆಲೋಚನೆಗಳನ್ನು ಲಾಕ್ ಸರಳ ಆಲೋಚನೆಗಳೆಂದು ಕರೆದಿದ್ದಾನೆ. ನಮ್ಮ ಮನಸ್ಸು ಅಂತಹ ಸರಳ ಆಲೋಚನೆಗಳನ್ನು ತನ್ನ ಶಕ್ತಿಯಿಂದ ಸಂಯೋಜಿಸಿ ಅಥವಾ ಒಂದಕ್ಕೊಂದು ಸೇರಿಸಿ ಸಂಕೀರ್ಣವಾದ ಆಲೋಚನೆಗಳನ್ನು ಸೃಷ್ಟಿಸುತ್ತದೆ. ಆದರೆ ಇಲ್ಲಿ ಗಮನಿಸಬೇಕಾದ ಅಂಶವೆಂದರೆ ನಮ್ಮ ಮನಸ್ಸಿಗೆ ಸಂಕೀರ್ಣವಾದ ಆಲೋಚನೆಗಳನ್ನು ತಯಾರು ಮಾಡುವ ಶಕ್ತಿ ಇದೆಯಾದರೂ ಸರಳವಾದ ಆಲೋಚನೆಗಳನ್ನು ಸೃಷ್ಟಿಸುವ ಅಥವಾ ತಯಾರು ಮಾಡುವ ಶಕ್ತಿಯಿಲ್ಲ. ಮನಸ್ಸು ಒಂದು ಕಾರಖಾನೆ ಇದ್ದಂತೆ. ಕಾರಖಾನೆಗೆ ನೂತನ ಪದಾರ್ಥಗಳನ್ನು ತಯಾರು ಮಾಡುವುದಕ್ಕೆ ಕಚ್ಚಾ ಸಾಮಗ್ರಿಗಳು ಹೇಗೆ ಅವಶ್ಯಕವೋ ಹಾಗೆಯೇ ಮನಸ್ಸು ಸಂಕೀರ್ಣವಾದ ವಿಚಾರಗಳನ್ನು ಉತ್ಪಾದಿಸ

ಬೇಕಾದರೆ ಅವರ ಕಚ್ಚಾ ಸಾಮಗ್ರಿಗಳಾದ ಸರಳ ಆಲೋಚನೆಗಳು ಬೇಕೇ ಬೇಕಾಗುತ್ತವೆ. ಮನಸ್ಸಿನ ಈ ಸ್ವರೂಪದ ಆಧಾರದ ಮೇಲೆಯೇ ಲಾಕ್‌ನು ಅದು ಯಾವ ಆಲೋಚನೆಗಳೂ ಇಲ್ಲದಿದ್ದಾಗ ಒಂದು ಬಿಳೀ ಕಾಗದವಿದ್ದ ಹಾಗೆ ಎಂದದ್ದು.

ಲಾಕನ ಇಂದ್ರಿಯಾನುಭವಬದ್ಧ ಜ್ಞಾನಮೀಮಾಂಸೆಯನ್ನು ಪ್ರಾತಿನಿಧಿಕ ಪ್ರತ್ಯಕ್ಷ ಸಿದ್ಧಾಂತವೆಂದು ಕರೆಯಲಾಗಿದೆ. ಲಾಕನು ಜೀವಿಸಿದ ಕಾಲವು ಆಧುನಿಕ ವೈಜ್ಞಾನಿಕ ಯುಗದ ಪ್ರಾರಂಭದ ಕಾಲ, ವೈಜ್ಞಾನಿಕ ಶೋಧನೆಗಳಲ್ಲಿ ಮತ್ತು ಬೆಳವಣಿಗೆಗಳಲ್ಲಿ ಆಸಕ್ತಿ ಹೊಂದಿದ್ದ ಲಾಕನು ತನ್ನ ಸಮಕಾಲೀನ ಭೌತಶಾಸ್ತ್ರದಿಂದ ತಕ್ಕಮಟ್ಟಿಗೆ ಪ್ರಭಾವಿತನಾಗಿದ್ದನು. ಇದಕ್ಕೆ ಅವನು ತನ್ನ ಮೀಮಾಂಸೆಯ ಉದ್ದೇಶಗಳಿಗಾಗಿ ಬಳಸಿಕೊಂಡ ಭೌತವಿಜ್ಞಾನದಲ್ಲಿ ಪ್ರಚಲಿತವಾಗಿದ್ದ ಪ್ರಾಥಮಿಕ ಮತ್ತು ದ್ವಿತೀಯ ಗುಣಗಳೆಂಬ ಸಿದ್ಧಾಂತ ಸಾಕ್ಷಿಯಾಗಿದೆ. ಈ ಸಿದ್ಧಾಂತದ ಪ್ರಕಾರ ಭೌತಪದಾರ್ಥಗಳ ಸ್ವರೂಪ ಎರಡು ತರಹದ ಗುಣಗಳಿಂದ ಕೂಡಿವೆ. ಅವೆಂದರೆ ಪ್ರಾಥಮಿಕ ಗುಣಗಳು(primary qualities)ಮತ್ತು ಅನುಷಂಗಿಕ ಗುಣಗಳು(secondary qualities). ಪ್ರಾಥಮಿಕ ಗುಣಗಳು ಭೌತದ್ರವ್ಯಗಳ ಮೂಲಭೂತ ಸ್ವರೂಪಕ್ಕೆ ಸೇರಿವೆ. ಆದರೆ ಅನುಷಂಗಿಕ ಗುಣಗಳು ಭೌತಪದಾರ್ಥಗಳಲ್ಲಿರುವಂತೆ ತೋರುವ (ಬಹುಶಃ ಭೌತ ದ್ರವ್ಯಗಳಿಗೆ ನಿಜವಾಗಿಯೂ ಸೇರದಿರುವ) ಬಣ್ಣಗಳು, ರುಚಿಗಳು, ಶಬ್ದಗಳು (sounds), ಸ್ಪರ್ಶಗಳು ಮತ್ತು ವಾಸನೆಗಳು, ಸಾಂದ್ರತೆ, ಪರಿಮಾಣ, ಭಾರ, ಚಲನೆ ವಿಸ್ತಾರ ಇತ್ಯಾದಿ ಗುಣಗಳು ಲಾಕ್‌ನ ಅಭಿಪ್ರಾಯದಲ್ಲಿ ಭೌತದ್ರವ್ಯಗಳ ಪ್ರಾಥಮಿಕ ಗುಣಗಳಾಗಿದ್ದು ಅವುಗಳ ನೈಜ ಸ್ವರೂಪಕ್ಕೆ ಸೇರಿವೆ. ಅನುಷಂಗಿಕ ಗುಣಗಳು ಬದಲಾವಣೆಯಾದರೆ, ಭೌತಪದಾರ್ಥಗಳ ಮೂಲಭೂತ ಸ್ವರೂಪದಲ್ಲಿ ಏನೂ ವ್ಯತ್ಯಾಸವಾಗುವುದಿಲ್ಲ, ಆದರೆ ಪ್ರಾಥಮಿಕ ಗುಣಗಳಲ್ಲಿ ವ್ಯತ್ಯಾಸವಾದರೆ ಭೌತಪದಾರ್ಥದ ಸ್ವರೂಪದಲ್ಲಿಯೇ ಬದಲಾವಣೆಯಾಗುತ್ತದೆ. ಹೆಚ್ಚು ಕಡಿಮೆ ಕ್ಲಾಸಿಕಲ್ ಭೌತವಿಜ್ಞಾನಿಗಳ ಅಭಿಪ್ರಾಯವೂ ಇದೇ ಆಗಿತ್ತು ಎಂಬುದನ್ನು ಗಮನಿಸಬೇಕಾದದ್ದು ಇಲ್ಲಿ ಮುಖ್ಯ. ಭೌತ ಪದಾರ್ಥಗಳ ದ್ವಿತೀಯ ಗುಣಗಳಾದ ಬಣ್ಣಗಳು, ರುಚಿಗಳು, ವಾಸನೆಗಳು ಮತ್ತು ಸ್ಪರ್ಶಗಳು ಅವಕ್ಕೆ ನಿಜವಾಗಿಯೂ ಸೇರಿಲ್ಲ. ಬಹುಶಃ ಅವು ನಮ್ಮ ಪಂಚೇಂದ್ರಿಯಗಳಿಗೂ ಮತ್ತು ಪ್ರಾಥಮಿಕ ಗುಣಗಳಿಗೂ ಮಧ್ಯೆ ಸಂಭವಿಸುವ ಪರಸ್ಪರ ಪ್ರತಿಕ್ರಿಯೆ (interaction)ಯ ಪರಿಣಾಮಗಳಾಗಿರಬಹುದು. ಅವು ಸಂಪೂರ್ಣವಾಗಿ ವ್ಯಕ್ತಿನಿಷ್ಠ (subjective) ಎನ್ನುವವರೆಗೆ ಲಾಕನು ಹೋಗದಿದ್ದರೂ, ಅನುಷಂಗಿಕ ಗುಣಗಳು ಭೌತದ್ರವ್ಯಗಳ ನೈಜಸ್ವರೂಪಕ್ಕೆ ಅವಶ್ಯಕವಲ್ಲ, ಕೇವಲ ಆಕಸ್ಮಿಕ ಎಂಬುದು ಅವನ ಜ್ಞಾನಮೀಮಾಂಸೆಯಿಂದ ಸ್ಪಷ್ಟವಾಗುತ್ತದೆ. ಲಾಕನು ಇಷ್ಟೇ ಹೇಳಿದ್ದರೆ ಅವನ ಜ್ಞಾನಮೀಮಾಂಸೆಯಲ್ಲಿ ತೊಂದರೆಗಳು ಉದ್ಭವಿಸುತ್ತಿರಲಿಲ್ಲ. ಭೌತ ಪದಾರ್ಥಗಳು ಪ್ರಾಥಮಿಕ ಗುಣಗಳು ಮತ್ತು ಅನುಷಂಗಿಕ ಗುಣಗಳಿಂದ ಕೂಡಿವೆ. ಎಂದು ಹೇಳಿ ಅವುಗಳ ಪ್ರಾಥಮಿಕ ಗುಣಗಳ ಬಗ್ಗೆ ನಮಗೆ (ಅಂದರೆ ನಮ್ಮ

ಪಂಚೇಂದ್ರಿಯಗಳಿಗೆ ಮತ್ತು ಮನಸ್ಸಿಗೆ) ನೇರವಾದ ಸಂಪರ್ಕ ಅಥವಾ ಸನ್ನಿಕರ್ಷವಿಲ್ಲದಿರುವುದರಿಂದ ಭೌತ ಪದಾರ್ಥಗಳ ಬಗ್ಗೆ ನಮ್ಮ ಜ್ಞಾನ ನೇರವಾಗಿರದೆ, ಅದೊಂದು ಪರೋಕ್ಷ ಜ್ಞಾನ ಮಾತ್ರ ಎನ್ನುತ್ತಾನೆ. ಭೌತ ಪದಾರ್ಥಗಳೊಂದಿಗೆ ನಮ್ಮ ಪಂಚೇಂದ್ರಿಯಗಳಿಗೆ ನೇರವಾದ ಸಂಪರ್ಕವಿಲ್ಲ ಎನ್ನುವುದು ಲಾಕ್‌ನ (ಅದು ಸರಿ ಇರಲಿ ಅಥವಾ ಇಲ್ಲದೇ ಇರಲಿ) ಜ್ಞಾನ ಮೀಮಾಂಸೆಯ ತಿರುಳು. ಇದರಿಂದ ಅವನ ಪರೋಕ್ಷ ಜ್ಞಾನ ಸಿದ್ಧಾಂತ (theory of indirect perception) ಹೊರಬರುವುದರ ಜೊತೆಗೆ ಅವನ ತರುವಾಯ ಬಂದ ಬಾರ್ಕ್‌ಲಿಯ ವ್ಯಕ್ತಿನಿಷ್ಠ ಚಿತ್‌ಪ್ರಧಾನವಾದ ಮತ್ತು ಹ್ಯೂಮ್‌ನ ಸಂದೇಹವಾದಗಳಿಗೆ ತಾರ್ಕಿಕ ಆಧಾರ ಸಿಗುತ್ತದೆ. ಲಾಕ್‌ನ ಪ್ರಕಾರ ನಮಗೆ ಭೌತ ಪದಾರ್ಥಗಳೊಂದಿಗೆ ನೇರವಾದ ಸಂಪರ್ಕವಿಲ್ಲ. ನಮಗೆ ನೇರವಾದ ಸಂಪರ್ಕವಿರುವುದು ನಮ್ಮ ಪಂಚೇಂದ್ರಿಯಗಳಿಗೂ ಮತ್ತು ಭೌತ ಪದಾರ್ಥಗಳ ಪ್ರಾಥಮಿಕ ಗುಣಗಳಿಗೂ ಮಧ್ಯೆ ಉಂಟಾಗುವ ಕ್ರಿಯೆ–ಪ್ರತಿಕ್ರಿಯೆಗಳಿಂದ ಪರಿಣಮಿಸಿ ನಮ್ಮ ಮನಸ್ಸು ಸ್ವೀಕರಿಸುವ ಸರಳ ಆಲೋಚನೆ (simple ideas) ಗಳೊಂದಿಗೆ ಮಾತ್ರ. ಇದಿಷ್ಟು ಲಾಕ್‌ನ ತತ್ವಶಾಸ್ತ್ರದ ತಿರುಳು. ಬಿಷಪ್ ಬಾರ್ಕ್‌ಲಿ ಮತ್ತು ಡೇವಿಡ್ ಹ್ಯೂಮ್‌ರು ಲಾಕ್‌ನ ಜ್ಞಾನಮೀಮಾಂಸೆಯ ಕೆಲವು ಸಿದ್ಧಾಂತಗಳನ್ನು ತಮ್ಮ ತಮ್ಮ ಅಸಾಂಪ್ರದಾಯಿಕ (unconventional) ಸಿದ್ಧಾಂತಗಳನ್ನು ಸೃಷ್ಟಿಸಲು ಹೇಗೆ ಉಪಯೋಗಿಸಿಕೊಂಡರೆಂಬುವನ್ನು ಸಂಕ್ಷಿಪ್ತವಾಗಿ ಸೂಚಿಸಿ ಈ ಪ್ರಬಂಧದ ಮುಖ್ಯ ಗುರಿಯಾದ ಇಂದ್ರಿಯಾನುಭವವಾದಕ್ಕೂ ಮತ್ತು ವೈಚಾರಿಕತೆಗೂ ಇರುವ ಪರಸ್ಪರ ಸಂಬಂಧದ ಚರ್ಚೆಗೆ ತಿರುಗಲಾಗುವುದು.

ಬಾರ್ಕ್‌ಲಿ ಮತ್ತು ಹ್ಯೂಮ್‌ರು ಪ್ರತ್ಯಕ್ಷವಾದದಿಂದ ವಿಚಿತ್ರ ಮತ್ತು ವೈಪರೀತ್ಯ ಎನ್ನಬಹುದಾದ ಎರಡು ಬೇರೆ ಬೇರೆ ಸಿದ್ಧಾಂತಗಳನ್ನು ತೆಗೆದಿದ್ದಾರೆ. ಬಾರ್ಕ್‌ಲಿಯು ವ್ಯಕ್ತಿಯ ಪ್ರಜ್ಞೆ ಮತ್ತು ಆ ಪ್ರಜ್ಞೆಯಲ್ಲಿ ಹುಟ್ಟುವ ವಿಚಾರಗಳೇ ನಿಜವಾಗಿಯೂ ಅಸ್ತಿತ್ವದಲ್ಲಿರುವಂತಹವು, ಬಹಿರಂಗ ಭೌತ ಪ್ರಪಂಚದಲ್ಲಿ ಅಸ್ತಿತ್ವದಲ್ಲಿದ್ದಂತೆ ತೋರುವ ಭೌತ ವಸ್ತುಗಳು ನಿಜವಾಗಿಯೂ ಅಸ್ತಿತ್ವದಲ್ಲಿಲ್ಲ ಎನ್ನುವ ವ್ಯಕ್ತಿನಿಷ್ಠ ಚಿತ್‌ಪ್ರಧಾನವಾದವನ್ನು ಮುಂದಿಟ್ಟು ಭೌತವಾದದ (Materialism) ನಿಲುವನ್ನು ಖಂಡಿಸುತ್ತಾನೆ. ನಮ್ಮ ಮನಸ್ಸಿನಲ್ಲಿರುವ ವಿಚಾರಗಳೇ ಸತ್ಯ ; ಭೌತವಸ್ತುಗಳೆಂಬ ಮನಸ್ಸಿನಿಂದ ಸ್ವತಂತ್ರವಾದ ಸತ್ಯಗಳು ಅಸ್ತಿತ್ವದಲ್ಲೇ ಇಲ್ಲ ಎಂಬುದು ಬಾರ್ಕ್‌ಲಿಯ ಪ್ರತ್ಯಕ್ಷವಾದದ ತಿರುಳು, ವಿಚಿತ್ರವೆಂದರೆ ಭಾರತೀಯ ದರ್ಶನದಲ್ಲಿ ಚಾರ್ವಾಕರು ಅಥವಾ ಲೋಕಾಯತರು ಪ್ರತ್ಯಕ್ಷವೊಂದೇ ಜ್ಞಾನದ ಪ್ರಮಾಣವೆಂದು ಪ್ರತಿಪಾದಿಸಿ ಅದರಿಂದ ಭೌತವಾದ ಮತ್ತು ನಾಸ್ತಿಕವಾದಗಳನ್ನು ಮಂಡಿಸಿದರೆ, ಬಾರ್ಕ್‌ಲಿಯು ಕ್ರೈಸ್ತಮತದ ಧರ್ಮಾಧಿಕಾರಿ (Bishop) ಯಾಗಿದ್ದುದರಿಂದ ಲಾಕನು ಪ್ರತಿಪಾದಿಸಿದ ಪ್ರತ್ಯಕ್ಷವಾದವನ್ನೇ ತಳಹದಿಯನ್ನಾಗಿ ಮಾಡಿಕೊಂಡು ಚಿತ್‌ಪ್ರಧಾನವಾದ (Idea-lism) ಮತ್ತು ಆಸ್ತಿಕವಾದಗಳನ್ನು ಸಿದ್ಧಮಾಡಿ ತೋರಿಸುತ್ತಾನೆ. "Existence

is Perception" ಅಥವಾ ಕನ್ನಡದಲ್ಲಿ "ಅಸ್ತಿತ್ವವು ಪ್ರತ್ಯಕ್ಷವಾಗಿದೆ" ಎನ್ನುವ ಸೂತ್ರದಲ್ಲಿ ಮನಸ್ಸೇ ಪ್ರಧಾನ ಮತ್ತು ಸತ್ಯ ಎನ್ನುವ ಸಿದ್ಧಾಂತವನ್ನು ಅಭಿವ್ಯಕ್ತಿಸಿದ್ದಾನೆ. "the **reality** of sensible things consists in being perceived." "Heat and cold are only sensations exis-tiny in our minds," "Whatever is immediately perceived is an idea; and can any idea exist out of the mind?" ಇಂತಹ ಅನೇಕ ಪರಿಣಾಮಕಾರಿ ವಾಕ್ಯಗಳು ಬಾರ್ಕ್‌ಲಿಯ ವಾದವನ್ನು ಸುಸ್ಪಷ್ಟರೂಪದಲ್ಲಿ ಅಭಿವ್ಯಕ್ತಿಸುತ್ತವೆ. ಇಂದ್ರಿಯಾನುಭವದಿಂದ ಆಚೆಗೆ ನಿಂತು ಭೌತ ವಸ್ತುಗಳ ಅಸ್ತಿತ್ವವನ್ನು ದರ್ಶಿಸಿದ ಒಂದೂ ಉದಾಹರಣೆ ಇಲ್ಲದಿರುವುದರಿಂದ ಇಂದ್ರಿಯಾನುಭವದಿಂದ ಪರಿಣಮಿಸುವ ಅಥವಾ ಹುಟ್ಟುವ ಸಂವೇದನೆ (sensations)ಗಳ ರೂಪದಲ್ಲಿಯೇ ಭೌತವಸ್ತುಗಳು ಇರುವುದು ಎನ್ನುವುದು ಬಾರ್ಕ್‌ಲಿಯ ಅಭಿಪ್ರಾಯ.

ಪಾಶ್ಚಾತ್ಯ ತತ್ವಶಾಸ್ತ್ರದಲ್ಲಿ ಸಂದೇಹವಾದಿಯೆಂದು ಹೆಸರಾದ ಡೇವಿಡ್ ಹ್ಯೂಮ್‌ನ ದರ್ಶನವು ಪ್ರತ್ಯಕ್ಷವಾದದಿಂದ ಇನ್ನೊಂದು ನಿಜವಾಗಿಯೂ ಕ್ರಾಂತಿಕಾರಿ ಮತ್ತು ಆಘಾತಕಾರಿ ಎನ್ನಬಹುದಾದ ಸಿದ್ಧಾಂತವನ್ನು ಮಂಡಿಸುತ್ತದೆ. ಹ್ಯೂಮ್‌ನ ಮುಖ್ಯ ಸಿದ್ಧಾಂತ ಇದು: ನಮ್ಮ ಮನಸ್ಸಿನಲ್ಲಿ (ನಾವು ಸಾಮಾನ್ಯವಾಗಿ ಮಾತಾಡುವ ಮನಸ್ಸು ಎಂಬುದೇ ಹ್ಯೂಮ್‌ನ ದೃಷ್ಟಿಯಲ್ಲಿ ಅಸ್ತಿತ್ವದಲ್ಲಿಲ್ಲ.) ಆಲೋಚನೆ (Ideas)ಗಳು ಏಳಬೇಕಾದರೆ ಸಂವೇದನೆ (impressions) ಗಳು ಮೊದಲು ನಮ್ಮಲ್ಲಿರಬೇಕು. ಉದಾಹರಣೆಗೆ ಹಸಿರು ಬಣ್ಣದ ಬಗೆ ಆಲೋಚನೆ ನಮ್ಮ ಮನಸ್ಸಿನಲ್ಲಿ ಬರಬೇಕಾದರೆ ಅದಕ್ಕೆ ಸಮಾನಾಂತರವಾದ ಹಸಿರು ಸಂವೇದನೆಯ ಅನುಭವ ನಮಗಾಗಬೇಕು. ಅಥವಾ ಹೊಟ್ಟೆ ನೋವಿನ ಬಗ್ಗೆ ನಮ್ಮ ಮನಸ್ಸಿನಲ್ಲಿ ಆಲೋಚನೆ ಹುಟ್ಟಬೇಕಾದರೆ, ಹೊಟ್ಟೆ ನೋವಿನ ಅನುಭವ ಅಥವಾ ಸಂವೇದನೆ (experience or impression) ನಮ್ಮಲ್ಲಿರಬೇಕು ಅಥವಾ ನಮಗಾಗಬೇಕು. ಅಂದರೆ ಆಲೋಚನೆಗಳಿಗೆ ಸಂವೇದನೆಗಳು ಕಚ್ಚಾ ಸಾಮಗ್ರಿಗಳು. ಸಂವೇದನೆಗಳಿಂದಲೇ ಆಲೋಚನೆಗಳು ಹೊರಡುವುದರಿಂದ, ಅನುಭವವಾಗದೇ ಸಂವೇದನೆಗಳು ಹುಟ್ಟುವುದಿಲ್ಲವಾದ್ದರಿಂದ, ಸಂವೇದನೆಗಳಿಲ್ಲದ ಆಲೋಚನೆಗಳೆಲ್ಲ ನಿಜವಾದ ಆಲೋಚನೆಗಳೇ ಅಲ್ಲವೆಂದು ಹ್ಯೂಮ್ ಸಾರಿದ್ದಾನೆ. ಆದ್ದರಿಂದ ಹ್ಯೂಮ್‌ನ ಪ್ರಕಾರ ಎರಡೇ ಪ್ರಕಾರದ ಜ್ಞಾನಗಳಿರುವುದು. ಒಂದು ಇಂದ್ರಿಯಾನುಭವಜನ್ಯ ಜ್ಞಾನ(empirical knowledge)ಮತ್ತು ಇನ್ನೊಂದು ಗಣಿತದಲ್ಲಿರುವ ಆಕಾರಾತ್ಮಕ (formal) ಜ್ಞಾನ. ಮೂರನೆಯ ಪ್ರಕಾರದ ಜ್ಞಾನವಿದೆಯೆಂದು ಯಾರಾದರೂ ಸಾರಿದರೆ ಆಗ ಅಂತಹವರು ಬರೆದ ಗ್ರಂಥಗಳನ್ನು ಹ್ಯೂಮ್ ಹೇಳುವ ಕೆಳಗಿನ ರೀತಿಯಲ್ಲಿ ಪರೀಕ್ಷಿಸಿ ಬೆಂಕಿಗೆ ಎಸೆಯಬೇಕು.

"When we run over libraries, persuaded of these principles (sceptical principles), what havoc must we

make? If we take in our hand any volume; of divinity or school metaphysics, for instance; let us ask, does it contain any abstract reasoning concerning quantity or number? No. Does it contain any experimental reasoning concerning matter of fact and existence? No. Commit them to the flames for it can contain nothing but sophistry and illusion"

("ಈ ತತ್ವಗಳಿಂದ ಮನ ಒಲಿಸಲ್ಪಟ್ಟ ನಾವು ಗ್ರಂಥಾಲಯಗಳನ್ನೆಲ್ಲಾ ಸೂರೆಗೊಂಡರೆ ಎಷ್ಟು ಧ್ವಂಸಗೆಯ್ಯಬೇಕು ? ನಮ್ಮ ಕೈಗಳಲ್ಲಿ ದೇವತಾಶಾಸ್ತ್ರ ಅಥವಾ ಅಭೌತಶಾಸ್ತ್ರದ ಒಂದು ಹೊತ್ತಿಗೆ ತೆಗೆದುಕೊಂಡು ಹೀಗೆ ಪ್ರಶ್ನಿಸೋಣ ! ಅದು ಪ್ರಮಾಣ ಅಥವಾ ಸಂಖ್ಯೆಯ ಬಗ್ಗೆ ಏನಾದರೂ ವಿಚಾರ ಹೊಂದಿದೆಯೋ ? ಇಲ್ಲ. ಅದು ಒಂದು ವಾಸ್ತವಿಕ ಸಂಗತಿ ಅಥವಾ ಅಸ್ತಿತ್ವದ ಬಗ್ಗೆ ಪ್ರಾಯೋಗಿಕ ವಾದವನ್ನು ಹೊಂದಿದೆಯೋ ? ಇಲ್ಲ. ಹಾಗಾದರೆ ಅವನ್ನು ಬೆಂಕಿಗೆ ಹಾಕಿ. ಏಕೆಂದರೆ ಅದು ವಿತಂಡವಾದ ಮತ್ತು ಭ್ರಮೆಗಳಲ್ಲಿ ಬಿಟ್ಟು ಏನನ್ನೂ ಹೊಂದಿಲ್ಲ.)

ಹ್ಯೂಮ್‌ನ ವೈಪರೀತ್ಯ (extreme) ಇಂದ್ರಿಯಾನುಭವವಾದದಿಂದ ಅವನ ದಿಟ್ಟ ಸಂದೇಹವಾದ ಪರಿಣಮಿಸುತ್ತದೆ. ಹ್ಯೂಮ್‌ನು ತನ್ನ ಒಡಂಬಡಿಕೆ ಮಾಡಿಕೊಳ್ಳದ (uncompromising) ಇಂದ್ರಿಯಾನುಭವವಾದದ ಮೂಲಭೂತ ಸಿದ್ಧಾಂತದಿಂದ ತಾರ್ಕಿಕವಾಗಿ ಯಾವ ಯಾವ ಪರಿಣಾಮಗಳು ಅಥವಾ ಸಂದೇಹಾತ್ಮಕ ಸಿದ್ಧಾಂತಗಳು ಸಾಧ್ಯವೋ ಅವೆಲ್ಲವುಗಳನ್ನೂ ನಿರ್ದಾಕ್ಷಿಣ್ಯವಾಗಿ ಹೊರತೆಗೆದಿದ್ದಾನೆ. ಪ್ರತ್ಯಕ್ಷವಾದದಿಂದ ನಾಸ್ತಿಕವಾದ ಮತ್ತು ಸಂತೋಷವಾದಗಳನ್ನು ಪ್ರತಿಪಾದಿಸುವುದು ಸರ್ವೇಸಾಮಾನ್ಯ. ಆದರೆ ಹ್ಯೂಮ್‌ನು ಪ್ರತ್ಯಕ್ಷವಾದದಿಂದ ನಾಸ್ತಿಕತೆ, ನೈರಾತ್ಮಕತೆ, ಮತ್ತು ಸಂತೋಷವಾದಗಳನ್ನು ಪ್ರತಿಪಾದಿಸುವುದರ ಜೊತೆಗೆ ಮೇಲಿನ ವಾದಗಳನ್ನು ಸಾಮಾನ್ಯವಾಗಿ ಮಂಡಿಸುವ ಭೌತವಾದಿ (materialists)ಗಳ ಭೌತವಾದವನ್ನು ತಿರಸ್ಕರಿಸಿದ್ದಾನೆ. ಈ ವಿಚಾರವನ್ನು ಇನ್ನೂ ಹೆಚ್ಚು ವಿವರವಾಗಿ ಮುಂದೆ ಚರ್ಚಿಸಲಾಗುವುದು.

ವೈಚಾರಿಕತೆ ಮತ್ತು ಇಂದ್ರಿಯಾನುಭವವಾದ

ಇಂದ್ರಿಯಾನುಭವವಾದ ಅಥವಾ ಪ್ರತ್ಯಕ್ಷವಾದದಿಂದ ಹುಟ್ಟುವ ವೈಚಾರಿಕ ಮತ್ತು ತಾತ್ವಿಕ ಸಮಸ್ಯೆಗಳು ಅನೇಕ, ಸಂಕೀರ್ಣ ಮತ್ತು ಚರ್ಚಾತ್ಮಕ. ಜ್ಞಾನಮೀಮಾಂಸೆ (Theory of Knowledge) ಯಲ್ಲಿ ಇಂದ್ರಿಯಾನುಭವ (Sense-perception) ದ ಪಾತ್ರದ ಬಗ್ಗೆ ಮೂರು ವಿವಿಧ ಮತ್ತು ವಿರೋಧಾತ್ಮಕ ದೃಷ್ಟಿಗಳಿವೆ. ಮೊದಲನೆಯ ಅಭಿಪ್ರಾಯದ ಪ್ರಕಾರ ಇಂದ್ರಿಯಾನುಭವವು ನೈಜಜ್ಞಾನವನ್ನು ಸಂಪಾದಿಸುವಲ್ಲಿ ಸಂಪೂರ್ಣ ಅಸಮರ್ಪಕವಾಗಿದೆ. ಅಷ್ಟೇ ಅಲ್ಲದೆ ಅದು ವಸ್ತುಗಳ ನೈಜ

ಸ್ವರೂಪವನ್ನು ತಿಳಿಸುವುದರಲ್ಲಿ ಅವನ್ನು ಅನ್ಯಥಾ ಸ್ವರೂಪವುಳ್ಳವನ್ನಾಗಿ ತೋರಿಸುತ್ತದೆ. ಉದಾಹರಣೆಗೆ ಹಗ್ಗ ಹಗ್ಗದಂತೆ ಕಾಣಿಸದಿದ್ದರೆ ಹೋಗಲಿ, ಅದು ಹಾವಾಗಿ ಕಾಣುವಂತೆ ಸಹ ಇಂದ್ರಿಯಾನುಭವ ಮಾಡುತ್ತದೆ. ಅಂದರೆ ವಸ್ತುಗಳ ಪ್ರಮಾ (truths) ಗಳನ್ನು ತಿಳಿಸಲು ಅಸಮರ್ಥವಾಗುವುದರ ಜೊತೆಗೆ ಅವುಗಳ ಸ್ಥಾನದಲ್ಲಿ ವಸ್ತುಗಳ ಬಗ್ಗೆ ಭ್ರಮೆ (illusions) ಗಳನ್ನು ಇಂದ್ರಿಯಾನುಭವ ಸೃಷ್ಟಿಸುತ್ತದೆ. ಅತೀಂದ್ರಿಯ ಸತ್ಯಗಳ ಬಗ್ಗೆ ಇಂದ್ರಿಯಾನುಭವ ಜ್ಞಾನ ಕೊಡುವುದರಲ್ಲಿ ಅಸಮರ್ಥವಾಗುವುದರೊಂದಿಗೇ ಪಂಚೇಂದ್ರಿಯಗಳಿಗೆ ವಿಷಯಗಳಾಗುವ ಭೌತಿಕ ಪ್ರಪಂಚದ ಪದಾರ್ಥಗಳ ಬಗ್ಗೆಯೂ ಯಥಾರ್ಥ ತಿಳುವಳಿಕೆಯನ್ನು ನೀಡುವುದಿಲ್ಲ. ಆದ್ದರಿಂದ ಸತ್ಯಗಳ ಅನ್ವೇಷಣೆಯಲ್ಲಿ ಇಂದ್ರಿಯಾನುಭವದ ಪಾತ್ರ ಸಂಪೂರ್ಣ ಗೌಣವಾಗಿದ್ದು, ಅದರ ಬದಲು ವಿಚಾರ (reason) ಅಥವಾ ಪ್ರತಿಭಾನ (intuition) ವನ್ನು ಜ್ಞಾನ ಸಾಧನವನ್ನಾಗಿ ಮಾಡಿಕೊಳ್ಳಬೇಕೆಂದು ಈ ಮೇಲಿನ ವಾದವನ್ನು ಎತ್ತಿಹಿಡಿಯುವವರು ಅಭಿಪ್ರಾಯ ಪಡುತ್ತಾರೆ. ದಾರ್ಶನಿಕರಿಂದ ಟೀಕೆಗೆ ಮತ್ತು ಅವಜ್ಞೆಗೆ ಇಂದ್ರಿಯಾನುಭವವು ಒಳಗಾದಷ್ಟು ಬೇರೆ ಯಾವ ಪ್ರಮಾಣವೂ ಒಳಗಾಗಿಲ್ಲ.

ಎರಡನೆಯ ದೃಷ್ಟಿ ಅಥವಾ ಅಭಿಪ್ರಾಯದ ಪ್ರಕಾರ ಇಂದ್ರಿಯಾನುಭವ ಅಥವಾ ಪ್ರತ್ಯಕ್ಷವು ಜ್ಞಾನಾನ್ವೇಷಣೆಯಲ್ಲಿ ಪ್ರಾರಂಭದಲ್ಲಿ ಅನಿವಾರ್ಯ ಅಥವಾ ಆವಶ್ಯಕವಾಗಿರಬಹುದು. ಆದರೆ ನೈಜವಾದ ಜ್ಞಾನ ಪಡೆಯುವ ಹಂತದಲ್ಲಿ ಅದು ಸಂಪೂರ್ಣ ಗೌಣ. ಉದಾಹರಣೆಗೆ ಅನುಮಾನ, ಉಪಮಾನ ಮತ್ತು ವೈಜ್ಞಾನಿಕವಾಗಿ ಮಹತ್ವದ ಊಹೆಗಳನ್ನು ಮಾಡುವಲ್ಲಿ ಇಂದ್ರಿಯಾನುಭವವು ಅಸ್ತಿಭಾರ ಹಾಕಬಹುದು. ಆದರೆ ಅಲ್ಲಿಂದ ಮೇಲಕ್ಕೆ ಜ್ಞಾನದ ಭವ್ಯ ಸೌಧದ ನಿರ್ಮಾಣ ಕಾರ್ಯದಲ್ಲಿ ಅದರ ಪಾತ್ರ ಏನೂ ಇಲ್ಲ. ಜರ್ಮನ್ ತತ್ವಜ್ಞಾನಿ ಕ್ಯಾಂಟನು ಈ ಅಂಶವನ್ನು ಬಹಳ ಮಾರ್ಮಿಕವಾಗಿ ಹೀಗೆ ಅಭಿವ್ಯಕ್ತಿಸಿದ್ದಾನೆ.

"All knowledge begins with experience, but all knowledge does not arise out of experience" ಎಲ್ಲಾ ಜ್ಞಾನವು ಇಂದ್ರಿಯಾನುಭವದಲ್ಲಿ ಪ್ರಾರಂಭವಾಗುತ್ತದೆ, ಆದರೆ ಎಲ್ಲಾ ಜ್ಞಾನವು ಅನುಭವದಿಂದಲೇ ಉದಯವಾಗುವುದಿಲ್ಲ."

ಕೆಲವು ವಿಚಾರವಾದಿಗಳು ಇದನ್ನು ಒಪ್ಪುವುದಿಲ್ಲ. ಅವರ ಪ್ರಕಾರ ಎಲ್ಲಾ ಜ್ಞಾನವು ವೈಚಾರಿಕತೆ (rational thinking) ಯಿಂದಲೇ ಹುಟ್ಟುತ್ತದೆ. ಇಂತಹ ತೀವ್ರಗಾಮಿ ವಿಚಾರವಾದಿಗಳನ್ನು ಸಂಪೂರ್ಣವಾಗಿ ವಿರೋಧಿಸುವುದಕ್ಕಾಗಿ ಬ್ರಿಟಿಶ್ ಸಂದೇಹವಾದಿ ಡೇವಿಡ್ ಹ್ಯೂಮ್‌ನು ವಿಚಾರವಾದಿಗಳ ಗೃಹೀತ ತತ್ವಗಳಾದ (pre-suppositions) ದ್ರವ್ಯತತ್ವ (substance), ಕಾರ್ಯಕಾರಣ ನಿಯಮ (law of cansation), ಸಾರ್ವಕಾಲಿಕಗಳು (universals) ಮುಂತಾದವುಗಳನ್ನು ಕೇವಲ ಭಾಷೆಯ ಪದಗಳು (terms) ಅಥವಾ ನಾಮಪದಗಳು (names)

ಎಂದು ಸಾರಿದ್ದಾನೆ. ಕ್ಯಾಂಟನ ಮೇಲೆ ನಮೂದಿಸಿದ ಹೇಳಿಕೆಗೆ ಸಂಪೂರ್ಣ ವಿರೋಧಾತ್ಮಕನೆನ್ನಬಹುದಾದ ಹ್ಯೂಮ್‌ನ ತೀವ್ರಗಾಮಿ ಇಂದ್ರಿಯಾನುಭವ ವಾದದ ಹೇಳಿಕೆಯನ್ನು ಪರಾಮರ್ಶಿಸಬಹುದು.

"Every simple idea has a simple impression, which resembles it ; and every simple impression a correspondent idea........ All our simple ideas in their first appearance are derived from simple impressions, which are correspondent to them, and which they exactly represent." (Hume : *Treatise of Human Nature*)

"ಪ್ರತಿಯೊಂದು ಸರಳ ವಿಚಾರದಲ್ಲಿ ಒಂದು ಸರಳ ಸಂವೇದನೆ ಇದೆ, ಇದು (ಸಂವೇದನೆ) ಅದನ್ನು (ಸರಳ ವಿಚಾರವನ್ನು) ಹೋಲುತ್ತದೆ, ಮತ್ತು ಪ್ರತಿಯೊಂದು ಸರಳ ಸಂವೇದನೆಗೆ ಹೊಂದಾಣಿಕೆಯಾಗುವ ಒಂದು ವಿಚಾರವಿದೆ .... ನಮ್ಮ ಎಲ್ಲಾ ಸರಳ ವಿಚಾರಗಳು ಅವುಗಳ ಮೊದಲ ಕಾಣುವಿಕೆಯಲ್ಲಿ ಸರಳ ಸಂವೇದನೆಗಳಿಂದ ತೆಗೆದವುಗಳಾಗಿವೆ. . ಇವುಗಳು ಅವುಗಳನ್ನು ಹೋಲುತ್ತವೆ ಮತ್ತು ನಿಕೃಷ್ಟವಾಗಿ ಪ್ರತಿನಿಧಿಸುತ್ತವೆ.")

ಇಂದ್ರಿಯಾನುಭವದ ಬಗ್ಗೆ ಮೂರನೆಯ ದೃಷ್ಟಿ ಇದು. ಇಂದ್ರಿಯಾನುಭವವೇ ಎಲ್ಲಾ ಜ್ಞಾನಕ್ಕೆ ಮೂಲಭೂತ ಸಾಧನ. ಇಂದ್ರಿಯಾನುಭವವಾದಿಗಳೆಲ್ಲರಿಗೂ ಇದು ಹೆಚ್ಚು ಕಡಿಮೆ ಒಪ್ಪಿಗೆ. ಆದರೆ ಇಂದ್ರಿಯಾನುಭವದ ಅನಿವಾರ್ಯತೆಯನ್ನು (ಜ್ಞಾನದಲ್ಲಿ) ಘಂಟಾಘೋಷವಾಗಿ ಸಾರಿದ ಲಾಕನು ತನ್ನ ಜ್ಞಾನಮೀಮಾಂಸೆಯಲ್ಲಿ ಅನೇಕ ವಿರೋಧಾತ್ಮಕ ಹೇಳಿಕೆಗಳನ್ನೂ ನೀಡಿದ್ದಾನೆ. ಅನುಭವಕ್ಕಿಂತ ಮೊದಲು ಏನೂ ಬರೆಯದ ಬಿಳೀ ಹಾಳೆಯಂತಿದ್ದ ಮನಸ್ಸು, ಅನುಭವದಿಂದ ಬಂದಿರಲು ಸಾಧ್ಯವೇ ಇಲ್ಲವೆನ್ನುವಂತಹ ಅನೇಕ ಸಂಕೀರ್ಣ ವಿಚಾರಗಳಿಂದ ತುಂಬಿತುಳುಕಲು ಪ್ರಾರಂಭಿಸುತ್ತದೆ. ಸರಳ ವಿಚಾರಗಳಿಂದ ಸಂಕೀರ್ಣ ವಿಚಾರಗಳನ್ನು ಮನಸ್ಸು ಮನನಾತ್ಮಕತೆಯಿಂದ ತಯಾರು ಮಾಡುತ್ತದೆ ಎಂದು ಲಾಕನು ಹೇಳುತ್ತಾನೆ. ಆದರೆ ಹೀಗೆ ಮನಸ್ಸು ತಯಾರಿಸಿದ ವೈಚಾರಿಕ ತತ್ವಗಳು (concepts or universals) ಇಂದ್ರಿಯಾನುಭವದಿಂದ ಹುಟ್ಟಿದ ಸರಳ ವಿಚಾರಗಳಿಂದ ನಿಜವಾಗಿಯೂ ತಯಾರಾಗಿವೆ ಎಂಬುದನ್ನು ಒಪ್ಪಿಕೊಳ್ಳುವುದು ಕಠಿಣವಾಗುತ್ತದೆ. ಈ ತೊಂದರೆಯಿಂದ ಪಾರಾಗಲು ಹ್ಯೂಮ್‌ನು ಸಾರ್ವಕಾಲಿಕಗಳು (universals) ನಾಮಪದ (names only and not objects.) ಗಳು ಮಾತ್ರ ಎಂದು ಹೇಳಿದನು. ತತ್ವಶಾಸ್ತ್ರದಲ್ಲಿ ಸಾರ್ವಕಾಲಿಕಗಳ ಸ್ವರೂಪದ ಬಗ್ಗೆ ತೀವ್ರತರವಾದ ಚರ್ಚೆ ಮತ್ತು ಜಿಜ್ಞಾಸೆ ನಡೆದಿದೆ. ಸಾರ್ವ

ಕಾಲಿಕಗಳು ಬರೀ ಭಾಷೆಯಲ್ಲಿಯ ಪದ (words) ಗಳಾಗಿರದೆ ವಸ್ತುನಿಷ್ಠ (objective) ತತ್ವಗಳೆಂದು ಅನೇಕ ದಾರ್ಶನಿಕರು ವಾದಿಸಿದ್ದಾರೆ. ಹ್ಯೂಮ್‌ನು ಈ ವಾದವನ್ನು ನಿರಾಕರಿಸಿ, ಸಾರ್ವಕಾಲಿಕಗಳು ಬರೀ ಪದಗಳು ಎಂದಿದ್ದಾನೆ.) ಇದರಿಂದಾಗಿ ಇಂದ್ರಿಯಾನುಭವ ವಾದವನ್ನು ಮೂಲಭೂತವಾಗಿ ಒಪ್ಪಿಕೊಂಡವರಲ್ಲಿಯೂ ಅದರ ನಿಜವಾದ ಪಾತ್ರದ ಬಗ್ಗೆ ಭಿನ್ನಾಭಿಪ್ರಾಯವಿದೆ. ಈ ಭಿನ್ನಾಭಿಪ್ರಾಯವು ಆಧುನಿಕ ವೈಚಾರಿಕತೆಯ ಮುಖ್ಯ ಸಮಸ್ಯೆಗಳ ಮೇಲೆ ತೀವ್ರವಾದ ಪರಿಣಾಮವನ್ನು ಬೀರಿದೆ.

ಲಾಕನು ಪ್ರತಿಪಾದಿಸಿದ ಇಂದ್ರಿಯಾನುಭವ ವಾದದ ಪ್ರಕಾರದಿಂದ ಮುಖ್ಯವಾಗಿ ವೈಚಾರಿಕತೆಯ ದೃಷ್ಟಿಯಿಂದ ಮಹತ್ವದ ಪರಿಣಾಮವೆಂದರೆ ಅವನು ಬಹಿರಂಗ ಪ್ರಪಂಚ (external world) ದ ಬಗ್ಗೆ ಮಾಡಿದ ಸಿದ್ಧಾಂತ. ಬಹಿರಂಗ ಪ್ರಪಂಚದ ನೇರ ಪ್ರತ್ಯಕ್ಷವಾಗಲೀ ಅಥವಾ ನೇರ ಅನುಭವವಾಗಲೀ ಸಾಧ್ಯವಿಲ್ಲ. ಪರೋಕ್ಷವಾಗಿ ಮಾತ್ರ ನಾವು ಬಹಿರಂಗ ಪ್ರಪಂಚವನ್ನು ಅನುಭವ ಮಾಡಿಕೊಳ್ಳಬಹುದು. ಈ ಸಿದ್ಧಾಂತ ಮೊದಲ ನೋಟಕ್ಕೆ ನಿರಪರಾಧಿಯಂತೆ ತೋರುತ್ತದೆ. ಆದರೆ ನಮಗೆ ನೇರವಾಗಿ ಸಂಬಂಧವಿರುವುದು ನಿಜವಾದ ಭೌತಿಕ ಪ್ರಪಂಚದೊಂದಿಗಲ್ಲ, ಆದರೆ ಅವು ಇರುವುದು ಮನಸ್ಸಿನಲ್ಲಿ ಕಾಣಿಸಿಕೊಳ್ಳುವ ಸರಳ ವಿಚಾರಗಳೊಂದಿಗೆ ಎಂದು ಲಾಕ್ ಹೇಳಿದಾಗ ಗಹನವಾದ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ, ಆತಂಕಕಾರಿ ಪರಿಣಾಮಗಳು ತಲೆದೋರುತ್ತವೆ. ಭೌತಿಕ ಪ್ರಪಂಚದ ನೇರ ಅನುಭವ ನಮಗೆ ಸಾಧ್ಯವಿಲ್ಲವಿದ್ದರೆ, ಅದು ಇದೆ ಎನ್ನುವುದಕ್ಕೆ ಆಧಾರವೇನು ? ಇದಕ್ಕೆ ಲಾಕ್‌ನ ಉತ್ತರ ನಮ್ಮ ಮನಸ್ಸಿನಲ್ಲಿ ಸರಳ ವಿಚಾರಗಳು ಇರುವುದರಿಂದ ಅವಕ್ಕೆ ಕಾರಣೀಭೂತವಾಗುವ ಭೌತಿಕ ಪದಾರ್ಥಗಳು ಇವೆ ಎಂದು ನಾವು ಅನುಮಾನಿಸಬೇಕು. ಆದರೆ ಅನುಮಾನವು ಎಂದೂ ಅನುಭವವಾಗಲಾರದು. ಹಾಗಾಗಿ ಭೌತಿಕ ಪ್ರಪಂಚವು ತಿಳುವಳಿಕೆಗೆ ಮೀರಿದ ಅಸ್ತಿತ್ವವಾಗಿಯೇ ಉಳಿಯುತ್ತದೆ. ಲಾಕ್‌ನ ಜ್ಞಾನಮೀಮಾಂಸೆಯಲ್ಲಿಯ ಈ ತಾರ್ಕಿಕ ತೊಂದರೆಗಳ ಲಾಭ ಪಡೆದುಕೊಂಡು ಬಿಷಪ್ ಬಾರ್ಕ್‌ಲಿ ಮತ್ತು ಡೇವಿಡ್ ಹ್ಯೂಮ್‌ರು ಎರಡು ಭಿನ್ನ ಭಿನ್ನ ಸಿದ್ಧಾಂತಗಳನ್ನು ಮಾಡಿದರು. ಭೌತಿಕ ಪದಾರ್ಥಗಳೊಂದಿಗೆ ನಮಗೆ ನೇರ ಅನುಭವವಿಲ್ಲದಿದ್ದರೆ, ಅನುಭವನೇ ನಿಜವಾಗಿಯೂ ಇರುವುದು ಎಂದು ಏಕೆ ಹೇಳಬಾರದು ? ಒಂದು ವೇಳೆ ಭೌತದ್ರವ್ಯ(matter)ವಿದ್ದರೂ ಅದರ ಅಸ್ತಿತ್ವದ ಅರಿವು ಇಂದ್ರಿಯಾನುಭವದಿಂದ ಮಾತ್ರವೇ ಸಾಧ್ಯವಾದ್ದರಿಂದ, "ಅಸ್ತಿತ್ವವು ಅನುಭವವಾಗಿದೆ" (*Esse est Percipi*) ಎನ್ನುವ ಸೂತ್ರ ಸಮಂಜಸವಾಗುತ್ತದೆಂದು ಬಾರ್ಕ್‌ಲಿ ವಾದಿಸಿದ. ಭೌತದ್ರವ್ಯದ ಸ್ವತಂತ್ರ ಅಸ್ತಿತ್ವದಲ್ಲಿ ನಂಬಿಕೆಯನ್ನಿಟ್ಟಿದ್ದ ಲಾಕ್‌ನ ವಾದಗಳನ್ನೇ ತಾರ್ಕಿಕವಾಗಿ ಉಪಯೋಗಿಸಿಕೊಂಡು ಭೌತದ್ರವ್ಯದ ಅಸ್ತಿತ್ವವನ್ನೇ ನಿರಾಕರಿಸಿದ ಬಾರ್ಕ್‌ಲಿಯ ಸಿದ್ಧಾಂತವು ಆಧುನಿಕ ವೈಚಾರಿಕತೆಯಲ್ಲಿ ಒಂದು ಮಹತ್ವದ ಹೆಜ್ಜೆಯಾಗುತ್ತದೆ. ಏಕೆಂದರೆ ಬಾರ್ಕ್‌ಲಿಯ ಸಿದ್ಧಾಂತವು ಸಾಮಾನ್ಯ ಭೌತಿಕವಾದಿ (materialists) ಗಳ, ವೈಜ್ಞಾನಿಕ ಭೌತಿಕವಾದಿಗಳ ಮತ್ತು ಭೌತ

ದ್ರವ್ಯದ ಮೂಲಭೂತ ಸತ್ಯತೆಯನ್ನೇ ತಮ್ಮ ಮುಖ್ಯ ಬಂಡವಾಳವಾಗಿ ಮಾಡಿಕೊಂಡಿರುವ ಭಾರತೀಯ ದರ್ಶನದ ಚಾರ್ವಾಕರ ಮತ್ತು ಮಾರ್ಕ್ಸ್‌ವಾದಿಗಳ ಡೈಲೆಕ್ಟಿಕಲ್ ಮೇಟಿರಿಯಾಲಿಸಂ ಸಿದ್ಧಾಂತಗಳನ್ನು ನೇರವಾಗಿ ಮುಖಾಮುಖಿ ಮಾಡುತ್ತದೆ. ಮಾರ್ಕ್ಸ್ ಮತ್ತು ಲೆನಿನ್‌ರು ತಮ್ಮ ದಾರ್ಶನಿಕ ಬರಹಗಳಲ್ಲಿ ಮುಖ್ಯವಾಗಿ ಖಂಡಿಸಲು ಹೆಣಗಾಡುವುದು ಬಾರ್ಕ್‌ಲಿಯಂತಹ ವ್ಯಕ್ತಿನಿಷ್ಠ ಅನುಭವವಾದಿಗಳೊಂದಿಗೆ ಎಂಬುದನ್ನು ಗಮನಿಸಿದರೆ ಬಾರ್ಕಲಿ ಪ್ರತಿಪಾದಿಸುವ ಇಂದ್ರಿಯಾನುಭವ ವಾದವು ಆಧುನಿಕ ವೈಚಾರಿಕತೆಗೆ ಎಷ್ಟು ಮಹತ್ವದೆಂಬುದನ್ನು ತಿಳಿಯಬಹುದು. ಬಾರ್ಕ್‌ಲಿಯ ವಾದವನ್ನು ಖಂಡಿಸುವುದಕ್ಕೋಸ್ಕರ ಪ್ರಸಿದ್ಧ ಇಂಗ್ಲಿಷ್ ಚಿಂತನಕಾರ ಸ್ಯಾಮುಯಲ್ ಜಾನ್‌ಸನ್ ತನ್ನ ಕಾಲಿನಿಂದ ಜೋರಾಗಿ ಒಂದು ಕಲ್ಲುಬಂಡೆಯನ್ನು ಒದ್ದನಂತೆ — ಕಲ್ಲೆಂಬ ಭೌತಿಕ ವಸ್ತು ಇದೆ ಎಂದು ತೋರಿಸುವುದಕ್ಕಾಗಿ !

ಲಾಕ್‌ನ ಪ್ರಪಂಚದ ಪರೋಕ್ಷಾನುಭವ ವಾದದಿಂದ ಇನ್ನೊಂದು ಮಹತ್ವದ ಪರಿಣಾಮ ಉಂಟಾಗುತ್ತದೆ. ಅದೆಂದರೆ ಭೌತಿಕ ಪ್ರಪಂಚದ ನೇರವಾದ ಅನುಭವ (direct experience) ಸಾಧ್ಯವಿಲ್ಲದಿದ್ದರೆ, ತಾರ್ಕಿಕವಾಗಿ ಆಲೋಚಿಸಿದರೆ, ಬಹಿರಂಗ ಪ್ರಪಂಚವಿದೆಯೆಂಬ ತಮ್ಮ ಅನಿಸಿಕೆ ಕೇವಲ ನಂಬಿಕೆ (belief) ಯಾಗುತ್ತದೆ. ದೇವರ ಮತ್ತು ಆತ್ಮದ ಅಸ್ತಿತ್ವದ ಬಗ್ಗೆ ನಮಗಿರುವ ನಂಬಿಕೆಗೂ ಮತ್ತು ಬಹಿರಂಗ ಪ್ರಪಂಚವಿದೆ ಎಂಬ ಅನಿಸಿಕೆಗೂ ತಾರ್ಕಿಕವಾಗಿ ಯಾವ ವ್ಯತ್ಯಾಸವೂ ಇಲ್ಲ. ಇಲ್ಲಿ ಒಂದು ಮುಖ್ಯ ಸಂಗತಿಯನ್ನು ಗಮನಿಸಬೇಕು. ತಮ್ಮ ದೈನಂದಿನ ವ್ಯಾವಹಾರಿಕ (practical) ಬದುಕಿನ ದೃಷ್ಟಿಯಿಂದ ಬಹಿರಂಗ ಪ್ರಪಂಚ ಇದೆಯೆಂಬ ಅನಿಸಿಕೆ ಅಥವಾ ನಂಬಿಕೆ ತಪ್ಪಲ್ಲ. ಆದರೆ ಸತ್ಯವೇನು ? ಎಂಬ ವೈಚಾರಿಕ ದೃಷ್ಟಿಯಿಂದ ಅನಿಸಿಕೆ ಅಥವಾ ನಂಬಿಕೆಗಳು ಅತಾರ್ಕಿಕ.

ದೇವರು ಮತ್ತು ಆತ್ಮಗಳ ಅಸ್ತಿತ್ವವನ್ನು ನಿರಾಕರಿಸುವ ಅಪ್ಪಟ ಭೌತವಾದಿಗಳು ಮತ್ತು ನಾಸ್ತಿಕರು, ಡೇವಿಡ್ ಹ್ಯೂಮ್‌ನು ಬಹಿರಂಗ ಪ್ರಪಂಚದ ಅಸ್ತಿತ್ವದ ಬಗ್ಗೆ ನಮಗಿರುವ ಅನಿಸಿಕೆ ಕೇವಲ ನಂಬಿಕೆ ಎಂದು ಧೈರ್ಯವಾಗಿ ಸಾರುವಂತಾಗಬೇಕು. ಹ್ಯೂಮ್‌ನ ಸಂದೇಹ ವಾದವನ್ನು ಮುಂದಿನ ಪ್ರಬಂಧದಲ್ಲಿ ಚರ್ಚಿಸಲಾಗುವುದರಿಂದ ಇಲ್ಲಿ ಅವನ ವಿಚಾರವನ್ನು ಹೆಚ್ಚಾಗಿ ಹೇಳುವುದಿಲ್ಲ. ಭೌತವಾದಿಗಳು ಮತ್ತು ನಾಸ್ತಿಕರು ಹ್ಯೂಮ್‌ನ ಸಂದೇಹ ವಾದವನ್ನು ಏಕೆ ಗಂಭೀರವಾಗಿ ತೆಗೆದುಕೊಂಡಿಲ್ಲ ಎಂಬುದು ಆಧುನಿಕ ವೈಚಾರಿಕತೆಯ ಒಂದು ವಿಪರ್ಯಾಸ. ಮುಕ್ತ ವೈಚಾರಿಕತೆಗೆ ಹ್ಯೂಮ್‌ನ ಸಿದ್ಧಾಂತಗಳು ಎಷ್ಟು ಅವಶ್ಯವೆಂಬುದನ್ನು ಇನ್ನೊಂದು ಪ್ರಬಂಧದಲ್ಲಿ ವಿವೇಚಿಸಲಾಗುವುದು.

ಇಂದ್ರಿಯಾನುಭವ ವಾದದ ಇನ್ನೊಂದು ತಾತ್ವಿಕವಾದವೆಂದರೆ ಪ್ರತ್ಯಕ್ಷವೊಂದೇ ಪ್ರಮಾಣವೆಂಬ ಚಾರ್ವಾಕರ ಜ್ಞಾನಮೀಮಾಂಸೆಯ ಸಿದ್ಧಾಂತ. ಹೆಚ್ಚು ಕಡಿಮೆ ಇದೇ ಜ್ಞಾನಮೀಮಾಂಸೆಯ ಸಿದ್ಧಾಂತವನ್ನು ಮುಂದಿಡುವ ಹ್ಯೂಮ್‌ನ ಸಂದೇಹ

ವಾದಕ್ಕೂ ಮತ್ತು ಚಾರ್ವಾಕರ ಭೌತವಾದಕ್ಕೂ ಮತ್ತು ಸಂತೋಷವಾದಕ್ಕೂ ಎಷ್ಟ ವ್ಯತ್ಯಾಸ? ಭಾರತೀಯ ದರ್ಶನದಲ್ಲಿ "ಪ್ರಮಾಣ" ಪದವು ಜ್ಞಾನಮೀಮಾಂಸೆಯ ದೃಷ್ಟಿಯಿಂದ ಅತ್ಯಂತ ಮಹತ್ವದ್ದಾಗಿದೆ. ಎರಡು ಮಹತ್ವದ ಅರ್ಥಗಳನ್ನೊಳಗೊಂಡಿದೆ. ಯಾವುದು ಜ್ಞಾನ ಅಥವಾ ಸತ್ಯದ (ಪ್ರಮಾ) ಸಾಧನವೋ ಮತ್ತು ಯಾವುದು ನೈಜ ಜ್ಞಾನದ ಮಾಪಕ (measure) ವೋ ಅದು ಪ್ರಮಾಣ. ಪ್ರತ್ಯಕ್ಷ, ಅನುಮಾನ ಶಬ್ದ ಮತ್ತು ಉಪಮಾನಗಳು ಸಾಮಾನ್ಯವಾಗಿ ಜ್ಞಾನದ ಪ್ರಮಾಣಗಳೆಂದು, ಭಾರತೀಯ ದರ್ಶನದಲ್ಲಿ ಮಾನ್ಯ ಮಾಡಲಾಗಿದೆ. ಒಂದೊಂದು ಪ್ರಮಾಣಕ್ಕೂ ಒಂದೊಂದು ಕ್ಷೇತ್ರ ವಿಷಯವಾಗುತ್ತದೆ. ಉದಾಹರಣೆಗೆ ವ್ಯಾವಹಾರಿಕ (empirical) ಜಗತ್ತು ಪ್ರತ್ಯಕ್ಷ ಪ್ರಮಾಣಕ್ಕೆ ವಿಷಯವಾಗುತ್ತದೆ. ಜಗತ್ತಿನಲ್ಲಿರುವ ಬಣ್ಣಗಳು, ರುಚಿಗಳು, ಸ್ಪರ್ಶಗಳು, ಶಬ್ದಗಳು (sounds) ಮತ್ತು ವಾಸನೆಗಳು ಪ್ರತ್ಯಕ್ಷದ ವಿಷಯಗಳು. ಇಂದ್ರಿಯ ಸನ್ನಿಕರ್ಷವಿಲ್ಲದೆ ಮೇಲಿನ ವಿಷಯಗಳ ಬಗ್ಗೆ ಯಾವ ಜ್ಞಾನವೂ ಸಾಧ್ಯವಿಲ್ಲ. ವ್ಯಾವಹಾರಿಕ ಪ್ರಪಂಚದಲ್ಲಿರುವ ವಸ್ತುಗಳ ಮತ್ತು ಘಟನೆಗಳ ಬಗ್ಗೆ ಅನುಮಾನ ಅಥವಾ ಉಪಮಾನಗಳಿಂದಲೂ ಜ್ಞಾನ ಸಂಪಾದಿಸಬಹುದು. ಆದರೆ ಪ್ರತ್ಯಕ್ಷಾನುಭವವಾಗದೇ ತಿಳಿದ ವಿಷಯದಿಂದ ತಿಳಿಯದ ವಿಷಯದ ಬಗ್ಗೆ ಅನುಮಾನ ಸಾಧ್ಯವೇ ಇಲ್ಲ.

ಪ್ರತ್ಯಕ್ಷ ಪ್ರಮಾಣದ ವ್ಯಾಪ್ತಿ ವ್ಯಾವಹಾರಿಕ ಅಥವಾ ಭೌತಿಕ ಪ್ರಪಂಚಕ್ಕೆ ಮಾತ್ರ ಸೀಮಿತವಾಗಿದೆ ಎನ್ನುವುದನ್ನು ತೀವ್ರ ಇಂದ್ರಿಯಾನುಭವವಾದಿಗಳನ್ನು ಬಿಟ್ಟರೆ ಎಲ್ಲರೂ ಒಪ್ಪುತ್ತಾರೆ. ಭಾರತೀಯ ದರ್ಶನದ ಪ್ರಸಿದ್ಧ ನಾಸ್ತಿಕ ಮತ್ತು ಅವೈದಿಕ ದರ್ಶನವಾದ ಚಾರ್ವಾಕಮತದ ಪ್ರಕಾರ ಪ್ರತ್ಯಕ್ಷವೊಂದೇ ಜ್ಞಾನದ ಪ್ರಮಾಣ. ಇಂದ್ರಿಯ ಮತ್ತು ಅತೀಂದ್ರಿಯ ವಿಷಯಗಳೆರಡರ ಜ್ಞಾನದ ಪ್ರಮಾಣವೂ ಅದೇ. ಪ್ರತ್ಯಕ್ಷವು ಅತೀಂದ್ರಿಯವಾದುದನ್ನು ತೋರಿಸುವುದಿಲ್ಲವಾದ್ದರಿಂದ, ಅಂತಹ ಸತ್ಯವು ಅಸ್ತಿತ್ವದಲ್ಲಿಲ್ಲ. ಡೇವಿಡ್ ಹ್ಯೂಮ್‌ನು ಚಾರ್ವಾಕರ ಅಭಿಪ್ರಾಯವನ್ನೇ ಇನ್ನೊಂದು ರೀತಿಯಲ್ಲಿ ಹೇಳುತ್ತಾನೆ. ಅವನ ಪ್ರಕಾರ ದೇವರು, ಆತ್ಮ ಮುಂತಾದ ಅತೀಂದ್ರಿಯ ವಿಷಯಗಳ ಬಗ್ಗೆ ನಮ್ಮಲ್ಲಿ ಯಾವ ಐಂದ್ರಿಕ ವೃತ್ತಿ (sensible impressions) ಗಳು ಇಲ್ಲದಿರುವುದರಿಂದ, ಅವು ಅಸ್ತಿತ್ವದಲ್ಲಿವೆ ಎಂಬುದು ಅರ್ಥಹೀನ. ಇಂದ್ರಿಯಗಳಿಗೆ ಅಥವಾ ಇಂದ್ರಿಯಾನುಭವಕ್ಕೆ ವ್ಯಕ್ತಿನಿಷ್ಠ (subjective) ಮತ್ತು ವಸ್ತುನಿಷ್ಠ ಮಿತಿಗಳು ಇರಬಹುದು ಎಂಬುದನ್ನು ಚಾರ್ವಾಕರು ಪರಿಗಣಿಸುವುದಿಲ್ಲ. ಅಥವಾ ಕ್ಯಾಂಟನು ಹೇಳಿದಂತೆ "ನಾನು ಜ್ಞಾನದ (pure reason) ವ್ಯಾಪ್ತಿಯನ್ನು ಶ್ರದ್ಧೆಗೆ ಅವಕಾಶ ಮಾಡಿಕೊಡುವುದಕ್ಕಾಗಿ ಪರಿಮಿತಿಗೊಳಿಸಿದ್ದೇನೆ" ("I have limited knowledge in order to make room for faith") ಚಾರ್ವಾಕರು ಪ್ರತ್ಯಕ್ಷದ ಮಿತಿಗಳನ್ನು ಅರಿತುಕೊಳ್ಳದೆ ಶಾಸ್ತ್ರಾಂಧರಂತೆ (dogmatic) ದೇವರು ಆತ್ಮ ಮುಂತಾದವುಗಳನ್ನು ನಿರಾಕರಿಸಿದ್ದಾರೆ. ವೇದಗಳ ಪ್ರಾಮಾಣ್ಯವನ್ನು ಕುರುಡಾಗಿ

ನಂಬುವವರಿಗಿಂತ ಪ್ರತ್ಯಕ್ಷದ ಏಕಮೇವ ಪ್ರಾಮಾಣ್ಯವನ್ನು ಒಪ್ಪಿಕೊಳ್ಳುವ ಚಾರ್ವಾಕರು ಮತ್ತು ಲೋಕಾಯತರು ಯಾವ ರೀತಿಯಲ್ಲಿಯೂ ವೈಚಾರಿಕರದ.

ಆದರೆ ಇಂದ್ರಿಯಾನುಭವವಾದಿಗಳು ಶುದ್ಧ ವೈಚಾರಿಕತೆಯನ್ನೋ ಅಥವಾ ಅಂಧ ವೈಜ್ಞಾನಿಕತೆಯನ್ನೋ (ಅಂದರೆ ವೈಚಾರಿಕತೆ ಮತ್ತು ವೈಜ್ಞಾನಿಕತೆಗಳು ವಿಮರ್ಶಾತೀತ ಎನ್ನುವ ಅರ್ಥದಲ್ಲಿ) ಪ್ರತಿಪಾದಿಸುವವರ ಮುಗ್ಧತೆಯನ್ನು ಅಲುಗಾಡಿಸುವ ಮಹತ್ವದ ಕೆಲಸ ಮಾಡಿದ್ದಾರೆ. ಡೇವಿಡ್ ಹ್ಯೂಮ್‌ನು ಈ ಕೆಲಸವನ್ನು ಅತ್ಯಂತ ಸಮರ್ಥ ರೀತಿಯಲ್ಲಿ ನಿರ್ವಹಿಸಿದ್ದಾನೆನ್ನಬಹುದು. ಡೇವಿಡ್ ಹ್ಯೂಮ್‌ನು ಸಂದೇಹವಾದಿಯಾದ್ದರಿಂದ, ಅವನ ತತ್ವಶಾಸ್ತ್ರದ ಅಧ್ಯಯನ ವೈಚಾರಿಕತೆಯ ಅತೀವ ಅವಶ್ಯ.

ಡೇಕಾರ್ಟನಿಂದ ಮೊದಲುಗೊಂಡು ಇಮ್ಯಾನ್ಯುಅಲ್ ಕಾಂಟನವರೆಗೆ ಆಗಿಹೋದ ದಾರ್ಶನಿಕ ಚಿಂತನೆಯನ್ನು ವ್ಯಾಪಕವಾಗಿ ಮೂರು ಭಾಗಗಳಾಗಿ ವಿಭಜಿಸಬಹುದು. ಡೇಕಾರ್ಟ, ಸ್ಪಿನೋಜ, ಲೈಬ್ನಿಟ್ಸ್ ಮುಂತಾದವರು ಬೆಳೆಸಿಕೊಂಡು ಬಂದ ಬುದ್ಧಿಪ್ರಮಾಣವಾದ ಒಂದಾದರೆ, ಬ್ರಿಟಿಷ್ ದಾರ್ಶನಿಕರಾದ ಲಾಕ್, ಬಾರ್ಕ್ಲಿ ಮೊದಲಾದವರು ಪುಷ್ಟಿಗೊಳಿಸಿದ ವಾಸ್ತವವಾದ ಹಾಗೂ ಹ್ಯೂಮ್‌ನಿಂದ ಮೊದಲಾದ ಸಂದೇಹವಾದ ಇವು ಇನ್ನೆರಡು. ಬುದ್ಧಿಪ್ರಮಾಣವಾದದ ಪ್ರಕಾರ ವಿಶ್ವದ ಅಸ್ತಿತ್ವವನ್ನು ನಾವು ನಮ್ಮ ಬುದ್ಧಿ ಮತ್ತು ಇಂದ್ರಿಯಗಳ ಮೂಲಕ ತಿಳಿದುಕೊಳ್ಳುತ್ತೇವೆ. ಆದ್ದರಿಂದ ನಮ್ಮ ವಿವೇಕದ ನಿರ್ದೇಶನಕ್ಕೊಳಪಟ್ಟಂತೆ ಬಾಹ್ಯವಾಗಿ ವಿಶ್ವವಿದೆ ಎಂದಂತಾಯಿತು. ನಮ್ಮ ಬುದ್ಧಿಯಲ್ಲಿ ಪ್ರತಿಬಿಂಬಿತವಾಗದ ವಿಶ್ವ ಹೇಗಿದೆಯೆಂಬುದು ನಮಗೆ ತಿಳಿಯದು. ವಿಶ್ವದ ನೈಜ ಸ್ವರೂಪ ಮೂಲತಃ ಮಾನವನ ಬುದ್ಧಿಯಿಂದ ನಿರ್ದಿಷ್ಟಗೊಳ್ಳುತ್ತದಾದ್ದರಿಂದ ಬುದ್ಧಿಪ್ರಮಾಣವಾದಿಗಳು ವಾಸ್ತವಿಕ ಜಗತ್ತಿನ ಅಸ್ತಿತ್ವವನ್ನು ನಿರಾಕರಿಸಿ ಬುದ್ಧಿಯ ಹಿರಿಮೆಯನ್ನು ಸ್ಥಾಪಿಸಿದರು.

ವಾಸ್ತವವಾದಿಗಳ ಪ್ರಕಾರ ವಾಸ್ತವಿಕ ಜಗತ್ತು ಅತ್ಯಂತ ಸತ್ಯವೆನಿಸಿದ್ದು ಅದು ಮಾನವನ ಅರಿವಿಗೆ ವಸ್ತುವಾಗುತ್ತದೆ. ಮಾನವನ ಬುದ್ಧಿ ತಾನು ಕಂಡದ್ದನ್ನು ಕಂಡಂತೆ ಪ್ರತಿಬಿಂಬಿಸುವ ಸೂಕ್ಷ್ಮಗ್ರಾಹಿಯಾದ ಒಂದು ಮಾಧ್ಯಮವಷ್ಟೆ. ತಾನು ಸ್ವೀಕರಿಸಿದ ಅನುಭವಗಳನ್ನು ಬೇಕೆಂದಾಗ ಸ್ಮರಿಸುವ ಶಕ್ತಿಯೂ ಮಾನವನ ಬುದ್ಧಿಗಿದೆ. ಆದರೆ ಬಾಹ್ಯದಲ್ಲೇ ಇಲ್ಲದ ವಾಸ್ತವಿಕ ಜಗತ್ತನ್ನು ತಾನೇ ಸೃಷ್ಟಿಸುವ ಶಕ್ತಿ ಮಾನವನ ಬುದ್ಧಿಗೆ ಎಂದಿಗೂ ಇಲ್ಲ, ಆದ್ದರಿಂದಲೇ ಬುದ್ಧಿ ವಾಸ್ತವಿಕ ಜಗತ್ತಿಗೆ ಸೀಮಿತಗೊಂಡು ಕೇವಲ ವಸ್ತುನಿಷ್ಠವಾಗಿರುತ್ತದೆ ಎಂಬುದು ಇವರ ಮತ.

(ಕನ್ನಡ ವಿಶ್ವಕೋಶ, ಸಂಪುಟ ಒಂಭತ್ತು, ಪು. ೯೫–೯೬)

ಕೆ. ಕೇಶವಮೂರ್ತಿ

ಪುರಾಣೇತಿಹಾಸಗಳಲ್ಲಿ ಯೋಗ

ಯೋಗೇನ ಚಿತ್ತಸ್ಯ ಪದೇನ ವಾಚಾಂ |
ಮಲಂ ಶರೀರಸ್ಯತು ವೈದ್ಯಕೇನ |
ಯೋಪಾಕರೋತ್ತಂ ಪ್ರವರಂ ಮುನೀನಾಂ |
ಪತಂಜಲಿಂ ಪ್ರಾಂಜಲಿರಾನತೋಸ್ಮಿ ||

[ಯೋಗದಿಂದ ಮನಸ್ಸಿನ ಚಾಂಚಲ್ಯವನ್ನೂ ವ್ಯಾಕರಣ ಶಾಸ್ತ್ರದಿಂದ ವಾಣಿಯ ಅಶುದ್ಧತೆಯನ್ನೂ ವೈದ್ಯಶಾಸ್ತ್ರದಿಂದ ಶರೀರದ ಮಲವೆಂಬ ವಾತಪಿತ್ತಾದಿ ದೋಷಗಳನ್ನೂ ನಿವಾರಣೆ ಮಾಡಿದ ಪತಂಜಲಿ ಮಹರ್ಷಿಗಳಿಗೆ ಅಂಜಲಿಬದ್ಧನಾಗಿ ನಮಸ್ಕರಿಸುತ್ತೇನೆ.]

'ಯೋಗ' ಶಬ್ದವು 'ಯುಜ್' ಎಂಬ ಸಂಸ್ಕೃತ ಧಾತುವಿನಿಂದ ಸಾಧಿತವಾಗಿದೆ. ಇದಕ್ಕೆ ಎರಡು ಅರ್ಥಗಳಿವೆ. (ಅ) "ಯುಜ-ಸಮಾಧೌ"—ಯೋಗವೆಂದರೆ 'ಸಮಾಧಿ' ಎಂದರ್ಥ. 'ಸಮಾಧಿ' ಎಂದರೆ ಚಿತ್ತದ ಏಕಾಗ್ರತೆ. (ಆ) "ಯುಜಿರ್ ಯೋಗೇ"— ಯೋಗವೆಂದರೆ ಸಂಯೋಗ, ಸೇರುವಿಕೆ ಅಥವಾ ಕೂಡುವಿಕೆ ಎಂದರ್ಥ. ಎಲ್ಲಿಗೆ ಸೇರುವುದು ? ನಾವು ಎಲ್ಲಿಂದ ಬಂದೆವೋ ಅಲ್ಲಿಗೆ. ಹಾಗಾದರೆ ನಾವು ಬಂದದ್ದೆಲ್ಲಿಂದ ? ಆ ಪರಮಾತ್ಮನಿಂದ. ನಾವೆಲ್ಲರೂ ಆ ಪರಮಾತ್ಮನ ಒಂದಂಶ. ಆದರೆ ಪರಮಾತ್ಮರಲ್ಲ. ಇದನ್ನು ಒಂದು ಉದಾಹರಣೆಯಿಂದ ಸಮರ್ಥಿಸಬಹುದು. ಸಮುದ್ರದ ನೀರನ್ನು ಜೊಗಸೆಯಲ್ಲಿ ಹಿಡಿಯೋಣ. ಜೊಗಸೆಯಲ್ಲಿರುವ ನೀರನ್ನೂ ಸಮುದ್ರದಲ್ಲಿರುವ ನೀರನ್ನೂ ವಿಶ್ಲೇಷಿಸಿದರೆ ಎರಡೂ ಒಂದೇ. ಆದರೆ ಜೊಗಸೆ ನೀರು ಸಮುದ್ರವಾಗುತ್ತದೆಯೇ ? ಖಂಡಿತ ಇಲ್ಲ. ಅದನ್ನು ಮತ್ತೆ ಸಮುದ್ರಕ್ಕೆ ಬಿಟ್ಟರೆ ಅದು ಸಮುದ್ರವಾಗುತ್ತದೆ. ಅಂತೆಯೇ ಆ ಪರಮಾತ್ಮನ ಒಂದಂಶವಾದ ನಾವು ಆ ಪರಮಾತ್ಮನನ್ನೇ ಸೇರಿದಾಗ ಮಾತ್ರ ಪರಮಾತ್ಮರಾಗುತ್ತೇವೆ. ಅದೇ ಜೀವನದ ಪರಮಗಂತವ್ಯ. ಅಂತಹ ಪರಮ ಪದವನ್ನು ಹೊಂದಲು ಇರುವ ಸಾಧನವೇ 'ಯೋಗ'.

ಯೋಗಸಾಹಿತ್ಯ ಉಪನಿಷತ್ತಿನಿಂದ ಪ್ರಾರಂಭವಾಗುತ್ತದೆ. ಯೋಗವೆಂದರೇನೆಂಬುದನ್ನು ಉಪನಿಷತ್ತು ಹೀಗೆ ಹೇಳಿದೆ. "ಆತ್ಮಾನಂ ಅಧಿಕೃತ್ಯ ಯೋಗಃ" ಅಂದರೆ

ಮನಸ್ಸನ್ನು ವಿಷಯಗಳಿಂದ ಸೆಳೆದು ಆತ್ಮದ ಕಡೆಗೆ ತಿರುಗಿಸುವುದೇ ಯೋಗ. ಯೋಗ ತ್ರಿಶಿಖ್ಯೋಪನಿಷತ್ತಿನಲ್ಲಿ "ಯೋಗಸ್ಸಮತಾವಸ್ಥಾ ಜೀವಾತ್ಮ ಪರಮಾತ್ಮನೋಃ" ಎಂದು ಹೇಳಿದೆ. ಅಂದರೆ ಜೀವಾತ್ಮನು ಪರಮಾತ್ಮನಲ್ಲಿ ಸಮರಸಗೊಳ್ಳುವುದೇ ಯೋಗ. ಶಾಂಡಿಲ್ಯೋಪನಿಷತ್ತಿನಲ್ಲಿ "ಜೀವಾತ್ಮ ಪರಮಾತ್ಮೈಕ್ಯಾವಸ್ಥಾ ಯೋಗಃ" ಎಂದಿದೆ. ಅಂದರೆ ಜೀವ ಬ್ರಹ್ಮರ ಐಕ್ಯವೇ ಯೋಗ. ದತ್ತಾತ್ರೇಯ ಸಂಹಿತೆಯಲ್ಲಿ "ಸರ್ವಚಿಂತಾ ಪರಿತ್ಯಾಗಾನ್ನಿಶ್ಚಿಂತಾ ಯೋಗ ಉಚ್ಯತೇ" ಎಂದು ಹೇಳಿದೆ. ಅಂದರೆ ಎಲ್ಲ ಚಿಂತೆಗಳನ್ನು ಬಿಟ್ಟು ನಿಶ್ಚಿಂತೆಯಿಂದಿರುವುದೇ ಯೋಗ. ಇವೆಲ್ಲವೂ ಉಪನಿಷತ್ತಿನ ಯೋಗ ಪರಿಭಾಷೆಗಳಾದರೆ ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಪರಮಾತ್ಮನು, "ಯೋಗಃ ಕರ್ಮಸು ಕೌಶಲಂ" ಎಂದಿದ್ದಾನೆ. ಅಂದರೆ ಬಂಧ ಸ್ವಭಾವವುಳ್ಳ ಕರ್ಮಗಳು ತಮ್ಮ ಸ್ವಭಾವವನ್ನು ಬಿಟ್ಟುಬಿಡುವಂತೆ ಮಾಡುವ ಕೌಶಲವೇ ಯೋಗ. ಅಲ್ಲದೆ "ಸಿದ್ಧ್ಯಸಿದ್ಧ್ಯೋಃ ಸಮೋ ಭೂತ್ವಾ ಸಮತ್ವಂ ಯೋಗ ಉಚ್ಯತೇ" ಎಂದು ಹೇಳಿದೆ. ಸಿದ್ಧಿ–ಅಸಿದ್ಧಿಗಳಲ್ಲಿ ಸಮರೂಪವಾಗಿರುವ ಚಿತ್ತ ಸಮಾಧಾನವೇ ಯೋಗ. "ದುಃಖ ಸಂಯೋಗ ವಿಯೋಗಂ ಯೋಗ ಸಂಜ್ಞಿತಂ" ದುಃಖ ಸಂಯೋಗವನ್ನು ದೂರ ಮಾಡುವ ಅವಸ್ಥಾ ವಿಶೇಷವೇ ಯೋಗ. "ಏಕತ್ವ ಭಾವನಾ ಏವ ಯೋಗಃ" ಅಂದರೆ ದ್ವಂದ್ವ ಸ್ವಭಾವವು ಅಳಿದು ಏಕತೆಯು ಅರಿವಾಗುವುದೇ ಯೋಗ. ಯೋಗಕ್ಕೆಂದೇ ಬರೆಯಲ್ಪಟ್ಟ 'ಪಾತಂಜಲ ಯೋಗದರ್ಶನ'ದಲ್ಲಿ "ಯೋಗಃ ಚಿತ್ತವೃತ್ತಿ ನಿರೋಧಃ" (೧–೨) ಎಂದು ಹೇಳಿದೆ. ಅಂದರೆ ಚಿತ್ತವೃತ್ತಿಗಳನ್ನು ನಿರೋಧಿಸುವುದೇ ಯೋಗ. "ಯೋಗಃ ತ್ರಯಮೇಕತ್ರ ಸಂಯಮಃ" (ಪಾತಂಜಲಯೋಗಸೂತ್ರ ೩–೪) ಅಂದರೆ ಧಾರಣ, ಧ್ಯಾನ, ಸಮಾಧಿಗಳಿಂದ ಕೂಡಿದ ಸಂಯಮವೇ ಯೋಗ. ವ್ಯಾಸಭಾಷ್ಯದಲ್ಲಿ "ಯೋಗಃ ಸಮಾಧಿಃ" ಎಂದಿದೆ. ಅಂದರೆ ಚಿತ್ತೈಕಾಗ್ರತೆಯೇ ಯೋಗ. ಹೀಗೆ ಯೋಗ ಶಬ್ದಕ್ಕೆ ಅನೇಕ ವ್ಯಾಖ್ಯಾನಗಳಿದ್ದರೂ ಒಟ್ಟಿನಲ್ಲಿ ಹೇಳುವುದಾದರೆ, "ಸಾಯುಜ್ಯ ಪರ್ಯವಸಾನಾರ್ಥೋ ಯೋಗಃ" ಎನ್ನಬಹುದು. ಅಂದರೆ ಸಾಯುಜ್ಯದಲ್ಲಿ ಕೊನೆಗೊಳಿಸುವುದೇ ಯೋಗ. ಇಂತಹ ಯೋಗದ ಉಲ್ಲೇಖನ್ನು ಪುರಾಣ ಹಾಗೂ ಇತಿಹಾಸಗಳಲ್ಲೇನಾದರೂ ಇವೆಯೇ ಎಂಬುದನ್ನು ಅವಲೋಕಿಸುವುದೇ ಈ ಲೇಖನದ ಮುಖ್ಯೋದ್ದೇಶ.

ಅಷ್ಟಾದಶ ಪುರಾಣಗಳಲ್ಲಿ ಶ್ರೇಷ್ಠತಮವಾದುದೆಂದು ಪ್ರಸಿದ್ಧಿ ಪಡೆದಿರುವ ಶ್ರೀಮದ್ಭಾಗವತದಲ್ಲಿ 'ಅಷ್ಟಾಂಗ ಯೋಗ'ದ ಪ್ರತ್ಯಕ್ಷ ವಿವೇಚನೆಯೂ ಹಾಗೂ ಪರೋಕ್ಷ ವರ್ಣನೆಯೂ ಕಂಡುಬರುತ್ತದೆ. ಇಲ್ಲಿ ವರ್ಣಿತವಾಗಿರುವ ಯೋಗವು ಔಪನಿಷದ ಯೋಗಕ್ಕೂ, ಹಾಗೂ ಪಾತಂಜಲ ಯೋಗಕ್ಕೂ ಮಧ್ಯವರ್ತಿಯಾದುದಾಗಿದೆ. ಇಲ್ಲಿ ಪ್ರತ್ಯಕ್ಷರೂಪವಾಗಿ ವರ್ಣಿಸಿರುವ ಯೋಗವು ಸ್ವತಂತ್ರ ಸಾಧನರೂಪವಾದದ್ದು. ಯೋಗದ ಅಷ್ಟಾಂಗಗಳಾದ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ ಹಾಗೂ ಸಮಾಧಿಗಳ ಸಂಕ್ಷಿಪ್ತ ವರ್ಣನೆಯು ಭಾಗವತದ ಏಕಾದಶ ಸ್ಕಂದದ ಹತ್ತೊಂಬತ್ತನೆಯ ಶ್ಲೋಕದಲ್ಲಿ ಸ್ವಲ್ಪಮಟ್ಟಿಗೆ ಲಭಿಸುತ್ತದೆ.

'ಯಮ'ದಲ್ಲಿ 'ಅಹಿಂಸಾ'ದಿ ದ್ವಾದಶ ಭೇದಗಳನ್ನೂ 'ನಿಯಮ'ದಲ್ಲಿ 'ಶೌಚಾ'ದಿ ದ್ವಾದಶ ಭೇದಗಳನ್ನೂ ಹೇಳಿದೆ. ಯೋಗಾಂಗದ 'ಆಸನ'ದ ಬಗ್ಗೆ ಹೀಗೆ ಹೇಳಿದೆ :

ಗೃಹಾತ್ ಪ್ರವ್ರಜಿತೋ ಧೀರಃ ಪುಣ್ಯತೀರ್ಥಜಲಾಪ್ಲುತಃ |
ಶುಚೌ ವಿವಿಕ್ತ ಆಸೀನಃ ವಿಧಿವತ್ ಕಲ್ಪಿತಾಸನೇ || ೨೧-೧೬
ಶುಚೌದೇಶೆ ಪ್ರತಿಷ್ಠಾಪ್ಯ ವಿಜಿತಾಸನ ಆಸನಂ |
ತಸ್ಮಿನ್ ಸ್ವಸ್ತಿ ಸಮಾಸೀನ ಋಜುಕಾಯಃ ಸಮಭ್ಯಸೇತ್ || ೩-೨೮-೮

ಸಾಧಕನು ಶುಚಿರ್ಭೂತವಾದ ಸ್ಥಳದಲ್ಲಿ ದೇಹವನ್ನು ನೆಟ್ಟಗೆ ಇರಿಸಿ ವಿಧಿವತ್ತಾದ ಆಸನದಲ್ಲಿ ಕುಳಿತುಕೊಳ್ಳಬೇಕು.

ಯೋಗದ ನಾಲ್ಕನೇ ಹಂತವಾದ 'ಪ್ರಾಣಾಯಾಮ'ವನ್ನು ಪರಿಚಯಿಸುವ ಶ್ಲೋಕ ಹೀಗಿದೆ :

ಅಭ್ಯಸೇನ್ಮನಸಾ ಶುದ್ಧಾ ತ್ರಿವೃದ್ಬ್ರಹ್ಮಾಕ್ಷರಂ ಪರಂ |
ಮನೋಯಚ್ಛೇಜ್ಜಿತಶ್ವಾಸೋ ಬ್ರಹ್ಮಬೀಜಮವಿಸ್ಮರ್ಣ ||

'ಪ್ರತ್ಯಾಹಾರ'ದ ವಿಷಯವು ಹನ್ನೊಂದನೆಯ ಅಧ್ಯಾಯದ ಈ ಶ್ಲೋಕದಲ್ಲಿ ಉಕ್ತವಾಗಿದೆ.

ಇಂದ್ರಿಯಾಣೀಂದ್ರಿಯಾರ್ಥೇಭ್ಯೋ ಮನಸಾಕೃಷ್ಯ ತನ್ಮನಃ |
ಬುಧ್ಯಾ ಸಾರಥಿನಾ ಧೀರಃ ಪ್ರಣಯೇನ್ಮಯಿ ಸರ್ವತಃ ||

ಇದರ ಮುಂದಿನ ಹಂತವಾದ 'ಧಾರಣೆ'ಯನ್ನು ಎರಡು ಬಗೆಯಲ್ಲಿ ಉಲ್ಲೇಖಿಸಿದೆ. ಮೊದಲನೆಯದು 'ವೈರಾಜಧಾರಣ', ಎರಡನೆಯದು 'ಅಂತರ್ಯಾಮಿ ಧಾರಣ'. ಇವೆರಡರ ಸೂಕ್ಷ್ಮ ಪರಿಚಯವನ್ನೂ ಸಹ ಅಲ್ಲಲ್ಲಿ ಕೊಟ್ಟಿದೆ. 'ಧ್ಯಾನ'ದ ವರ್ಣನೆ ತೃತೀಯ ಸ್ಕಂದದ ಇಪ್ಪತ್ತೆಂಟನೆಯ ಅಧ್ಯಾಯದಲ್ಲಿ ಬಂದಿದೆ. ಇಷ್ಟದೈವವನ್ನು ಅಡಿಯಿಂದ ಮುಡಿಯವರೆಗೆ ಸಂಭಾವಿಸಬೇಕೆಂಬುದನ್ನು "ಪಾದಾದಿಯಾವತ್ ಹಸಿತಂ ಗದಾಭೃತಃ" ಎಂದು ಹೇಳಿದೆ. ಅಲ್ಲದೆ

ಧ್ಯಾನಾಯನಂ ಪ್ರಹಸಿತಂ ಬಹುಲಾಧರೋಷ್ಠ
ಭಾಸಾರುಣಾಯಿತ ತನುದ್ವಿಜಕುಂದ ಪಂಕ್ತಿ |
ಧ್ಯಾಯೇತ್ ಸ್ವದೇಹಕುಹರೇಽವಸಿತಸ್ಯ
ವಿಷ್ಣೋರ್ಭಕ್ತ್ಯಾರ್ದ್ರಯಾರ್ಪಿತಮನಾ ನ ಪೃಥಗ್ ದಿದೃಕ್ಷೇತ್ ||

ಇತ್ಯಾದಿ ಶ್ಲೋಕಗಳು ಧ್ಯಾನದ ಬಗ್ಗೆ ತಿಳಿಸುತ್ತವೆ.

ಕೊನೆಯ ಅಂಗವಾದ ಸಮಾಧಿಯ ಬಗೆಗೆ ಹೇಳಿರುವ "ಏವಂ ಹರೌ ಭಗವತಿ ಪ್ರತಿಲಬ್ಧಭಾವಃ" ಮೊದಲಾದ ಶ್ಲೋಕಗಳನ್ನು ತೃತೀಯ ಸ್ಕಂದದಲ್ಲಿ ನೋಡಬಹುದು.

ಇನ್ನು ಯೋಗಶಾಸ್ತ್ರದ ಕ್ರಿಯೆಯ ಪರೋಕ್ಷ ವರ್ಣನೆಯ ಬಗ್ಗೆ ಎರಡು ಮಾತು. ನಾರದರ ಬಾಲ್ಯ ಕಥಾ ಪ್ರಸಂಗವನ್ನು ವರ್ಣಿಸುವಾಗ ಅನಾಥರಾದ ಅವರು ಋಷಿಮುನಿ

ಗಳಿಂದ ಸಹಿತ ಭಗವತ್ಸಾಕ್ಷಾತ್ಕಾರದ ವಿಧಿಯನ್ನು ವಿವರಿಸಿ ಧ್ಯಾನ, ಧಾರಣಗಳಿಂದ ಸಫಲರಾದ ಕಥಾನಕವಿದೆ. ಇಲ್ಲಿ 'ಮನಃಪ್ರಣಿಧಾನ' ಎಂಬ ಯೋಗಶಾಸ್ತ್ರದ ಶಬ್ದದ ಬಳಕೆಯು ಹೆಚ್ಚು ಮಹತ್ವದ್ದಾಗಿದೆ.

ನಾರದರ ಉಪದೇಶದಂತೆ ಭಗವಾನ್ ವೇದವ್ಯಾಸರು ಸರಸ್ವತೀ ನದಿಯ ದಡದ ಮೇಲೆ ಘೋರವಾದ ತಪಸ್ಸನ್ನಾಚರಿಸಿ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಂಡ ಸಂದರ್ಭದಲ್ಲಿ ಯೋಗಾಂಗಗಳಾದ ಆಸನ ಹಾಗೂ ಮನಃಪ್ರಣಿಧಾನದ ಸಂಗತಿಯನ್ನು ಕಾಣಬಹುದು.

ಇಚ್ಛಾಮರಣಿ ಭೀಷ್ಮರು ದೇಹತ್ಯಾಗ ಮಾಡುವಾಗ ಕೊನೆಯುಸಿರನ್ನು ಒಳಕ್ಕೆ ಎಳೆದು ಬ್ರಹ್ಮರಂಧ್ರದ ಮೂಲಕ ಪ್ರಾಣಬಿಟ್ಟರು ಎಂಬ ವರ್ಣನೆ ಯೋಗಶಾಸ್ತ್ರೋಕ್ತವಾದ ಶರೀರತ್ಯಾಗ ವಿಧಿಯೇ ಆಗಿದೆ. ಕಪಿಲ ಮಹರ್ಷಿಗಳ ಮಾತೆಯಾದ ದೇವಹೂತಿಯ ಶರೀರತ್ಯಾಗ ಸಂದರ್ಭದಲ್ಲೂ ಇದೇ ರೀತಿಯ ವರ್ಣನೆಯಿದೆ.

ಭಾಗವತದ ಚತುರ್ಥ ಸ್ಕಂದದಲ್ಲಿ ದಕ್ಷನಿಂದ ಅಪಮಾನಿತಳಾದ ಸತೀದೇವಿಯು ದೇಹತ್ಯಾಗ ಮಾಡಿದ ಯೋಗಶಾಸ್ತ್ರೀಯ ವರ್ಣನೆ ಕಂಡುಬಂದಿದೆ. ಪ್ರಥಮತಃ ಆಕೆಯು ಆಸನಬದ್ಧಳಾಗಿ ಕುಳಿತು ಪ್ರಾಣವಾಯುವನ್ನು ಸ್ತಂಭಿಸಿ ಶರೀರಚಲನೆಯನ್ನು ನಿಲ್ಲಿಸಿ, ಕ್ರಮೇಣ ಮಣಿಪೂರಾದಿ ಚಕ್ರಗಳನ್ನು ಜಾಗೃತಗೊಳಿಸಿ ಶರೀರವನ್ನು ದಹಿಸಿಕೊಂಡಳು. ಈ ಸಂದರ್ಭದಲ್ಲಿ ಷಟ್ಚಕ್ರಗಳ ವರ್ಣನೆಯ ಜತೆಗೆ ವಾಯುಸ್ತಂಭದ ವಿಶಿಷ್ಟ ವರ್ಣನೆಯೂ ಇದೆ. ಹಾಗೆಯೇ ನಾರದರಿಂದ ಧ್ರುವಕುಮಾರನಿಗೆ ಆದ ಅಷ್ಟಾಂಗಯೋಗದ ಉಪದೇಶ, ದಧೀಚಿಯ ಶರೀರತ್ಯಾಗ, ವೃತ್ರಾಸುರನ ಅಂತ್ಯ. ಅದಿತಿಯ ಪಯೋವ್ರತ ಪ್ರಕರಣ ಇವೆಲ್ಲವೂ ಅಪ್ರತ್ಯಕ್ಷವಾಗಿ ಭಾಗವತದಲ್ಲಿ ಯೋಗಶಾಸ್ತ್ರದ ಪರಿಚಯವನ್ನು ಮಾಡಿಕೊಡುತ್ತವೆ.

ಹೀಗೆ ಭಾಗವತ ಮಹಾಪುರಾಣದಲ್ಲಿ ಯೋಗದ ಪ್ರತ್ಯಕ್ಷ–ಪರೋಕ್ಷ ವರ್ಣನೆಗಳಿದ್ದರೂ ಇಲ್ಲಿ ಉಕ್ತವಾದ ಯೋಗ ವಿಶೇಷವಾಗಿ ಭಕ್ತಿಯೋಗ. ಪರಮಭಕ್ತನಾದ ಯೋಗಿಯ ಧ್ಯೇಯ ಭಗವಂತನಲ್ಲಿ ಮನಸ್ಸು ನೆಲೆಸುವಂತೆ ಮಾಡುವುದೇ ಆಗಿದೆ.

ನ ಯುಜ್ಯಮಾನಯಾ ಭಕ್ತ್ಯಾ ಭಗವತ್ಯಖಿಲಾತ್ಮನಿ ।
ಸದೃಶೋಽಸ್ತಿ ಶಿವಃ ಪಂಥಾ ಯೋಗಿನಾಂ ಬ್ರಹ್ಮಸಿದ್ಧಯೇ ॥ (೩–೨೫–೧೯)

ಬ್ರಹ್ಮಪ್ರಾಪ್ತಿಗಿಂತಲೂ ಭಗವಂತನಲ್ಲಿಡುವ ಭಕ್ತಿಯೇ ಮಿಗಿಲೆಂಬುದು ಭಾಗವತದಲ್ಲಿ ಉಕ್ತವಾಗಿರುವ ಯೋಗದ ಪರಮ ರಹಸ್ಯ.

ಗೀತೆಯಲ್ಲಿ ಯೋಗ

ಪುರಾಣೋಪನಿಷತ್ತುಗಳ ಯುಗವಾದ ಮೇಲೆ ನಾವು ಇತಿಹಾಸಯುಗವನ್ನು ಪ್ರವೇಶಿಸುತ್ತೇವೆ. ಉಪನಿಷತ್ಕಾಲದಿಂದಲೇ ಭಾರತೀಯ ದಾರ್ಶನಿಕರಿಗೆ ಯೋಗದ ಪ್ರಕ್ರಿಯೆಯು ಶ್ರದ್ಧೆ ಆದರಗಳ ವಿಷಯವಾಗಿದ್ದಿತು. ವೇದದ ಸಂಬಂಧವನ್ನು ತ್ಯಜಿಸಿದ

ಮತವಾದಿಗಳೂ ಸಹ ಯೋಗದ ವ್ಯಾವಹಾರಿಕ ಉಪದೇಶವನ್ನು ಅಂಗೀಕರಿಸಿದರು. 'ಅಹಿಂಸೆ'ಯ ವಿಷಯದಲ್ಲಿ ಅಭಿರುಚಿಯು ಸ್ವಾಭಾವಿಕವಾಗಿ ಬೆಳೆಯುತ್ತಿದ್ದಿತು. ಪಶು ಯಾಗವು ಅವರಿಗೆ ವಿಚಾರದ ಹಾಗೂ ಸಂದೇಹದ ವಿಷಯವಾಗಿದ್ದಿತು. ಈ ಸಂದರ್ಭ ದಲ್ಲಿಯೇ ಔಪನಿಷದ ಜ್ಞಾನದೊಡನೆ ನೂತನವಾದ ಆಸ್ತಿಕ ವಿಚಾರ ಧಾರೆಯ ಸಾಮಂ ಜಸ್ಯವನ್ನು ಸ್ಥಾಪಿಸಿದ ಮಹಾಭಾರತದ ರಚನೆಯಾಯಿತು. 'ಶಾಂತಿಪರ್ವ' ಹಾಗೂ 'ಅನುಶಾಸನ ಪರ್ವ'ಗಳು ಈ ಯುಗದ ದಾರ್ಶನಿಕ ವಿಚಾರ ಪ್ರವೃತ್ತಿಗಳಿಂದ, ಹಾಗೂ ಮಹತ್ವಪೂರ್ಣವಾದ ಆಧ್ಯಾತ್ಮಿಕ ರಹಸ್ಯಗಳಿಂದ ತುಂಬಿವೆ.

"ಶತಸಾಹಸ್ರೀ ಸಂಹಿತೆ"ಯೆಂದು ಹೆಸರಿಸಿರುವ ಲಕ್ಷ ಶ್ಲೋಕಗಳುಳ್ಳ ಈ ಮಹಾ ಭಾರತದಲ್ಲಿ ಶ್ರೀಮದ್ಭಗವದ್ಗೀತೆಯೇ ಬಹು ಮಹತ್ವದಿಂದ ಕೂಡಿದುದು. ಮಹಾ ಭಾರತದ ಸಾರಸರ್ವಸ್ವವೇ ಗೀತೆ. ಆದ್ದರಿಂದಲೇ ಇದು "ಶ್ರೀಮದ್ಭಗವದ್ಗೀತಾಸು ಉಪನಿಷತ್ಸು ಬ್ರಹ್ಮವಿದ್ಯಾಯಾಂ ಯೋಗಶಾಸ್ತ್ರ"ವಾಗಿ ಪರಿಣಮಿಸಿತು ; ಹಾಗೂ ಪ್ರಸ್ಥಾನತ್ರಯಗಳಲ್ಲಿ ಒಂದಾಯಿತು. ಇದರ ಅಷ್ಟಾದಶಾಧ್ಯಾಯಗಳಲ್ಲಿ ಉಕ್ತವಾಗಿ ರುವ ಏಳು ನೂರು ಶ್ಲೋಕಗಳಲ್ಲಿ ನಿಃಶ್ರೇಯಸದ ಪ್ರಾಪ್ತಿಗೆ ಬೇಕಾದ ಸಾಧನಗಳು ಬಹಳ ಸುಲಭವಾಗಿ ಹಾಗೂ ಸರಳವಾಗಿ ಅಭಿವ್ಯಕ್ತವಾಗಿದೆ. ಇಲ್ಲಿ ಹೇಳಿರುವ ರಾಜ ಮಾರ್ಗವನ್ನು ಅನುಸರಿಸಿ ಯಾವ ವಿಧವಾದ ತೊಂದರೆಯೂ ಇಲ್ಲದೆ ಮಾನವನು ತನ್ನ ಪರಮಗಂತವ್ಯಸ್ಥಾನಕ್ಕೆ ಹೋಗಬಹುದು. ಗೀತೆಯು ವಾದವಿವಾದಗಳಿಂದ ದೂರ ವಾಗಿದೆ. ಇದು ವಿಭಿನ್ನ ಆಧ್ಯಾತ್ಮಿಕ ಪ್ರವೃತ್ತಿಯವರಿಗೆ ಅತ್ಯಂತ ಹಿತಕರವಾಗಿದೆ. ಈ ಸಮನ್ವಯ ದೃಷ್ಟಿಯೇ ಗೀತೆಯ ಮಹತ್ವಕ್ಕೆ ಕಾರಣ. "ಯದಿಹಾಸ್ತಿ ನ ತದನ್ಯತ್ರ" ಎಂಬ ಭಾರತೋಕ್ತಿಯಂತೆ ಗೀತೆಯಲ್ಲಿ ಇಲ್ಲದ ವಿಷಯವಿಲ್ಲ. ಆದುದರಿಂದಲೇ ಕೇವಲ ಏಳುನೂರು ಶ್ಲೋಕಗಳಿರುವ ಗೀತೆಯನ್ನು ಕಾಮಧೇನು ಅಥವಾ ಕಲ್ಪವೃಕ್ಷಕ್ಕೆ ಹೋಲಿ ಸಿದ್ದಾರೆ.

ಗೀತಾಚಾರ್ಯನಾದ ಶ್ರೀಕೃಷ್ಣ ಪರಮಾತ್ಮನೇ ಇದೊಂದು 'ಯೋಗಶಾಸ್ತ್ರ' ವೆಂದು ತಿಳಿಸಿದ್ದಾನೆ.

"ಇಮಂ ವಿವಸ್ವತೇ ಯೋಗಂ ಪ್ರೋಕ್ತವಾನಹಮವ್ಯಯಂ"

ಅಲ್ಲದೆ ಹದಿನೆಂಟನೆಯ ಅಧ್ಯಾಯದಲ್ಲಿ ಸಂಜಯನು ನುಡಿದ

"ವ್ಯಾಸಪ್ರಸಾದಾಚ್ಛ್ರುತವಾನಿಮಂ ಗುಹ್ಯಮಹಂ ಪರಮ್ ।
ಯೋಗಂ ಯೋಗೇಶ್ವರಾತ್ ಕೃಷ್ಣಾತ್ ಕೃಷ್ಣಯತಃ ಸ್ವಯಂ" ॥ (೧೮–೭೫)

ಎಂಬ ಮಾತುಗಳು ಗೀತೆಯನ್ನು ಯೋಗಶಾಸ್ತ್ರವೆಂದೇ ಸಮರ್ಥಿಸುತ್ತದೆ. ಅಂದರೆ "ಶ್ರೀ ವೇದವ್ಯಾಸರ ಅನುಗ್ರಹದಿಂದ ಶ್ರೇಷ್ಠವಾದ ಗುಹ್ಯವಾದ ಈ ಯೋಗವನ್ನು ಸಾಕ್ಷಾತ್ತಾಗಿ ತಾನೇ ಹೇಳುತ್ತಿರುವ ಯೋಗೇಶ್ವರನಾದ ಕೃಷ್ಣನಿಂದ ಕೇಳಿದೆನು."

ಇಲ್ಲಿರುವ ಪ್ರತಿಯೊಂದು ಅಧ್ಯಾಯಗಳ ಶಿರೋನಾಮೆಗಳೂ 'ಯೋಗ' ಎಂಬ ಶಬ್ದದಲ್ಲಿಯೇ ಕೊನೆಗೊಳ್ಳುತ್ತವೆ. ಉದಾಹರಣಾರ್ಥವಾಗಿ ಕರ್ಮಯೋಗ, ಜ್ಞಾನ

ಯೋಗ, ಧ್ಯಾನಯೋಗ ಇತ್ಯಾದಿ. ಅರ್ಜುನನಿಗೊದಗಿದ ವಿಲಕ್ಷಣವಾದ ಸಮಸ್ಯೆಯನ್ನು ಪರಿಹರಿಸಲೋಸುಗವೇ ಗೀತೆಯು ಉದಯವಾಯಿತು. ಅದುದರಿಂದ ಆಚಾರ ಮೀಮಾಂಸೆಯ ಪ್ರತಿಪಾದನೆ ಗೀತೆಯ ಉಪದೇಶವೆಂಬುದು ಸ್ಪಷ್ಟವಾಗಿದೆ. ಈ ಕಾರಣ ದಿಂದಲೂ ಗೀತೆಯನ್ನು 'ಯೋಗಶಾಸ್ತ್ರ'ವೆಂದು ಕರೆಯಬಹುದು. ಯೋಗದ ಅನೇಕ ಅರ್ಥಗಳಲ್ಲಿ ವ್ಯವಹಾರವೆಂಬುದೂ ಒಂದು.

ಗೀತೆ ಮತ್ತು ಕರ್ಮಯೋಗ

ಗೀತೆಯಲ್ಲಿ ಕರ್ಮಯೋಗವು ಹಾಸು ಹೊಕ್ಕಾಗಿದೆ. ಫಲಾಪೇಕ್ಷೆ ಇಲ್ಲದೆ ಮಾಡುವ ಕರ್ಮಗಳು ಬಂಧನವನ್ನುಂಟುಮಾಡುವುದಿಲ್ಲವೆಂದು ಗೀತೆಯು ತಿಳಿಸುತ್ತದೆ. ಕರ್ಮ ಚಕ್ರದಿಂದ ಯಾರೂ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಕರ್ಮವೇ ಜೀವನ ಯಾತ್ರೆಯ ಪ್ರಧಾನವಾದ ಆಧಾರವಾಗಿರುತ್ತದೆ. ಒಂದು ಕ್ಷಣವೂ ಕರ್ಮಮಾಡದೆ ಯಾವ ವ್ಯಕ್ತಿಯೂ ಇರಲು ಸಾಧ್ಯವಾಗುವುದಿಲ್ಲ. ಯಾವ ಇಚ್ಛೆಯಿಂದ ಕರ್ಮಗಳನ್ನು ಮಾಡುತ್ತೇವೆಯೋ ಆ ಫಲಗಳನ್ನು ಅನುಭವಿಸಲೇಬೇಕು. ಅದ್ದರಿಂದ ಕರ್ತೃವಿಗೆ ಯಾವ ವಿಧದಿಂದಲೂ ವಿಮೋಚನೆ ದೊರಕುವುದಿಲ್ಲ. ಆದರೆ ಫಲದ ಬಂಧನದಿಂದ ಮುಕ್ತಿ ದೊರಕುತ್ತದೆ. ಬಂಧನವನ್ನುಂಟುಮಾಡದಿರುವಂತೆ ಕರ್ಮವನ್ನು ಬಹಳ ಕೌಶಲದಿಂದ ಮಾಡಬೇಕು. ಅದನ್ನೇ ಶ್ರೀಕೃಷ್ಣನು "ಯೋಗಃ ಕರ್ಮಸು ಕೌಶಲಂ" ಎಂದು ಹೇಳಿದ್ದಾನೆ.

ಕರ್ಮಯೋಗವು ಕರ್ಮಸನ್ಯಾಸಕ್ಕಿಂತಲೂ ಶ್ರೇಷ್ಠವಾದುದೆಂದು ಗೀತೆಯಲ್ಲಿ ಹೇಳಿದೆ.

> ಸನ್ಯಾಸಃ ಕರ್ಮಯೋಗಶ್ಚ ನಿಃಶ್ರೇಯಸಕರಾ ವುಭೌ ।
> ತಯೋಸ್ತು ಕರ್ಮಸನ್ಯಾಸಾತ್ ಕರ್ಮಯೋಗೋ ವಿಶಿಷ್ಯತೇ ॥

ಆದರೆ ಸಾಧಾರಣವಾದ ಕರ್ಮವಾದವನ್ನು ಕರ್ಮಯೋಗದಲ್ಲಿ ಪ್ರವರ್ತಿಸುವಂತೆ ಮಾಡಲು ಮೂರು ಸೋಪಾನಗಳು ಅತ್ಯಾವಶ್ಯಕ, ಮೊದಲನೆಯದು, ಫಲಾಪೇಕ್ಷೆಯನ್ನು ತ್ಯಜಿಸುವುದು ; ಎರಡನೆಯದು, ಕರ್ತೃತ್ವವೆಂಬ ಅಭಿಮಾನವನ್ನು ದೂರ ಮಾಡುವುದು ; ಮೂರನೆಯದೇ ಈಶ್ವರಾರ್ಪಣ. ಮಾನವನಿಗೆ ಕರ್ಮಮಾಡುವುದರಲ್ಲಿ ಮಾತ್ರ ಅಧಿಕಾರವಿದೆಯೇ ವಿನಃ ಅದರ ಫಲದ ವಿಷಯದಲ್ಲಿಲ್ಲ. ಫಲದ ಅಪೇಕ್ಷೆಯಿಂದ ಯಾವಾಗಲೂ ಕರ್ಮವನ್ನು ಮಾಡಬಾರದು. ಹಾಗೂ ಅಕರ್ಮದಲ್ಲಿ ಅಂದರೆ ಕರ್ಮ ಮಾಡದಿರುವುದರಲ್ಲಿ ಪ್ರವೃತ್ತಿಯುಂಟಾಗಬಾರದು. ಅದನ್ನೇ ಗೀತೆಯಲ್ಲಿ

> ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ ।
> ಮಾ ಕರ್ಮಫಲ ಹೇತುರ್ಭೂರ್ಮಾ ತೇ ಸಂಗೋಽಸ್ತ್ವಕರ್ಮಣಿ ॥ (೨–೪೭)

ಎಂದು ಹೇಳಿದೆ. ಇದೇ ಕರ್ಮಯೋಗದ ಮಹಾಮಂತ್ರ. ಮಾನವರು ಕರ್ಮವನ್ನು ತ್ಯಾಗಮಾಡಬೇಕಾಗಿಲ್ಲ. ಆದರೆ ಕರ್ಮದ ಫಲವನ್ನು ತ್ಯಾಗಮಾಡಬೇಕು. ಗೀತಾಚಾರ್ಯನು

"ಕಾಮ್ಯಾನಾಂ ಕರ್ಮಣಾಂ ನ್ಯಾಸಂ ಸಂನ್ಯಾಸಂ ಕವಯೋವಿದುಃ |
ಸರ್ವಕರ್ಮಫಲತ್ಯಾಗಂ ಪ್ರಾಹುಸ್ತ್ಯಾಗಂ ವಿಚಕ್ಷಣಾಃ || (೧೮-೨)

ಎಂದು ಹೇಳಿದ್ದಾನೆ. ಅಂದರೆ ವಿದ್ವಾಂಸರು ಕಾಮ್ಯಕರ್ಮಗಳ ತ್ಯಾಗವನ್ನು ಸನ್ಯಾಸವೆಂದು ಕರೆಯುತ್ತಾರೆ. ಆದರೆ ಮತ್ತೆ ಕೆಲವು ಜ್ಞಾನಿಗಳು ಸರ್ವಕರ್ಮಗಳ ಫಲತ್ಯಾಗವೇ ವಾಸ್ತವವಾದ ಸಂನ್ಯಾಸವೆಂದು ಹೇಳುತ್ತಾರೆ.

ಸಮಸ್ತ ಕಾರ್ಯಗಳನ್ನೂ ಈಶ್ವರಾರ್ಪಣ ಬುದ್ಧಿಯಿಂದ ಮಾಡಬೇಕೆಂಬುದು ಮೂರನೇ ಸೋಪಾನ. ಕರ್ಮಗಳ ಫಲವನ್ನು ಪರಮಾತ್ಮನಲ್ಲಿ ಅರ್ಪಿಸಬೇಕು. ಈ ವಿಚಾರವನ್ನು ಶ್ರೀಕೃಷ್ಣನು ಸ್ಪಷ್ಟವಾಗಿ ಹೇಳಿದ್ದಾನೆ.

ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿಯತ್ |
ಯತ್ತಪಸ್ಯಸಿ ಕೌಂತೇಯ ತತ್ಕುರುಷ್ವ ಮದರ್ಪಣಮ್ || (೯-೨೭)

ಅಂದರೆ "ಜೀವಿಗಳು ಏನನ್ನು ಮಾಡಲಿ, ಭುಂಜಿಸಲಿ, ಆಹುತಿ ಕೊಡಲಿ, ದಾನ-ಅಥವಾ ತಪಸ್ಸು ಮಾಡಲಿ, ಅವೆಲ್ಲವನ್ನೂ ಪರಮಾತ್ಮನಲ್ಲಿ ಸಮರ್ಪಿಸಬೇಕು." ಇದರ ಫಲವಾಗಿ ಕರ್ಮ ಬಂಧನ ರೂಪವಾದ ಶುಭಾಶುಭ ಫಲಗಳಿಂದ ಮುಕ್ತಿ ಹೊಂದುತ್ತದೆ. ಇದೇ ತತ್ತ್ವವನ್ನು

ಇಷ್ಟಾನ್ ಭೋಗಾನ್ ಹಿ ವೋ ದೇವಾ ದಾಸ್ಯಂತೇ ಯಜ್ಞ ಭಾವಿತಾಃ |
ತೈರ್ದತ್ತಾ ನಪ್ರದಾಯೈಭ್ಯೋ ಯೋ ಭುಂಕ್ತೇಸ್ತೇನ ಏವ ಸಃ ||
(೩-೧೨)

ಅಂದರೆ ದೇವತೆಗಳಿಂದ ಅನುಗ್ರಹಿಸಲ್ಪಟ್ಟ ಭೋಗಗಳನ್ನು ಅವರಿಗೆ ಯಾವನು ಸಮರ್ಪಿಸದೆ ಅನುಭವಿಸುತ್ತಾನೆಯೋ ಅವನು ಕಳ್ಳನೇ ಸರಿ. ಆದುದರಿಂದಲೇ ನಾವು ಏನನ್ನು ಸಮರ್ಪಣೆ ಮಾಡುವಾಗಲೂ "ಶ್ರೀ ಕೃಷ್ಣಾರ್ಪಣಮಸ್ತು" ಎಂದು ಹೇಳುವುದರ ಉದ್ದೇಶ. ಇದೇ ಆಗಿದೆ. ಹೀಗೆ ನಿಷ್ಕಾಮ ಕರ್ಮವೇ ಗೀತೆಯಲ್ಲಿ ಅಂಗೀಕೃತವಾದ ಕರ್ಮಯೋಗವಾಗಿರುತ್ತದೆ.

ಗೀತೆ ಮತ್ತು ಜ್ಞಾನಯೋಗ

ಗೀತಾ ಮಹೋದಧಿಯಲ್ಲಿ ಕರ್ಮಕ್ಕೆ ಎಷ್ಟು ಪ್ರಾಮುಖ್ಯತೆಯಿದೆಯೋ ಜ್ಞಾನಕ್ಕೂ ಸಹ ಅಷ್ಟೇ ಮಹತ್ವವಿದೆ. ಕರ್ಮಯೋಗದಲ್ಲಿ ನಿಷ್ಣಾತನಾಗಬೇಕಾದರೆ ಜ್ಞಾನ ಮತ್ತು ಭಕ್ತಿಗಳ ಸಹಯೋಗ ಅತ್ಯಾವಶ್ಯಕವಾಗಿರುತ್ತದೆ. ಕರ್ಮದಲ್ಲಿ ಕರ್ತೃತ್ವಾಭಿಮಾನವನ್ನು ತ್ಯಜಿಸಲು ಜ್ಞಾನಿಯೊಬ್ಬನಿಗೇ ಸಾಧ್ಯ. ಸರ್ವಸಮರ್ಪಣ ಭಾವ ಭಗವದ್ಭಕ್ತನೊಬ್ಬನಿಗೇ ಸಾಧ್ಯ. ಆದ್ದರಿಂದ ಜ್ಞಾನಮಾರ್ಗದ ಮಹತ್ವವನ್ನು ಗೀತೆಯೂ ಅಂಗೀಕರಿಸುತ್ತದೆ. ಆದರೆ ಇದರಲ್ಲಿನ ಜ್ಞಾನಯೋಗವು ಇತರ ಜ್ಞಾನಮಾರ್ಗಗಳಿಂದ ವಿಲಕ್ಷಣವಾದುದು. ಆತ್ಮನ ಏಕತ್ವದ ಸಂಪೂರ್ಣವಾದ ಅನುಭವವೇ ಗೀತೆಗೆ ಸಮ್ಮತವಾದ ಜ್ಞಾನ.

"ಏಕತ್ವ ಭಾವನಾ ಏವ ಯೋಗಃ"

ಎಂಬುದು ಇದರ ಕೀಲಿಕೈ. ಈ ಜ್ಞಾನಕ್ಕೆ ಎರಡು ಮಾರ್ಗಗಳಿವೆ. ಮೊದಲನೆಯದು ಎಲ್ಲಾ ಪ್ರಾಣಿಗಳಲ್ಲಿಯೂ ಆತ್ಮನನ್ನು ನೋಡುವುದು.

"ಸರ್ವ ಭೂತಸ್ಥಮಾತ್ಮನಾಂ"

ಆದರೆ ಇಷ್ಟೇ ಜ್ಞಾನವು ಸಂಪೂರ್ಣವಾದುದಲ್ಲ. ಇದರ ಎರಡನೆಯ ಮಾರ್ಗ–ಆತ್ಮನಲ್ಲಿ ಸಮಸ್ತ ಪ್ರಾಣಗಳನ್ನೂ ನೋಡುವುದು.

"ಸರ್ವಭೂತಾನಿ ಚ ಆತ್ಮನಿ"

ಗೀತೆಯಲ್ಲಿನ ಜ್ಞಾನದ ಈ ಎರಡು ಮಾರ್ಗಗಳೂ ಪರಸ್ಪರ ಪೂರಕವಾದವು. "ಸರ್ವ ಭೂತಸ್ಥಮಾತ್ಮನಾಂ" ಎಂಬುದಕ್ಕೆ ಜಗತ್ತಿನಲ್ಲಿ ದೃಷ್ಟಾಂತವು ದೊರೆಯಬಹುದಾದರೂ "ಸರ್ವಭೂತಾನಿಚ ಆತ್ಮನಿ" ಎಂಬುದಕ್ಕೆ ದೃಷ್ಟಾಂತವನ್ನು ಪರಮಾತ್ಮನು ಅರ್ಜುನನಿಗೆ ದೇವ ದುರ್ಲಭವಾದ ತನ್ನ ವಿರಾಡ್ರೂಪದಲ್ಲಿ ತೋರಿಸಿದನು.

"ಏಕಸ್ಥಂ ಕೃತ್ಸ್ನಂ ಜಗತ್"

ಎಂಬುದನ್ನು ಪ್ರತ್ಯಕ್ಷವಾಗಿ ತೋರಿಸುವುದೇ ವಿರಾಡ್ದರ್ಶನದ ರಹಸ್ಯ. ಆಗ ಅರ್ಜುನನಿಗೆ ಆತ್ಮೈಕತ್ವ ಜ್ಞಾನವು ಯಥಾರ್ಥವಾಗಿ ಆಯಿತು. ಸಮಸ್ತ ಪ್ರಾಣಿಗಳೂ ವಾಸುದೇವನ ಅಂಶವೆಂದು ತಿಳಿಯುವುದು. ಹಾಗೂ ಸ್ಥೂಲದಿಂದ ಒಬ್ಬನೇ ಅಂತರ್ಯಾಮಿಪುರುಷನನ್ನು ಸಾಕ್ಷಾತ್ಕರಿಸಿಕೊಳ್ಳುವುದು– ಈ ವಿಧವಾದ ಜ್ಞಾನವನ್ನು ಹೊಂದಿ ಮಹಾತ್ಮನಾಗು ವುದು ದುರ್ಲಭವೆಂದು ಗೀತೆಯಲ್ಲಿ ಹೇಳಿದೆ.

ಬಹೂನಾಂ ಜನ್ಮನಾಮಂತೇ ಜ್ಞಾನವಾನ್ ಮಾಂ ಪ್ರಪದ್ಯತೇ ।
ವಾಸುದೇವಃ ಸರ್ವಮಿತಿ ಸ ಮಹಾತ್ಮಾ ಸುದುರ್ಲಭಃ ॥ (೭–೧೯)

ಇಂತಹ ಸಮದೃಷ್ಟಿಯುಳ್ಳ ವ್ಯಕ್ತಿಯ ಗುಣವಿಶೇಷವನ್ನು ಹೀಗೆ ಹೇಳಿದೆ.

ವಿದ್ಯಾವಿನಯ ಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ ।
ಶುನಿ ಚೈವ ಶ್ವಪಾಕೇಚ ಪಂಡಿತಾಃ ಸಮದರ್ಶಿನಃ ॥ (೫–೧೮)

ಅಂದರೆ ಸಮದೃಷ್ಟಿಯುಳ್ಳ ವ್ಯಕ್ತಿಗೆ ವಿದ್ಯಾವಿನಯಸಂಪನ್ನನಾದ ಬ್ರಾಹ್ಮಣನಲ್ಲಿ, ಹಸುವಿನಲ್ಲಿ, ಕುದುರೆಯಲ್ಲಿ, ನಾಯಿ ಹಾಗೂ ಚಂಡಾಲರಲ್ಲಿ ಸಮದೃಷ್ಟಿಯಿರುತ್ತದೆ. ಹೀಗೆ ಆತ್ಮನ ಏಕತ್ವದ ಸಂಪೂರ್ಣವಾದ ಅನುಭವವೇ ಗೀತೆಗೆ ಸಮ್ಮತವಾದ ಜ್ಞಾನ.

ಗೀತೆ ಮತ್ತು ಧ್ಯಾನಯೋಗ

ಗೀತೆಯ ಆರನೇ ಅಧ್ಯಾಯದಲ್ಲಿ ಧ್ಯಾನಯೋಗದ ವಿಶದವಾದ ವರ್ಣನೆ ಬರುತ್ತದೆ. ಈ ವರ್ಣನೆಯಲ್ಲಿ ಶ್ವೇತಾಶ್ವತರದ ಪ್ರಭಾವವು ಸ್ಪಷ್ಟವಾಗಿ ಕಂಡು ಬರುತ್ತದೆ. ಚಂಚಲವಾದ ಮನಸ್ಸನ್ನು ಏಕಾಗ್ರತೆಯಲ್ಲಿಡುವುದಕ್ಕಾಗಿ ಗೀತೆಯು ಆಸನ, ಪ್ರಾಣಾಯಾಮ, ಪ್ರತ್ಯಾಹಾರ ಮುಂತಾದ ಸಮಸ್ತ ಯೋಗ ಸಾಧನೆಗಳನ್ನೂ ಉಪದೇಶಿಸುತ್ತದೆ.

ಶುಚೌದೇಶೇ ಪ್ರತಿಷ್ಠಾಪ್ಯ ಸ್ಥಿರಮಾಸನಮಾತ್ಮನಃ।
ನಾತ್ಯುಚ್ಛ್ರಿತಂ ನಾತಿನೀಚಂ ಚೈಲಾಜಿನಕುಶೋತ್ತರಂ ॥
(೬-೧೧)

ತತ್ರೈಕಾಗ್ರಂ ಮನಃಕೃತ್ವಾ ಯತಚಿತ್ತೇಂದ್ರಿಯಕ್ರಿಯಃ ।
ಉಪವಿಶ್ಯಾಸನೇ ಯುಂಜ್ಯಾದ್ಯೋಗಮಾತ್ಮವಿಶುದ್ಧಯೇ ॥
(೬-೧೨)

"ಶುಚಿಯಾದ ಪ್ರದೇಶದಲ್ಲಿ ದರ್ಭೆ, ಅಜಿನ ಅಥವಾ ಒಟ್ಟೆ—ಇವುಗಳನ್ನು ಒಂದರ ಮೇಲೊಂದು ಹಾಕಿರುವ, ಸ್ಥಿರವಾದ ಅತಿ ಎತ್ತರವೂ ತಗ್ಗೂ ಇಲ್ಲದ ಆಸನವನ್ನು ಸ್ಥಾಪಿಸಿಕೊಂಡು ಆ ಆಸನದ ಮೇಲೆ ಕುಳಿತುಕೊಂಡು ಮನಸ್ಸನ್ನು ಏಕಾಗ್ರ ಮಾಡಿ ಚಿತ್ತೇಂದ್ರಿಯಗಳನ್ನು ನಿಗ್ರಹಿಸಿದವನು ಅಂತಃಕರಣ ಶುದ್ಧಿಗಾಗಿ ಯೋಗವನ್ನು ಮಾಡಬೇಕು".

ಮುಂದಿನ ಎರಡು ಶ್ಲೋಕಗಳಲ್ಲಿ ಸಾಧಕನ ನಿಲುವು ಮತ್ತು ಭಾವದ ಬಗ್ಗೆ ಹೇಳಿದೆ :

ಸಮಂ ಕಾಯಶಿರೋಗ್ರೀವಂ ಧಾರಯನ್ನಚಲಂ ಸ್ಥಿರಃ।
ಸಂಪ್ರೇಕ್ಷ್ಯ ನಾಸಿಕಾಗ್ರಂ ಸ್ವಂ ದಿಶಶ್ಚಾನವಲೋಕಯನ್ ॥
(೬-೧೩)

ಪ್ರಶಾಂತಾತ್ಮಾ ವಿಗತಭೀರ್ಬ್ರಹ್ಮಚಾರಿವ್ರತೇ ಸ್ಥಿತಃ ।
ಮನಃ ಸಂಯಮ್ಯ ಮಚ್ಚಿತ್ತೋ ಯುಕ್ತ ಆಸೀತ ಮತ್ಪರಃ ॥
(೬-೧೪)

ಸಾಧಕನು ಶರೀರ, ಶಿರಸ್ಸು, ಕತ್ತು—ಇವುಗಳನ್ನು ಸಮನಾಗಿಯೂ, ಅಚಲವಾಗಿಯೂ ಇರಿಸಿಕೊಂಡು ಸ್ಥಿರನಾಗಿ, ತನ್ನ ಮೂಗಿನ ತುದಿಯನ್ನು ನೋಡುತ್ತಾ, ದಿಕ್ಕುಗಳನ್ನು ನೋಡದವನಾಗಿ ಪ್ರಶಾಂತಾತ್ಮನೂ, ನಿರ್ಭಯನೂ ಆಗಿ ಬ್ರಹ್ಮಚಾರಿ ವ್ರತದಲ್ಲಿ ಇರುವವನಾಗಿ, ಮನಸ್ಸನ್ನು ಸಂಯಮ ಮಾಡಿಕೊಂಡು ಆ ಪರಮಾತ್ಮನಲ್ಲೇ ಚಿತ್ತವುಳ್ಳವನಾಗಿ ಆತನೇ ಪರಾತ್ಪರ ಸ್ವರೂಪನೆಂದು ಭಾವಿಸಿ ಯುಕ್ತನಾಗಿರಬೇಕು. ಅಲ್ಲದೆ,

ಸರ್ವಭೂತಸ್ಥಿತಂ ಯೋ ಮಾಂ ಭಜತ್ಯೇಕತ್ವಮಾಸ್ಥಿತಃ ।
ಸರ್ವಥಾ ವರ್ತಮಾನೋಽಪಿ ಸ ಯೋಗೀ ಮಯಿ ವರ್ತತೇ ॥
(೬-೩೧)

ಯೋಗಿಯು ಏಕತ್ವ ಭಾವನೆಯಿಂದ ಸಮಸ್ತ ಪ್ರಾಣಿಗಳಲ್ಲಿಯೂ ವಾಸವಾಗಿರುವ ಪರಮಾತ್ಮನನ್ನು ಸೇವಿಸುತ್ತಾನೆ. ಅವನು ಯಾವ ಅವಸ್ಥೆಯಲ್ಲಿದ್ದರೂ ಪರಮಾತ್ಮನ ಜೊತೆಯಲ್ಲಿಯೇ ಇರುತ್ತಾನೆ. ಆದುದರಿಂದ ಗೀತೆಯು ಸೂಕ್ಷ್ಮವಾದ ಧ್ಯಾನವನ್ನು ಹೇಳುವುದಿಲ್ಲ. ಧ್ಯಾನದಿಂದ ಲಭಿಸುವ ಸುಖವನ್ನು ಮುಂದೆ ಹೇಳಿದೆ.

ಯುಂಜನ್ನೇವಂ ಸದಾತ್ಮಾನಂ ಯೋಗೀ ವಿಗತಕಲ್ಮಷಃ ।
ಸುಖೇನ ಬ್ರಹ್ಮಸಂಸ್ಪರ್ಶಮತ್ಯಂತಂ ಸುಖಮಶ್ನುತೇ ॥

(೬–೨೮)

ಏಕಾಗ್ರಚಿತ್ತದಿಂದ ಕೂಡಿದ್ದು ಸಮಸ್ತ ವಸ್ತುಗಳಲ್ಲಿಯೂ ವ್ಯಾಪಕನಾದ ಪರಮಾತ್ಮನನ್ನು ಸೇವಿಸುವುದರಿಂದ ಯೋಗಿಯು ಆಯಾಸವಿಲ್ಲದೆ ಬ್ರಹ್ಮಸಂಸ್ಪರ್ಶವೆಂಬ ಉತ್ಕೃಷ್ಟವಾದ ಸುಖವನ್ನು ಹೊಂದುತ್ತಾನೆ.

ಎಲ್ಲರಿಗಿಂತಲೂ ಯೋಗಿಯೇ ಶ್ರೇಷ್ಠನೆಂಬುದು ಗೀತೆಯ ಮತ.

ತಪಸ್ವಿಭ್ಯೋಽಧಿಕೋ ಯೋಗೀ ಜ್ಞಾನಿಭ್ಯೋಽಪಿ ಮತೋಽಧಿಕಃ ।
ಕರ್ಮಿಭ್ಯಶ್ಚಾಧಿಕೋ ಯೋಗೀ ತಸ್ಮಾದ್ಯೋಗೀ ಭವಾರ್ಜುನ ॥

(೬–೪೬)

ತಪಸ್ವಿ, ಜ್ಞಾನಿ, ಕರ್ಮಿ—ಇವರೆಲ್ಲರಿಗಿಂತಲೂ ಯೋಗಿಯೇ ಶ್ರೇಷ್ಠನೆಂಬುದು ಪರಮಾತ್ಮನ ವಾಣಿ.

ಯೋಗಿಗಳಲ್ಲಿ ಎಷ್ಟು ವಿಧವೆಂಬುದನ್ನು ಗೀತೆಯು ಹೇಳುತ್ತದೆ.

ಜ್ಞಾನವಿಜ್ಞಾನತೃಪ್ತಾತ್ಮಾ ಕೂಟಸ್ಥೋ ವಿಜಿತೇಂದ್ರಿಯಃ ।
ಯುಕ್ತ ಇತ್ಯುಚ್ಯತೇ ಯೋಗೀ ಸಮಲೋಷ್ಟಾಶ್ಮಕಾಂಚನಃ ॥

(೬–೮)

ಗೀತೆಯ ಪ್ರಕಾರ ಯೋಗಿಯೂ ಎರಡು ವಿಧ — 'ಯುಕ್ತ' ಮತ್ತು 'ಯುಕ್ತತಮ' ಎಂದು. ಜ್ಞಾನವಿಜ್ಞಾನಗಳಿಂದ ತೃಪ್ತಿ ಹೊಂದಿದ ಅಂತಃಕರಣವನ್ನು ಹೊಂದಿರುವ ಮಣ್ಣು, ಕಲ್ಲು, ಚಿನ್ನ ಎಲ್ಲವೂ ಒಂದೇ ಎಂಬುದಾಗಿ ತಿಳಿದಿರುವ ವಿಕಾರ ರಹಿತನಾದ ಯೋಗಿಯನ್ನು 'ಯುಕ್ತ'ನೆಂಬುದಾಗಿ ಕರೆಯುತ್ತಾರೆ.

ಯೋಗಿನಾಮಪಿ ಸರ್ವೇಷಾಂ ಮದ್ಗತೇನಾಂತರಾತ್ಮನಾ
ಶ್ರದ್ಧಾವಾನ್ ಭಜತೇ ಯೋ ಮಾಂ ಸಮೇ ಯುಕ್ತತಮೋ ಮತಃ ॥

(೬–೪೭)

ಮೇಲೆ ಹೇಳಿದ "ಯುಕ್ತ" ಯೋಗಿಗಳಲ್ಲಿ ತನ್ನ ಅಂತರಾತ್ಮವನ್ನು ಪರಮಾತ್ಮನಲ್ಲಿ ನಿಲ್ಲಿಸಿ ಸಂಪೂರ್ಣವಾದ ಶ್ರದ್ಧೆಯನ್ನಿಟ್ಟು, ಪರಮಾತ್ಮನನ್ನು ನಿರಂತರವಾಗಿ ಭಜಿಸುವವನೇ ಸರ್ವಶ್ರೇಷ್ಠನಾದ 'ಯುಕ್ತತಮ'ನು.

ಪರಮಾತ್ಮನನ್ನು ಶ್ರದ್ಧಾಪೂರ್ವಕವಾದ ಹೃದಯದಿಂದ ಭಜಿಸದೆ ಹೋದರೆ ಧ್ಯಾನಯೋಗವು ಕೇವಲ ಶಾರೀರಿಕ ವ್ಯಾಯಾಮ ಮಾತ್ರವಾಗುತ್ತದೆ. ಶರೀರಕ್ಕೆ ವೃಥಾ ಕಷ್ಟವನ್ನು ತಂದುಕೊಡುವುದಾಗುತ್ತದೆ. ಆದುದರಿಂದ ಧ್ಯಾನ ಮತ್ತು ಭಕ್ತಿಗಳ ಸಾಮಂಜಸ್ಯವು ಗೀತೆಗೆ ಅಭೀಷ್ಟವಾದುದು.

ಹೀಗೆ ಗೀತೆಯಲ್ಲಿ ಕರ್ಮಯೋಗ, ಜ್ಞಾನಯೋಗ, ಧ್ಯಾನಯೋಗ ಹಾಗೂ ಭಕ್ತಿಯೋಗಗಳು ಸ್ವತಂತ್ರಗಳಾದ ವಿಭಿನ್ನ ಸಾಧನಮಾರ್ಗಗಳಾಗಿರದೆ, ಒಂದೇ

ಮಾರ್ಗದ ವಿಭಿನ್ನ ಸ್ಥಾನಗಳಾಗಿರುತ್ತವೆ. ಇವನ್ನು ದಾಟುವುದು ಆಧ್ಯಾತ್ಮಿಕ ಮಾರ್ಗದಲ್ಲಿ ಹೋಗುವ ಪಥಿಕನಿಗೆ ಅತ್ಯಾವಶ್ಯಕವಾಗಿರುತ್ತದೆ. ಹದಿನೆಂಟನೆಯ ಅಧ್ಯಾಯದಲ್ಲಿ ಈ ಮಾರ್ಗಗಳ ಪರಸ್ಪರ ಸಾಮಂಜಸ್ಯವನ್ನು ಸಂಕ್ಷೇಪವಾಗಿ ತಿಳಿಸಲಾಗಿದೆ. ಗೀತೆಯ ಸಾಧನಾ ಮಾರ್ಗವು ನಿಷ್ಕಾಮಕರ್ಮದಿಂದ ಪ್ರಾರಂಭವಾಗಿ ಶರಣಾಗತಿಯೊಡನೆ ಅಂತ್ಯವಾಗುತ್ತದೆ. ನಿಷ್ಕಾಮಕರ್ಮವನ್ನು ಮಾಡುವುದರಿಂದ, ಮತ್ತು ನಿಯಮಪೂರ್ವಕವಾಗಿ ಧ್ಯಾನಯೋಗವನ್ನು ಅಭ್ಯಾಸಮಾಡುವುದರಿಂದ ಸಾಧಕನು ಬ್ರಹ್ಮಭಾವವನ್ನು ಹೊಂದುತ್ತಾನೆ. ಪ್ರತಿಯೊಬ್ಬ ಮಾನವನೂ ಗೀತೆಯ ಉಪದೇಶವನ್ನು ತನ್ನ ಜೀವನದಲ್ಲಿ ಅಳವಡಿಸಿಕೊಳ್ಳುವುದು ಅತ್ಯವಶ್ಯಕ.

ಭಗವದ್ಗೀತೆಯಲ್ಲಿ ಯೋಗ ಎಂಬುದು ಅನ್ವರ್ಥಕ ಪದ. ಅನಂತನೊಡನೆ ಒಂದಾಗುವುದೆಂಬ ಅರ್ಥಕೊಡುವುದರಿಂದ ಅದು ಮೋಕ್ಷದ ಅಧ್ಯಾತ್ಮಕ ಮುಖ. 'ನೊಗ ಹೂಡುವುದು' ಎಂಬ ಅರ್ಥದ ಯೋಗ ಎಂಬ ಸಂಸ್ಕೃತ ಪದವೇ ಈ ಇಡೀ ಶಾಸ್ತ್ರ ಗ್ರಂಥದ ಕೀಲಿ ಕೈಯಾಗಿದೆ. ಗೀತೆಯನ್ನು ಯೋಗಶಾಸ್ತ್ರವೆಂದೂ ಅದರ ಸಂದೇಶವನ್ನು ಯೋಗ ಎಂದೂ, ಆ ಸಂದೇಶವನ್ನು ನೀಡಿರುವ ಅವತಾರ ಪುರುಷನನ್ನು ಯೋಗೇಶ್ವರ ಎಂದೂ, ಈ ಶಾಸ್ತ್ರವು ಆದರ್ಶ ಪುರುಷ ಎಂದು ವರ್ಣಿಸಿರುವ ವ್ಯಕ್ತಿಯನ್ನು ಯೋಗಿ ಎಂದೂ ಕರೆಯಲಾಗಿದೆ. ಭಗವದ್ಗೀತೆಯ ಪ್ರಾಮುಖ್ಯವನ್ನು ಅರಿಯಲು ಬಯಸುವ ಪ್ರತಿಯೊಬ್ಬನೂ ಯೋಗ, ಯೋಗಿ, ಯೋಗೇಶ್ವರ, ಯೋಗಶಾಸ್ತ್ರ ಎಂಬ ಈ ನಾಲ್ಕು ಪದಗಳನ್ನು ನೆನಪಿಟ್ಟುಕೊಳ್ಳಬೇಕು. ಅಲ್ಲದೆ ಪತಂಜಲಿಯ ಯೋಗಸೂತ್ರದಲ್ಲಿ ಹೇಳುವಂತೆ ಚಿತ್ತ ವೃತ್ತಿನಿರೋಧ ಎಂಬ ಸಂಕುಚಿತ ಅಥವಾ ಪಾರಿಭಾಷಿಕ ಅರ್ಥದಲ್ಲಿ ಯೋಗ ಎಂಬ ಪದವನ್ನು ಗೀತೆಯಲ್ಲಿ ಬಳಸಿಲ್ಲವೆಂಬುದನ್ನು ಮರೆಯಕೂಡದು. ಭಗವಂತನೊಂದಿಗೆ ಏಕತೆ ಅಥವಾ ಸಹವಾಸ ಎಂಬ ಆ ಪದದ ಮೂಲಾರ್ಥದಲ್ಲಿ ಅದನ್ನು ಇಲ್ಲಿ ಬಳಸಲಾಗಿದೆ. ಆ ಏಕತೆ ಅಥವಾ ಸಹವಾಸಕ್ಕೆ ಮಾರ್ಗ ಯಾವುದೆಂಬುದನ್ನು ಬೋಧಿಸಿರುವುದರಿಂದ ಗೀತೆಯನ್ನು ಯೋಗಶಾಸ್ತ್ರ ಎಂದು ಕರೆಯಲಾಗಿದೆ.

ಟಿ. ವಿ. ವೆಂಕಟಾಚಲ ಶಾಸ್ತ್ರೀ

ಚಿಂತನ—೧೩

I ಕ್ಷಮೆ

ಭಾದ್ರಪದ ಶುದ್ಧ ಪಂಚಮಿಯಿಂದ ಚತುರ್ದಶಿಯವರೆಗೆ ದಶಧರ್ಮಗಳ ಒಂದೊಂದು ಅಂಗವನ್ನೂ ದಿನಕ್ಕೆ ಒಂದರ ಹಾಗೆ ಅನುಷ್ಠಾನಮಾಡಲು ವಿಧಿಸಿರುವ 'ದಶಲಕ್ಷಣ ಪರ್ವ' ಎಂಬ ಒಂದು ಹಬ್ಬ ಜೈನಧಾರ್ಮಿಕರಲ್ಲಿ ಪ್ರಸಿದ್ಧವಾಗಿದೆ. ಯಾವುವು ಈ ದಶಧರ್ಮಗಳು ? ಗೃಧ್ರಪಿಂಛರೆಂಬ ಆಚಾರ್ಯರ 'ತತ್ತ್ವಾರ್ಥ ಸೂತ್ರ'ದಲ್ಲಿ ಉತ್ತಮ ಕ್ಷಮೆ, ಮಾರ್ದವ, ಆರ್ಜವ, ಶೌಚ, ಸತ್ಯ, ಸಂಯಮ, ತಪಸ್ಸು, ತ್ಯಾಗ, ಆಕಿಂಚನ್ಯ, ಬ್ರಹ್ಮಚರ್ಯ ಇವೇ ಆ ದಶಧರ್ಮಗಳೆಂಬುದಾಗಿ ವಾಕ್ಯವಿದೆ. ಈ ಗ್ರಂಥದ ವೃತ್ತಿಕಾರನಾದ ಬಾಲಚಂದ್ರನು, ಇವನ್ನು 'ಉತ್ತಮ' ಎಂದು ಏಕೆ ಹೇಳಬೇಕು ಎನ್ನುವುದನ್ನು ವಿವರಿಸುತ್ತ, ಖ್ಯಾತಿ ಪೂಜೆ ಲಾಭ ಮೊದಲಾದುವುಗಳ ನಿವೃತ್ತಿಯ ಸಲುವಾಗಿ 'ಉತ್ತಮ' ಶಬ್ದವನ್ನು ಬಳಸಿದೆ ಎಂದು ತಿಳಿಸಿದ್ದಾನೆ. ಎಂದರೆ, ಆಚರಿಸುವ ಧರ್ಮ ಕ್ಷಮೆಯಾಗಲಿ, ಮಾರ್ದವವಾಗಲಿ, ಬೇರೆ ಯಾವುವೇ ಆಗಲಿ, ಅದಕ್ಕೆ ಲಾಭ ಲೋಭ ಸೋಂಕು ಇರಬಾರದು, ಆಚರಣೆ ನಿರ್ವ್ಯಾಜವೂ ನಿಃಸ್ವಾರ್ಥವೂ ಆಗಿರಬೇಕು ಎನ್ನುವುದೇ ಇಲ್ಲಿಯ ಉದ್ದೇಶ.

ಇವೇ ಹತ್ತು ಧರ್ಮಗಳನ್ನು ವೈದಿಕ ಧರ್ಮದ ಸ್ಮೃತಿ ಪುರಾಣಗಳೂ ಹೇಳುತ್ತವೆ. ಧರ್ಮಕ್ಕೆ ಧೃತಿ, ಕ್ಷಮೆ, ದಮೆ, ಅಸ್ತೇಯ, ಶೌಚ, ಇಂದ್ರಿಯನಿಗ್ರಹ, ಧೀ, ವಿದ್ಯೆ, ಸತ್ಯ ಮತ್ತು ಅಕ್ರೋಧಗಳೆಂಬವು ಹತ್ತು ಲಕ್ಷಣಗಳೆಂಬುದಾಗಿ ಮನುಸ್ಮೃತಿಯಲ್ಲಿ ತಿಳಿಸಿದೆ. ವಾಯುಪುರಾಣವೂ ಭವಿಷ್ಯ ಮೊದಲಾದ ಇತರ ಪುರಾಣಗಳೂ ಇವನ್ನೇ ಬೇರೆ ಬೇರೆ ಮಾತುಗಳಲ್ಲಿ ನಿರೂಪಿಸಿದೆ.

ಈ ಹತ್ತರ ಗುಂಪಿನಲ್ಲಿ ಇಲ್ಲಿ ಕ್ಷಮೆ ಎನ್ನುವುದನ್ನು ಎತ್ತಿಕೊಳ್ಳೋಣ. ಜೈನ ಧರ್ಮದ ಹಿನ್ನೆಲೆಯಲ್ಲಿ ನೋಡಿದರೆ, ಶರೀರಸ್ಥಿತಿಗಾಗಿ ಮುನಿಗಳು ಬೇರೆಯವರ ಮನೆಗಳಿಗೆ ಚರಿಗೆಗೆ ಸುತ್ತುವಾಗ ದುಷ್ಟಜನ ಅವರ ಮೇಲೆ ಕೆರಳಬಹುದು, ಅಪಹಾಸ್ಯ ಮಾಡಬಹುದು, ಉಪಾಸೀನವಾಗಿ ಕಾಣಬಹುದು, ಕಡೆಗೆ ಬಡಿಯಲೂ ಕೊಲ್ಲಲೂ ಮುಂದಾಗಬಹುದು ; ಇಂಥ ಸಂದರ್ಭಗಳಲ್ಲಿ ಕಲುಷಭಾವನೆ ಹುಟ್ಟದಿರುವುದೇ ಕ್ಷಮೆ ಎನಿಸುತ್ತದೆ.

ಇದು ಬಾಲಚಂದ್ರನವೇ ವಿವರಣೆ. ಇವನ್ನು ಕಷ್ಟಪಟ್ಟು ಸಂಯಮದಿಂದ ಸಾಧಿಸ ಬೇಕಾಗುತ್ತದೆ.

ತೀರ್ಥಂಕರರ ಚರಿತೆಗಳನ್ನು ನೋಡಿದರೆ, ಒಬ್ಬೊಬ್ಬ ತೀರ್ಥಂಕರನೂ ತನ್ನ ಪೂರ್ವಜನ್ಮಗಳಲ್ಲಿ ತನಗೆ ಆಗದವರಿಂದ ಘೋರವಾದ ಕಷ್ಟಗಳನ್ನು ಅನುಭವಿಸಿ, ಅವಕ್ಕೆ ಪ್ರತಿಕ್ರಿಯೆ ಪ್ರತಿಭಟನೆಗಳೇನನ್ನೂ ಸೂಚಿಸದೆ, ಕ್ಷಮಾಬುದ್ಧಿಯಿಂದ ನಡೆದುಕೊಂಡು, ಮುಂದಿನ ಜನ್ಮಗಳಲ್ಲಿ ಉತ್ತಮಸ್ಥಿತಿಗೆ ಏರುವುದನ್ನು ನಿದರ್ಶಿಸುವ ಕಥನಗಳು ಬಂದಿರುತ್ತವೆ. ಉಪಸರ್ಗಕೇವಲಿಗಳೆಂಬವರ ಕಥೆಗಳಲ್ಲಂತೂ ಇದು ತುಂಬ ಸಾಮಾನ್ಯವಾದ ನೋಟ. ಇವೆಲ್ಲ ತಿತಿಕ್ಷೆಯ ಎಂದರೆ ಸಹಿಷ್ಣುತೆಯ ಕಥೆಗಳು, ಕ್ಷಮೆಯ ಕಥೆಗಳು. ತಿತಿಕ್ಷೆ, ಕ್ಷಮೆ ಇವು ಒಂದೇ ನಾಣ್ಯದ ಎರಡು ಮುಖಗಳು. ಬಗೆದ ಕೇಡನ್ನು ತಾಳಿಕೊಳ್ಳುವುದು, ಕೇಡು ಬಗೆದವರ ವಿಷಯದಲ್ಲಿ ತಪ್ಪನ್ನೆಣಿಸದಿರುವುದು ಇವು ಘನವಾದ ಆಶಯಗಳು ; ಇಷ್ಟರಲ್ಲಿಯೇ ಇದು ಮುಗಿಯದೆ, ಕೇಡು ಬಗೆದವರಿಗೆ ಒಳ್ಳೆಯದನ್ನೇ ಹಾರೈಸುವುದು, ಒಳ್ಳೆಯದನ್ನೇ ಮಾಡುವುದು ಸಾಧ್ಯವಾದಾಗ ಅದು 'ಕ್ಷಮೆ' ಎಂಬ ಧರ್ಮದ ಲಕ್ಷಣ. ಸಾಕ್ರಟೀಸ್, ಕ್ರಿಸ್ತ, ಬುದ್ಧ, ಗಾಂಧಿ ಮೊದಲಾದವರು ಈ ಧರ್ಮವನ್ನು ಅನುಷ್ಠಿಸಿ ದೊಡ್ಡವರಾದರು. ಒಂದು ಕಪೋತಪಕ್ಷಿಯಲ್ಲಿಯೂ ಈ ಗುಣವನ್ನು ಆವಾಹಿಸಿ, ಭಾರತೀಯ ಸಂಸ್ಕೃತಿ ಜೀವರಾಶಿಗಳೆಲ್ಲಕ್ಕೂ ಈ ಗುಣ ಅನ್ವಯಿಸುವಂತೆ ಮಾಡಿದೆ.

ಮನುಷ್ಯನಿಗೆ ರೂಪ ಭೂಷಣ, ರೂಪಕ್ಕೆ ಗುಣ ಭೂಷಣ, ಗುಣಕ್ಕೆ ಜ್ಞಾನವೂ ಜ್ಞಾನಕ್ಕೆ ಕ್ಷಮೆಯೂ ಭೂಷಣಗಳೆಂದು ಒಂದು ಸುಭಾಷಿತ ಸಾರುತ್ತದೆ. ಭಾಗವತ ಹೇಳುತ್ತದೆ : "ಕ್ಷಮೆಯಿಂದ ಮನುಷ್ಯನ ಮುಖದ ಕಾಂತಿ ಸೂರ್ಯನ ಪ್ರಭೆಯಂತೆ ಬೆಳಗುತ್ತದೆ. ಸರ್ವೇಶ್ವರನಾದ ಪರಮಾತ್ಮನು ಕ್ಷಮೆಯುಳ್ಳವರಲ್ಲಿ ಬಹಳ ಬೇಗ ಸಂತೋಷಪಡುತ್ತಾನೆ." ಮಹರ್ಷಿಗಳಾದವರು ಮಂದಬುದ್ಧಿಗಳು ಮಾಡಿದ ಅಪರಾಧಗಳನ್ನು ಕ್ಷಮಿಸುವುದರಿಂದ ಅವರ ಆತ್ಮಗಳನ್ನು ಉದ್ಧರಿಸುವುದು ಮಾತ್ರವಲ್ಲದೆ, ತಾವು ಸಹ ಶುದ್ಧರಾಗುತ್ತಾರೆ ಎನ್ನುವುದು ನಮ್ಮ ಸಂಸ್ಕೃತಿಯ ನಂಬಿಕೆ. ಸೇಡು ಹಾಗೂ ಹಿಂಸೆಯ ಭಾವನೆಗಳು ವಿನಾಶಕಾರಿಯಾದವು, ತಿತಿಕ್ಷೆ ಕ್ಷಮೆಗಳು ಅಭ್ಯುದಯಕಾರಿಯಾದವು ಎನ್ನುವುದನ್ನು ಸಂತರು ತಮ್ಮ ಜೀವನ ಸಾಧನೆಗಳಿಂದ ಸಾಧಿಸಿ ತೋರಿದ್ದಾರೆ ; ಕರ್ಮ ಮರಿಹಾಕುವುದನ್ನು ತಪ್ಪಿಸಲು ಕ್ಷಮೆಯೊಂದೇ ಪಥ್ಯವಾದ ಮಾರ್ಗವೆಂಬುದಾಗಿ ಸಾರಿದ್ದಾರೆ.

ನಿಜ. ಆದರೆ 'ಆಪಸ್ತಂಬ ಸ್ಮೃತಿ'ಯಲ್ಲಿ "ಕ್ಷಮಾನ್ವಿತರಲ್ಲಿ ಒಂದು ದೋಷವುಂಟು. ಜನ ಅವರನ್ನು ಕೈಯಲ್ಲಾಗದವರು ಎಂದು ಭಾವಿಸುತ್ತಾರೆ. ಇದು ಹೊರತು ಅವರಲ್ಲಿ ಬೇರೆ ಯಾವ ದೋಷವೂ ಇಲ್ಲ" ಎಂದು ಹೇಳುವಾಗ, ಕ್ಷಮೆಯನ್ನು ಒಂದು ಮೌಲ್ಯವಾಗಿ ತಿಳಿಯದೆ ದೌರ್ಬಲ್ಯವಾಗಿ ತಿಳಿಯುವ ಲೋಕಾರೂಢಿ ಎಂದೂ ಇರುವಂಥವೇ ಎಂಬುದು ವಿದಿತವಾಗುತ್ತದೆ. ಮಹಾಭಾರತದ ಉದ್ಯೋಗಪರ್ವ

ದಲ್ಲಿಯೂ ಇಂಥದೇ ಮಾತುಂಟು : "ಕ್ಷಮಾಶೀಲರಲ್ಲಿ ಒಂದು ದೋಷವುಂಟು. ಮತ್ತಾವುದೂ ದೋಷವಿಲ್ಲ. ಕ್ಷಮಾಶೀಲನನ್ನು ಜನ ಅಸಮರ್ಥನೆಂದು ತಿಳಿಯುತ್ತಾರೆ. ಆದರೆ ಈ ದೋಷವೇನೂ ಗಮನಾರ್ಹವಲ್ಲ. ಕ್ಷಮೆಯೇ ಉತ್ತಮ ಬಲ. ಅದು ಅಶಕ್ತರಿಗೆ ಗುಣ, ಶಕ್ತರಿಗಾದರೋ ಭೂಷಣ." ಹೀಗೆ ವ್ಯಾಖ್ಯಾನಿಸುವಾಗ, ಶಕ್ತನ ಕ್ಷಮೆಗೆ ಬೆಲೆ ಹೆಚ್ಚು ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

II ಪರೋಪದೇಶ ಪಾಂಡಿತ್ಯ

ಪರೋಪದೇಶ ಪಾಂಡಿತ್ಯ ಎಂಬ ಒಂದು ಸೊಗಸಾದ ಮಾತಿದೆ. ತಾನೇ ಪ್ರಶ್ನಾರ್ಹವಾದ ಅಥವಾ ಚಿಂತಾಜನಕವಾದ ಪರಿಸ್ಥಿತಿಯಲ್ಲಿದ್ದರೂ ಇನ್ನೊಬ್ಬನಿಗೆ ಅಪ್ರಾರ್ಥಿತವಾಗಿ ಸಲಹೆ ಸಮಾಧಾನ ಉಪದೇಶಗಳನ್ನು ನೀಡಲು ಉತ್ಸಾಹ ತೋರಿಸುವ ಒಂದು ಪ್ರವೃತ್ತಿಗೆ ಹೀಗೆ ಹೇಳಲಾಗುತ್ತದೆ. ಈ ಪ್ರವೃತಿ ನಿಜವಾಗಿ ಒಂದು ದೌರ್ಬಲ್ಯ. ಸಮಯದಲ್ಲಿ ನಮ್ಮನ್ನು ಒಬ್ಬ ಸಾಲ ಕೇಳಿದನೆಂದು ಇಟ್ಟುಕೊಳ್ಳೋಣ. ಸಾಧ್ಯವಿದ್ದರೆ ನಾವು ಸಾಲ ಕೊಡಬಹುದು. ನಮಗೆ ಅನುಕೂಲವಾಗದಿದ್ದರೆ ಇಲ್ಲ ಎನ್ನಬಹುದು. ಆದರೆ ನಮ್ಮಲ್ಲಿ ಅನೇಕರು ಸಹಾಯ ಅಪೇಕ್ಷಿಸುವಾತನಿಗೆ 'ಸಾಲ ಮಾಡಬಾರದು, ಮಾಡಿದರೆ ಅನೇಕ ಕಷ್ಟಗಳು ಬರುತ್ತವೆ' ಮುಂತಾಗಿ ಉಪದೇಶನೀಡುತ್ತೇವೆ. ಅಲ್ಪತೃಪ್ತಿ ಮಿತವ್ಯಯಗಳ ಬಗ್ಗೆ ಉಪನ್ಯಾಸ ಮಾಡುತ್ತೇವೆ. ಇದರಿಂದ ಸಾಲ ಕೇಳಲು ಬಂದವನ ಸದ್ಯದ ಕಷ್ಟವೇನೂ ಪರಿಹಾರವಾಗದೆ, ಅವನು ದುಗುಡದ ಮೋರೆ ಮಾಡಿಕೊಂಡು ಮತ್ತೊಬ್ಬನಲ್ಲಿಗೆ ಹೋಗುತ್ತಾನೆ. ಸ್ವಲ್ಪ ಕಾಲದ ಬಳಿಕ, ನಮಗೇ ಸಾಲ ಕೇಳಬೇಕಾದ ಅನಿವಾರ್ಯ ಒದಗಿದಾಗ, ನಮ್ಮ ಪರೋಪದೇಶ ಪಾಂಡಿತ್ಯ ಪಲಾಯನದ ಹಾದಿ ಹಿಡಿದಿರುತ್ತದೆ.

ಸಂಸಾರದ ಕಷ್ಟನಷ್ಟಗಳು ತಪ್ಪಿದ್ದಲ್ಲ, ಸಾವು ನೋವುಗಳು ಬಿಟ್ಟಿದ್ದಲ್ಲ. ಇನ್ನೊಬ್ಬರಿಗೆ ಇವು ತೀವ್ರವಾಗಿ ಘಟಿಸಿದಾಗ ನಾವು ಸಹಾನುಭೂತಿ ವ್ಯಕ್ತಮಾಡಿ, ಸಂತಾಪ ಸೂಚನೆಯ ಹೊಳೆಹರಿಸಿ ಜೀವನವೇದಾಂತವನ್ನೂ ಪ್ರಕೃತಿಧರ್ಮವನ್ನೂ ಉಪದೇಶಿಸಲು ತೊಡಗುತ್ತೇವೆ ; ದುಃಖವನ್ನು ಭರಿಸುವಂತೆ ಕೇಳಿಕೊಳ್ಳುತ್ತೇವೆ. ನಾವೇ ಕಷ್ಟನಷ್ಟಗಳ, ಸಾವು ನೋವುಗಳ ಸುಳಿಗೆ ಸಿಕ್ಕಿದಾಗ, ತರಗೆಲೆಗಳಂತೆ ತತ್ತರಿಸಿ ಹೋಗುತ್ತೇವೆ. ನಾವು ಬೇರೆಯವರಿಗೆ ಬೋಧಿಸಿದ ಯಾವ ಉಪದೇಶವೂ ಈಗ ನಮ್ಮ ದುಃಖವನ್ನು ತಡೆಯಲಾರದು. 'ಪೇಟೆಯ ಹೋಟೆಲುಗಳ ತಿಂಡಿತೀರ್ಥಗಳು ಆರೋಗ್ಯಕ್ಕೆ ಒಳ್ಳೆಯದಲ್ಲ ಎಂಬುದಾಗಿ ಧಾರಾಳವಾಗಿ ಬೇರೆಯವರಿಗೆ ಹೇಳುತ್ತಿರುತ್ತೇವೆ : ನಾವೇ ಅಲ್ಲಿಯ ತಿಂಡಿತೀರ್ಥಗಳ ಚಾಪಲ್ಯವನ್ನು ಗೆಲ್ಲಲಾರದೆ ಅಲ್ಲಿಗೆ ಆಗಾಗ ಹೋಗುತ್ತಿರುತ್ತೇವೆ.

ದಾರಿದ್ರ್ಯದ ಬಗ್ಗೆ ಕನಲುತ್ತೇವೆ ; ಅದನ್ನು ವರಿಸಿದ ದರಿದ್ರರಿಗಾಗಿ ಶ್ರಮಿಸುವ ಘೋಷಣೆಗಳನ್ನು ಮಾಡುತ್ತೇವೆ. ಹಾಗೆ ಕನಲುತ್ತಲೇ ಘೋಷಿಸುತ್ತಲೇ ಶ್ರೀಮಂತಿಕೆಯ ಕನಸನ್ನು ಕಾಣುತ್ತಿರುತ್ತೇವೆ ; ಶ್ರೀಮಂತರಾಗಲು ಹಂಬಲಿಸುತ್ತಿರುತ್ತೇವೆ. ದಲಿತ

ದುರ್ಬಲರ ಬಗ್ಗೆ ಮರುಗುತ್ತೇವೆ ; ಮರುಗುತ್ತಲೇ, ಒಳಗೊಳಗೆ ಅವರ ವಿಷಯದಲ್ಲಿ ಅಸಹನೆ ಔದಾಸೀನ್ಯಗಳನ್ನು ತೋರಿಸುವುದೇ ಅಲ್ಲದೆ ಅವರಿಗೆ ಶಾಪವನ್ನೂ ಹಾಕುತ್ತೇವೆ. ವರದಕ್ಷಿಣೆ, ಸ್ತ್ರೀದಾಸ್ಯ, ಅನಕ್ಷರತೆ, ಕೋಮುವಿದ್ವೇಷ, ಅಸಮಾನತೆ, ಅಸ್ಪೃಶ್ಯತೆ ಮುಂತಾದ ಸಾಮಾಜಿಕ ಪಿಡುಗುಗಳ ಬಗ್ಗೆ ಸುದೀರ್ಘ ಉಪನ್ಯಾಸಗಳನ್ನು ಮಾಡುತ್ತಿರುವ, ಹೋರಾಡುವುದಾಗಿ ಪಣ ತೊಡುತ್ತಿರುವ ನಾವೇ ಈ ಪಿಡುಗುಗಳು ಇನ್ನೂ ಭಯಾನಕವಾಗಿ ಹಬ್ಬುವ ಹಾಗೆ ಕಟ್ಟಿಗೆಯೊಟ್ಟಿ, ಬೆಂಕಿ ಹಚ್ಚಿ, ಗಾಳಿಯನ್ನೂ ಊದುತ್ತೇವೆ. ಹೀಗೆ ಪರೋಪದೇಶ ಪಾಂಡಿತ್ಯದ ಧುರಧೀರರಾದ ನಾವು ಪ್ರಕಟವಾಗಿ ರಹಸ್ಯವಾಗಿ ಈ ಕೆಲಸಗಳಲ್ಲಿ ತೊಡಗುತ್ತೇವೆ.

ಕಥಾಕಾಲಕ್ಷೇಪದಲ್ಲಿ ಭಕ್ತಾದಿಗಳಿಗೆ ರಾಶಿರಾಶಿ ದೈವಭಕ್ತಿ ಧರ್ಮಶ್ರದ್ಧೆ ನೀತಿ ನಿಯಮಗಳನ್ನು ಬೋಧಿಸುವವರೂ, ಭವಿಷ್ಯವಾದಿ ಜ್ಯೋತಿಷಿಗಳೂ ತಮ್ಮ ಸ್ವಂತ ಬದುಕಿನಲ್ಲಿ ಹೇಗೆ ಬದುಕು ಮಾಡುವರೆಂಬುದೂ ನಮಗೆ ತಿಳಿದಿದೆ. ಬಹುಜನ ಬದುಕುವುದು ನಾಲಗೆಯ ಬಲದಿಂದ, ಪರೋಪದೇಶ ಪಾಂಡಿತ್ಯದಿಂದ. "ಉದರನಿಮಿತ್ತಂ ಬಹುಕೃತವೇಷಂ" ಎಂಬುದೇ ಇವರ ಧ್ಯೇಯವಾಕ್ಯ. ದೇಶದ ಉದ್ಧಾರ ಉನ್ನತಿಗಳ ವಿಚಾರದಲ್ಲಿ ಜನರ ಯೋಗಕ್ಷೇಮದ ವಿಷಯದಲ್ಲಿ ನಾನಾ ವೇದಿಕೆಗಳ ಮೇಲಿಂದ ಗಾಡಿಗಟ್ಟಲೆ ಮಾತನಾಡಿ, ಮೊಸಳೆಕಣ್ಣೀರು ಹರಿಸುವ, ಭರವಸೆಗಳ ಸರಮಾಲೆಯನ್ನೇ ಹೆಣೆದು ನೊಂದವರ ಕೊರಳಿಗೆ ತೊಡಿಸುವ ಸಮಾಜಸೇವಕರು ಜನಸೇವಕರೆಂಬವರ ಕಥೆಯನ್ನು ಹೇಳುವುದೇ ಬೇಡ. ಏನನ್ನೂ ತಿಳಿಯದವನು ಸಹ, ತಾನು ಹೇಳುವುದನ್ನು ಗಟ್ಟಿಯಾಗಿ ಹೇಳುತ್ತಿದ್ದನೆಂದರೆ, ಅದನ್ನು ಕೇಳಿ ಮೂರ್ಖರು ಹಾಗೆ ಹೇಳುವವನ ವಿಷಯದಲ್ಲಿ ಬಹುವಾಗಿ ಗೌರವ ತೋರಿಸುವರೆಂದೂ ವಿದ್ವಾಂಸರಿಗೆ ಕೂಡ ಅದು ಸರಿಯಿರಬೇಕು ಎಂಬ ಭಾವನೆ ಹುಟ್ಟುವುದೆಂದೂ ಒಂದು ಅನ್ಯೋಕ್ತಿಯಿದೆ. ಎಂದರೆ ಚತುರನಾದ ವ್ಯಕ್ತಿ ಪರೋಪದೇಶ ಪಾಂಡಿತ್ಯದಿಂದ ಮೂರ್ಖರನ್ನೂ ವಿದ್ವಾಂಸರನ್ನೂ ಒಂದೇ ರೀತಿಯಲ್ಲಿ ಮರುಳು ಮಾಡಬಲ್ಲ ಎಂದಾಯಿತು. "ನೀತಿ ಬಲ್ಲವರಿದ್ದಾರೆ, ನಿಯಮ ತಿಳಿದವರಿದ್ದಾರೆ ವೇದಜ್ಞರೂ ಶಾಸ್ತ್ರಜ್ಞರೂ ಸಿಕ್ಕುತ್ತಾರೆ. ಅಷ್ಟೇಕೆ ? ಬ್ರಹ್ಮಜ್ಞರೂ ದೊರೆಯುತ್ತಾರೆ. ಆದರೆ ತನ್ನದೇ ಅಜ್ಞಾನವನ್ನು ತಿಳಿದವರು ಮಾತ್ರ ತೀರ ವಿರಳ" ಎಂಬುದು ಅಪ್ಪಯ್ಯ ದೀಕ್ಷಿತರ ಮಾತು. ನಮ್ಮನ್ನು ನಾವು ತಿಳಿಯುವುದು ಕಷ್ಟ ; ಇನ್ನೊಬ್ಬರಿಗೆ ಉಪದೇಶ ಮಾಡುವುದು ಸುಲಭ. ಇದು ಲೋಕರೂಢಿ.

III ಮನುಷ್ಯನ ಹೆಚ್ಚುಗಾರಿಕೆ

ನಮ್ಮ ನೀತಿ ನಿಲವುಗಳು ನಡೆನುಡಿಗಳು ಎಷ್ಟು ಸಂಕೀರ್ಣವಾದವು ಎಂದರೆ ನಾವು ಸಜ್ಜನರು ಎಂದು ತಿಳಿದವರು ಸಜ್ಜನರಾಗಿರುವುದಿಲ್ಲ, ದುರ್ಜನರು ಎಂದು ತಿಳಿದವರಲ್ಲಿ ಸಜ್ಜನಿಕೆಯ ಲಕ್ಷಣಗಳು ಆಶ್ಚರ್ಯಕರವಾಗಿ ಕಂಡುಬರುತ್ತವೆ. ಸಬಲರು ದುರ್ಬಲರನ್ನು ತುಳಿಯುವುದು ಸಹಜ ಎಂದುಕೊಂಡರೆ ದುರ್ಬಲರೇ ಸಬಲರನ್ನು ದಿಕ್ಕು ಕೆಡಿಸುವ

ಸಂದರ್ಭಗಳು ಹುಟ್ಟಿಕೊಳ್ಳಬಹುದು. ಸರಳವಾದ ವ್ಯವಹಾರವನ್ನು ಗೋಜಾಗುವಂತೆ ಜಟಿಲಗೊಳಿಸಿ, ಜಟಿಲವಾದ ವ್ಯವಹಾರ ತನ್ನಿಂದ ತಾನೇ ಸರಳಗೊಳ್ಳುವ ಹಾಗೆ ವಿದ್ಯಮಾನಗಳನ್ನು ರೂಪಿಸಿಬಹುದು. ದಿಟವನ್ನು ಸಟಿಮಾಡಿ, ಸಟಿಯೇ ದಿಟವೆಂದು ತೋರುವಂತೆ ಮಾಡಬಹುದು. ಅಪನಂಬಿಕೆಯ ಉಯ್ಯಾಲೆಯಲ್ಲಿ ತೂಗುತ್ತಿರುವ ಗಳಿಗೆಯಲ್ಲಿ ನಂಬುಗೆಯ ಭರವಸೆಯನ್ನು ಹುಟ್ಟಿಸಬಹುದು ; ನಂಬಿ ನೆಮ್ಮದಿಯಲ್ಲಿರುವಾಗ ದ್ರೋಹ ಬಗೆಯಲೂಬಹುದು. ಕಳ್ಳನಲ್ಲಿ ಕರುಣೆಯ ಸೆಲೆಯನ್ನೂ ಸಂತನಲ್ಲಿ ಸೋಗಿನ ಬಲೆಯನ್ನೂ ಗುರುತಿಸಬಹುದು.

ಇವೆಲ್ಲ ಮಾನವ ಸ್ವಭಾವದ ವೈಪರೀತ್ಯಗಳೂ ಮಾನವನಿಗೆ ದೈವದತ್ತವಾಗಿರುವ ಇಲ್ಲವೆ ಜೀವವಿಕಾಸದ ಫಲವಾಗಿರುವ ಬುದ್ಧಿಯ ಆಟದ ಪರಿಣಾಮ ಎನ್ನುವುದು ನಮಗೆಲ್ಲ ತಿಳಿದುದೇ ಆಗಿದೆ. ಜೀವಕೋಟಿಯ ಅತ್ಯುನ್ನತ ಸೃಷ್ಟಿಯಾದ ಮನುಷ್ಯ ತನ್ನ ಚಿಂತನೆ ಸಾಧನೆಗಳಿಂದ ಲೋಕಕಲ್ಯಾಣವನ್ನು ಸಾಧಿಸಬಹುದು ; ಇಷ್ಟಪಟ್ಟರೆ ಲೋಕವನ್ನು ವಿನಾಶದ ಪ್ರಪಾತಕ್ಕೆ ಬೀಸಿ ಎಸೆಯಬಹುದು.

ಪ್ರಕೃತಿಯ ಕೂಸಾಗಿ ಹುಟ್ಟಿದ ಮನುಷ್ಯ ಪ್ರಕೃತಿಯನ್ನು ತಿಳಿಯಲೆಂದೂ ತಿಳಿದು ಸಂತೋಷಿಸಲೆಂದೂ, ಸಂತೋಷಿಸುತ್ತಲೇ ಜೀವಿಸುವುದೆಂದೂ ಮಾತ್ರವೇ ಉದ್ದೇಶಿಸಿದ್ದರೆ ಹೀಗೆ ವೈಪರೀತ್ಯಗಳು ಉಂಟಾಗುತ್ತಿರಲಿಲ್ಲವೆಂದು ತೋರುತ್ತದೆ. ಇದಕ್ಕೆ ಪ್ರತಿಯಾಗಿ ಪ್ರಕೃತಿಯನ್ನು ಕೆಣಕಲೆಂದೂ ಕೆರಳಿಸಲೆಂದೂ, ಗೆಲ್ಲಲೆಂದೂ ಗೆದ್ದು ಆಳಲೆಂದೂ ಅವನು ನಿರಂತರವಾಗಿ ಪ್ರಯತ್ನಿಸುತ್ತಿರುವುದೇ ಅವನ ಅಪಖ್ಯಾತಿಗೂ ಅವನತಿಗೂ ಕಾರಣವೆಂದು ತೋರುತ್ತದೆ. ತಿಳಿದೋ, ತಿಳಿಯದೆಯೋ ಅವನು, ಈ ಲೋಕವೆಂಬ ದೇವರ ಮನೆಯನ್ನು ಕುಟ್ಟಿ ಕೆಡಹುವುದರಲ್ಲಿಯೇ ಹೆಚ್ಚು ಉತ್ಸುಕನಾಗಿರುವಂತಿದೆ. ಇದನ್ನು ನೋಡಿದಾಗ, ಪ್ರಕೃತಿಯ ಸಹಜ ಶಿಶುಗಳಾದ ಕಲ್ಲು ಮಣ್ಣು, ಮರ ಗಿಡ, ಹೊಳೆ ಹೊನಲು, ಬೆಟ್ಟಗುಡ್ಡ, ಸಾಗರ ಸರೋವರ, ಪಶುಪಕ್ಷಿಗಳು ಮನುಷ್ಯನಿಗಿಂತ ಉದಾತ್ತವೆಂದೂ ಅತಿಶಯವೆಂದೂ ತೋರಿದರೆ, ಅದರಲ್ಲಿ ಆಶ್ಚರ್ಯವೇನಿಲ್ಲ.

ಒಂದು ಸುಭಾಷಿತ ಹೀಗೆ ಹೇಳುತ್ತದೆ : "ಕಲ್ಲು ಸಹ ದೇವತೆಗಳೇ ಸರಿ. ಏಕೆಂದರೆ ಅವು ದ್ವೇಷಿಸುವುದಿಲ್ಲ, ಯಾಚಿಸುವುದಿಲ್ಲ ; ಇನ್ನೊಬ್ಬರನ್ನು ನಿಂದಿಸುವುದಿಲ್ಲ, ಕರೆಯದೆ ಬರುವುದಿಲ್ಲ". ಹೀಗೆ ಮಾಡುವವರು ಮನುಷ್ಯರು ತಾನೇ ? ಮನುಷ್ಯರು ಕಲ್ಲಿಗಿಂತ ಕಡೆ ಎಂದು ತಾನೇ ಇದರ ಅರ್ಥ ? ಇನ್ನೊಂದು ಸುಭಾಷಿತ ಹೇಳುವುದು ನೋಡಿ : "ದಾನವೀರ ಎಂದು ಹೇಳಬಹುದಾದ ಮರಕ್ಕೆ ನಮಸ್ಕಾರಗಳು. ಏಕೆಂದರೆ ಹೂವು ಹಣ್ಣು ಎಲೆಗಳ ಭಾರವನ್ನು ಅದು ಹೊರುತ್ತದೆ. ಬೇಸಗೆಯ ಬೇಗೆಯನ್ನೂ ಚಳಿಯ ಬಾಧೆಯನ್ನೂ ಸಹಿಸುತ್ತದೆ. ಬೇರೆಯವರ ಸುಖಕ್ಕಾಗಿ ತನ್ನ ಶರೀರವನ್ನು ಅರ್ಪಿಸುತ್ತದೆ." ಇದರ ಅಭಿಪ್ರಾಯವೇನು ? ಸುಖಾಪೇಕ್ಷಿಯಾದ ಮನುಷ್ಯ ತನ್ನ ಹೊಣೆಹೊರೆಗಳನ್ನು ಬೇರೆಯವರ ಮೇಲೆ ಹೊರಿಸಿ ತಾನು ಜಾರಿಕೊಳ್ಳಲು ಇಷ್ಟಪಡುತ್ತಾನೆ. ಪ್ರಕೃತಿಯ ವಿಲಾಸವಾದ ಸೆಖೆ ಚಳಿಗಳನ್ನು ತಾಳಿಕೊಳ್ಳುವ ಸಹಿಷ್ಣುತೆ ಅವನಿಗಿಲ್ಲ. ದಾರಿಗರಿಗೂ

ಪಶುಪಕ್ಷಿಗಳಿಗೂ ತಂಪುನೆರಳನ್ನು ಚೆಲ್ಲುವ, ಕಾಲಕಾಲಕ್ಕೆ ಹೂಹಣ್ಣು ನೀಡುವ, ಕಟ್ಟಡದ ತೊಲೆಯಾಗಿ ಒಲೆಗೆ ಉರುವಲಾಗಿ ತನ್ನ ದೇಹವನ್ನೇ ಮಾನವರ ಸುಖಕ್ಕೆ ಒಪ್ಪಿಸುವ ಮರದ ಔದಾರ್ಯ ಬುದ್ಧಿಜೀವಿ ಮಾನವನಿಗಿಲ್ಲ. ಹೊಳೆಯ ನೀರು, ಹಸುಗಳ ಹಾಲು, ಸಾಗರಗರ್ಭದ ರತ್ನಗಳು, ಭೂಗರ್ಭದ ಖನಿಜ ದ್ರವ್ಯಗಳು ಎಲ್ಲಾ ಪರೋಪಕಾರಕ್ಕಾಗಿ ತಾನೇ !

ಚಿಕ್ಕ ವಯಸ್ಸಿನಲ್ಲಿ ಕುಡಿದ ಸ್ವಲ್ಪ ನೀರನ್ನು ನೆನೆದು ತೆಂಗು ತಲೆಹೊರೆಯನ್ನು ತಾಳಿಕೊಂಡು ಬದುಕಿರುವವರೆಗೂ ರುಚಿಯಾದ ಎಳನೀರು ಕೊಡುತ್ತದೆ. ಬೆಳಗುವ ಚಂದ್ರ ಸೂರ್ಯರಾಗಲಿ, ಅರಿಗಳಿಗೆಯೋ ಆದರೂ ಕಾಡಿನಲ್ಲಿ ಅರಳಿ ಪರಿಮಳಿಸಿ ಉರುಳಿ ಬೀಳುವ ಕಾಡುಹೂವಾಗಲಿ ಶುದ್ಧ ನಿರ್ವ್ಯಾಜ ಪ್ರಕೃತಿವ್ಯಾಪಾರಗಳೇ. "ಇಟ್ಟರೆ ಸಗಣಿಯಾದೆ, ತಟ್ಟಿದರೆ ಕುರುಳಾದೆ, ಸುಟ್ಟರೆ ನೊಸಲಿಗೆ ವಿಭೂತಿಯಾದೆ" ಎಂಬುದಾಗಿ ತನ್ನ ಪ್ರಯೋಜನವನ್ನು ಹೇಳಿಕೊಂಡು "ನೀನಾರಿಗಾದೆಯೋ ಎಲೆ ಮಾನವಾ" ಎಂದು ಒಂದು ಗೋವು ನಮ್ಮನ್ನು ಪ್ರಶ್ನಿಸಿದರೆ, ಅದಕ್ಕೆ ನಮ್ಮ ಆತ್ಮವನ್ನು ವಂಚಿಸದೆ ಉತ್ತರ ಕೊಡಲು ಸಾಧ್ಯವೇ ? ಒಂದಗುಳು ಕಂಡರೆ ತನ್ನ ಬಳಗವನ್ನೆಲ್ಲಾ ಕೂಗಿ ಕರೆಯುವ ಕಾಗೆ ಹೆಚ್ಚೋ, ಮೊದಲು ತಾನು ಉಂಡು ಬಳಿಕ ಬಳಗವನ್ನು ನೆನೆಯುವ ಮನುಷ್ಯ ಹೆಚ್ಚೋ ? ಉಂಡ ಮನೆಯಲ್ಲಿ ಒಡೆಯನಿಗೆ ಅಡಿಯಾಳಂತೆ ಇರುವ ಕುನ್ನಿ ಹೆಚ್ಚೋ, ಉಂಡ ಮನೆಯ ಗಳು ಹಿರಿಯುವ ಮನುಷ್ಯ ಹೆಚ್ಚೋ ? ಕಾಗೆ ಕುನ್ನಿಗಳೂ "ನೀನಾರಿಗಾದೆಯೋ ಎಲೆ ಮಾನವಾ" ಎಂಬುದಾಗಿ ಪ್ರಶ್ನಿಸಿದರೆ, ಮಾನಿಷ್ಠನಾದ ಈ ಮಾನವ ಏನು ಉತ್ತರ ಹೇಳಬಹುದು ? ಬಾಯಿಲ್ಲದ ಅವು ಪ್ರಶ್ನಿಸುವುದಿಲ್ಲ ಎಂದು ಅವನಿಗೆ ಗೊತ್ತು. ಆದ್ದರಿಂದ ಅವನಿಗೆ ಭಯವಿಲ್ಲ. ಕಲ್ಲು ಮರ ಮುಂತಾಗಿ ಅಚೇತನಗಳು, ಹಸು ಕಾಗೆ ಮುಂತಾಗಿ ಮೂಕಜಂತುಗಳು ಪ್ರಕೃತಿಯ ಸಹಜಶಿಶುಗಳಾಗಿ ಬದುಕುವುದರಿಂದ, ಆ ಬದುಕಿನಲ್ಲಿ ಸಂತೋಷ ಸಾಮರಸ್ಯಗಳನ್ನು ಕಾಣುವುದರಿಂದ, ಅವು ಪ್ರಕೃತಿಯ ಸಹಜಲಕ್ಷಣಗಳನ್ನು ಪ್ರಕಟಿಸುತ್ತವೆ. ಮಾನವನಿಗೂ ಅದು ಸಾಧ್ಯ ; ಆದರೆ ಅವನ ಬುದ್ಧಿ ಅದನ್ನು ಆಗಗೊಡುವುದಿಲ್ಲ.

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

—o—

ಮಾನವಿಕ ಕರ್ಣಾಟಕ

ವಿಜ್ಞಾನ ಕರ್ಣಾಟಕ

ಪ್ರಬುದ್ಧ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ನಾಲ್ಕು ರೂಪಾಯಿ
ಇತರರಿಗೆ	....	ಆರು ರೂಪಾಯಿ
ಸಂಸ್ಥೆಗಳಿಗೆ	....	ಎಂಟು ರೂಪಾಯಿ

(ಆಜೀವ ಸದಸ್ಯತ್ವ : ನೂರು ರೂಪಾಯಿಗಳು)
(ಪ್ರತಿಯೊಂದಕ್ಕೂ)

ಡೈರೆಕ್ಟರ್
'ಪ್ರಸಾರಾಂಗ'
ಮಾನಸಗಂಗೋತ್ರಿ, ಮೈಸೂರು–೫೭೦ ೦೦೬